ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 1 ಸಂಚಿಕೆ 12


ಆಗಸ್ಟ್ 19, 2007

ರೂ. 5/-




ಸ್ವಾತಂತ್ರ್ಯದ 60 ವರ್ಷಗಳು

ಪರಿವರ್ತನೆಯ ಮಹಾಹೋರಾಟ



ರೈತರ ಆತ್ಮಹತ್ಯೆ ಪ್ಯಾಕೇಜ್ ಕ್ರೂರ ಅಪಹಾಸ್ಯ



ನೆರೆಹಾವಳಿ

ಕೊಚ್ಚಿಹೋದ ಬದುಕು

ಅಸಂಘಟಿತ ಕಾರ್ಮಿಕರ ಯಶಸ್ವಿ ಮುಷ್ಕರ



ಪಾಕಿಸ್ತಾನ: ತುರ್ತುಪರಿಸ್ಥಿತಿ ಹೇರಲಾದೀತೆ?

ವಿಜಾಪುರ : ರೇವತಿಯ ಬಾಳವ್ಯಥೆ ಗಂಡನ ನೀಚಕಥೆ

'ಪರ್ಯಾಯ ಮಾಧ್ಯಮದ ಅವಶ್ಯಕತೆ ಜರೂರಿದೆ'

ಜನಶಕ್ತಿ ಬಿಡುಗಡೆ ಮಾಡಿದ ಖ್ಯಾತ ಪತ್ರಕರ್ತ ಬಿ.ವಿ.ಸೀತಾರಾಂ ಆಶಯ

'ನೆಲದ ನಿಜ ನೆಲೆಯಲ್ಲಿ ನಿಂತು ಜನತೆಯ ಹಿತವನ್ನು ಎತ್ತಿಹಿಡಿಯುವ ಧೋರಣೆ ಮತ್ತು ಮಾನವೀಯ ಕಳಕಳಿಯನ್ನು ಅಳವಡಿಸಿಕೊಂಡು ಸಾಗುವ ಪರ್ಯಾಯ ಮಾಧ್ಯಮವೊಂದರ ಅವಶ್ಯಕತೆ ಇಂದು ಅತ್ಯಂತ ತುರ್ತಾಗಿ ಬೇಕಿದೆ' ಎಂದು ಖ್ಯಾತ ಹಿರಿಯ ಪತ್ರಕರ್ತರಾದ ಬಿ.ವಿ. ಸೀತಾರಾಂರವರು ಹೇಳಿದರು.

ಕರಾವಳಿ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ಪತ್ರಿಕೆಯಾದ 'ಕರಾವಳಿ ಅಲೆ' ಯ ಸಂಸ್ಥಾಪಕ ಸಂಪಾದಕರೂ ಆಗಿರುವ ಬಿ.ವಿ.ಸಿ. ಯವರು 'ಜನಶಕ್ತಿ' ಯ ಈ ವಾರದ ಸಂಚಿಕೆಯನ್ನು ಉಡುಪಿಯಲ್ಲಿ ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ವಿಶ್ವಾಸಾರ್ಹತೆ

'ಮಾಧ್ಯಮದಲ್ಲಿನ ಕೋಮುವಾದೀಕರಣ, ವಾಣಿಜ್ಯೀಕರಣವನ್ನು ತಡೆಗಟ್ಟಲು ಶ್ರಮಿಸಬೇಕಾಗಿದೆ. ಅಂತಹ ಧೋರಣೆಗಳಿಂದಾಗಿ ದುಡಿವ ಜನರ ಹಿತಾಸಕ್ತಿಗಳು ಮಾಧ್ಯಮಗಳಲ್ಲಿ ಪ್ರತಿಫಲನಗೊಳ್ಳುತ್ತಿಲ್ಲ. ಕರ್ನಾಟಕದ ನಂ.1 ಪತ್ರಿಕೆ ಎಂಬುದು ಈಗ ಆರ್.ಎಸ್.ಎಸ್.ನ ಮುಖವಾಣಿಯಾಗಿ ಮಾರ್ಪಾಡಾಗಿದೆ. ವ್ಯವಸ್ಥೆಯಲ್ಲಿನ ಕ್ರೌರ್ಯ, ಶೋಷಣೆ ಅಸಮಾನತೆ, ಮತ್ತು ಭ್ರಷ್ಟಾಚಾರಗಳ ವಿರುದ್ಧ ರಾಜಿ ಇಲ್ಲದೆ ಧ್ವನಿ ಎತ್ತುವ, ಸಾಮಾನ್ಯ ಜನರ ಆತಂಕ ಆಶಯ ಮೊಳಗಿಸುವ ವಿಶ್ವಾಸಾರ್ಹ ಪತ್ರಿಕೆಯಾಗಿ ಬೆಳೆಯಲು ಅಸ್ಪದವಿದೆ. ಅಂತಹ ದಿನ ಪತ್ರಿಕೆಗೆ ಈಗ ಸಕಾಲ ಎಂದರು.

ಇಂದು ದೇಶದಲ್ಲಿ ಸಿಪಿಐ(ಎಂ) ಒಳಗೊಂಡು ಎಡಪಕ್ಷಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿವೆ. ಉದ್ಯೋಗ ಸೃಷ್ಟಿಸುವ ಆರ್ಥಿಕ ನೀತಿಗಾಗಿ ಒತ್ತು ನೀಡುತ್ತಿದೆ. ಸನ್ನಿವೇಶವೂ ಬದಲಾಗಿದೆ. ಸಿಪಿಐ(ಎಂ) ಪಕ್ಷವು ನಕ್ಸಲೀಯರು ಪ್ರತಿಪಾದಿಸುವ ಅತಿರೇಕ, ದುಸ್ಸಾಹಸವಾದವನ್ನು ಮತ್ತು ಎಲ್ಲಾ ಬಗೆಯ ಕೋಮುವಾದ ಮೂಲಭೂತವಾದವನ್ನು ವಿರೋಧಿಸುತ್ತಿದೆ. ಎಡಪಂಥೀಯ ಚಿಂತನೆ, ಶಕ್ತಿ ದುರ್ಬಲವಾಗಿರುವ ಕರ್ನಾಟಕದಲ್ಲಿ ಪತ್ರಿಕೆಗೆ ವಿಶಿಷ್ಟ ಸ್ಥಳಾವಕಾಶವಂತೂ ಇದೆ. ಕೇರಳ, ತಮಿಳುನಾಡುಗಳಲ್ಲಿ ನಿರ್ದಿಷ್ಟ ರಾಜಕೀಯ ಪಕ್ಷಗಳ ಪತ್ರಿಕೆಗಳೇ ಲಕ್ಷಾಂತರ ಮಾರಾಟವಾಗುತ್ತಿರುವುದನ್ನು ಗಮನಿಸಬೇಕು' ಎಂದರು.

'ಕರ್ನಾಟಕದಲ್ಲಿ 6 ಕೋಟಿಗೂ ಅಧಿಕ ಜನರಿರುವಾಗ, ಅದರಲ್ಲಿ ದುಡಿಯುವ ವರ್ಗವೇ ಬಹುಪಾಲು ಇರುವಾಗ ಇಂತಹ ಪತ್ರಿಕೆಗೆ ಯಾಕೆ ಭವಿಷ್ಯವಿಲ್ಲ' ಎಂದು ಪ್ರಶ್ನಿಸಿದರು. ಜನಶಕ್ತಿಯಲ್ಲಿನ ವಿಷಯ, ವಸ್ತು, ವಿನ್ಯಾಸ ಉತ್ತಮವಾಗಿದ್ದು, ಭರವಸೆ ಹುಟ್ಟಿಸುತ್ತಿದೆ. ಅದು ಇನ್ನೊಂದು ಪತ್ರಿಕೆಯಾಗಿರುವುದನ್ನು ನಿರಾಕರಿಸುತ್ತಿದೆ. ಪತ್ರಿಕೆಗೆ ಭವಿಷ್ಯವಿದ್ದು, ದುಡಿವ ಜನರ ಮುಖವಾಣಿಯಾಗಿ ಬೆಳೆಯಲಿ ಎಂದು ಹಾರೈಸಿದರು.

ತಮ್ಮ ಪತ್ರಿಕಾ ಕಛೇರಿಯನ್ನು ಧ್ವಂಸಗೊಳಿಸಿದಾಗ ನಂತರ ತಮ್ಮನ್ನು ಹಾಗೂ ಪತ್ನಿಯ ಮೇಲೆ, ಸುಳ್ಳು ಮೊಕದ್ದಮೆ ಹೂಡಿ ಬಂಧನ ಸತ್ರ ನಡೆಸುತ್ತಿರುವಾಗ ಮುಖ್ಯವಾಹಿನಿ ಮಾಧ್ಯಮ ಗಳೆಂಬ ಸಮೂಹ ಮಾಧ್ಯಮದ ಸಮುದಾಯ ಅದರ ವಿರುದ್ಧ ದನಿ ಎತ್ತಲಿಲ್ಲ ಎಂದು ಉದಾಹರಣೆಯನ್ನು ನೀಡಿದರು.

ಕಾರ್ಪೊರೇಟ್ ಮೀಡಿಯಾ

'ನಮ್ಮ ದೇಶದ ಬಡ ಜನರು, ರೈತರ ಆತ್ಮಹತ್ಯೆಗಳ ಬಗ್ಗೆ ಪ್ರಮುಖ ಮಾಧ್ಯಮಗಳು ನಿರ್ಲಕ್ಷಿಸಿವೆ. ಆ ಸಂಗತಿಗಳನ್ನು ಹೆಕ್ಕಿ ಎತ್ತಿ ತೋರಿಸಿದ ಪಿ.ಸಾಯಿನಾಥ್‌ಗೆ ಮ್ಯಾಗ್ಸೆಸೆ ಪ್ರಶಸ್ತಿ ಬಂದಿದೆ' ಎಂದು ಮಾತನ್ನಾರಂಭಿಸಿದ ಮಣಿಪಾಲ್ ಇನ್ಸ್‌ಟಿಟ್ಯೂಟ್ ಆಫ್ ಕಮ್ಯುನಿಕೇಷನ್ಸ್ ಸಂವಹನ ವಿಭಾಗದ ಪ್ರಾಧ್ಯಾಪಕರಾದ ವರದೇಶ ಹಿರೆಗಂಗೆಯವರು ಪತ್ರಿಕೆ, ಟಿ.ವಿ.ಯಂತಹ ಸಮೂಹ ಮಾಧ್ಯಮಗಳ ಧೋರಣೆಗಳ ಬಗ್ಗೆ ವಿಶೇಷವಾಗಿ ಬೆಳಕು ಚೆಲ್ಲಿದರು, 'ಜರ್ನಲಿಸಂ' ನ ಧೋರಣೆಯಲ್ಲಿ ಬದಲಾವಣೆ ಆಗಿದೆ. ಪ್ರಸಿದ್ಧ ಆಂಗ್ಲ ದಿನಪತ್ರಿಕೆಯೊಂದರ ಮಾಲೀಕವರ್ಗ ನಾವಿರುವುದು ಜಾಹಿರಾತು ವ್ಯಾಪಾರ ಮಾಡಲು ಹೊರತು ಸುದ್ದಿಯ ಪ್ರಸಾರಕರಾಗಿ ಅಲ್ಲ ಎಂದು ಹೇಳಿದೆ. ಮೇಲಿರಿಮೆಯಿಂದ ಬೀಗುವ ಈ ಮುಖ್ಯ ಪ್ರವಾಹದ ಮಾಧ್ಯಮಗಳು ಸರ್ಕಾರ ಯಾವುದಿರುತ್ತೋ ಆ ಕಡೆಗೆ ವಾಲುತ್ತವೆ. ಇಂದು ಕಾರ್ಪೊರೇಟ್ ಕ್ಷೇತ್ರದೊಂದಿಗೆ ಮಾಧ್ಯಮ ಬೆಸೆದಿದೆ. ಮಾಧ್ಯಮ ಕಾಲೇಜ್‌ಗಳಲ್ಲಿ ತಯಾರಾಗುವ ಬಹಳಷ್ಟು ವಿದ್ಯಾರ್ಥಿಗಳನ್ನು ಅಂತಹ ಕಂಪನಿಗಳು ಕೆಲಸಕ್ಕೆ ಸೇರಿಸಿಕೊಳ್ಳುತ್ತವೆ ಎಂದು ಉದಾಹರಿಸಿದರು. ಮಾಧ್ಯಮಗಳು ಅತಿ ಹೆಚ್ಚು ವಾಣಿಜ್ಯೀಕರಣ, ಕೋಮುವಾದೀಕರಣದತ್ತ ಸಾಗುತ್ತಿವೆ. ಕನಿಷ್ಠ ನಾಗರೀಕ ಮೌಲ್ಯಗಳನ್ನು ಗಾಳಿಗೆ ತೂರುತ್ತಿದ್ದು, ಓದಲಾಗದಂತಹ ರೀತಿಯಲ್ಲಾಗುತ್ತಿದೆ. ಅಂತಹ ಬರಹಗಾರರೇ ಜನಪ್ರಿಯ ಅಂಕಣರಾಗುತ್ತಿರುವುದು ಅಪಾಯಕರ ಎಂದರು. ಜನಶಕ್ತಿ ಇದಕ್ಕೆ ಭಿನ್ನವಾಗಿ ಹೊರಬರುವ ಭರವಸೆ ಮೂಡಿಸಿದೆ ಎಂದರು. ಜನಶಕ್ತಿ ನೊಂದವರ ನಿಟ್ಟುಸಿರಾದಲ್ಲಿ ಖಂಡಿತ ಬೆಳೆಯಲಿದೆ ಎಂದು ಶುಭ ಹಾರೈಸಿದರು.

ಅತಿಥಿಗಳಾಗಿದ್ದ ಖ್ಯಾತ ವಕೀಲ ಯಶವಂತ ಮರೋಳಿ, ಪತ್ರಿಕೆ ಸಂಪಾದಕ ಎಸ್.ವೈ. ಗುರುಶಾಂತ್ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ವಿಶ್ವನಾಥ ರೈ ವಹಿಸಿದ್ದರು. ಪ್ರಸ್ತಾವನೆಯ ಮೂಲಕ ಚಿಂತಕ ಆದಮಾರು ಶ್ರೀಪತಿ ಆಚಾರ್ಯ ಸ್ವಾಗತಿಸಿದರೆ, ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯ ಹಾಗೂ ಸಿಪಿಐ(ಎಂ)ಜಿಲ್ಲಾ ಕಾರ್ಯದರ್ಶಿ ಕೆ.ಶಂಕರ್ ಧನ್ಯವಾದ ಅರ್ಪಿಸಿ ಮಾತನಾಡಿದರು. ಈ ಸಮಾರಂಭ ಲಯನ್ಸ್ ಕ್ಲಬ್ ಸಭಾಂಗಣದಲ್ಲಿ ಆಯೋಜಿತವಾಗಿತ್ತು




ವಾರದ ಸಂಚಿಕೆ ಬಿಡುಗಡೆ ಸಂದರ್ಭ: ಎ.ಎಸ್. ಆಚಾರ್ಯ, ವಿಶ್ವನಾಥ ರೈ, ಬಿ.ವಿ.ಸಿ., ಹಿರೆಗಂಗೆ, ಎಸ್.ವೈ.ಜಿ. ಕೆ.ಶಂಕರ್

ಉತ್ಸಾಹ ತೋರಿದ ಜನತೆ

ಸಂಜೆ 4 ಆಗುತ್ತಿರುವಾಗ ಸಭಾಂಗಣದಲ್ಲಿ ಅಷ್ಟೇನು ಜನರಿಲ್ಲ. ವಿಪರೀತವಾಗಿ ಸುರಿವ ಮಳೆಯಿದ್ದುದರಿಂದ ಏನಾಗುವುದೋ ಎಂಬ ಆತಂಕ. ಆದರೆ 4.20 ಆಗುತ್ತಿರುವಾಗ ಹಾಲ್‌ನಲ್ಲಿಯ ಕುರ್ಚಿಗಳು ತುಂಬಿದವು. ಈ ಸಮಾರಂಭಕ್ಕೆ ಬುದ್ಧಿಜೀವಿಗಳು ಹಿರಿಯ ನಾಗರೀಕರು, ವಿಮಾ, ಬ್ಯಾಂಕ್, ಟೆಲಿಫೋನ್ ಉದ್ಯೋಗಿಗಳು, ವಿವಿಧ ಕೈಗಾರಿಕೆಗಳ ಕಾರ್ಮಿಕರು, ವಿದ್ಯಾರ್ಥಿ ಯುವಜನ, ಮಹಿಳೆಯರು ಹೀಗೆ ವಿವಿಧ ವಿಭಾಗಗಳಿಂದ ಆಗಮಿಸಿದ್ದರು. ಇಡೀ ಸಮಾರಂಭ, ಮುಗಿಯುವವರೆಗೂ ಆಸಕ್ತಿಯಿಂದ ಸ್ಪಂದಿಸಿದರು. 'ಜನಶಕ್ತಿ' ಯು ಬೆಳೆಯುವುದು ಇಂತಹ ಜನಶಕ್ತಿಯಿಂದ ಅಲ್ಲವೇ?

ಕಾಮ್ರೇಡ್ ಡಿ.ಎಂ. ಕಲಾಸಿ ಇನ್ನಿಲ್ಲ



ಹಿರಿಯ ಕಾರ್ಮಿಕ ಮುಖಂಡರೂ, ಸಿಪಿಐ(ಎಂ) ಪಕ್ಷದ ವಿಜಾಪುರ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಆಗಿದ್ದ ಕಾಮ್ರೇಡ್ ದಸ್ತಗೀರ್‌ಸಾಬ್ ಮಲ್ಲಿಕ್‌ಸಾಬ್ ಕಲಾಸಿ ಅವರು 9ನೇ ಆಗಸ್ಟ್ 2007ರಂದು ಬಾಗಲಕೋಟೆಯಲ್ಲಿ ನಿಧನರಾದರು. ಅವರಿಗೆ 79 ವರ್ಷ ವಯಸ್ಸಾಗಿತ್ತು.

ಕಾಮ್ರೇಡ್ ಕಲಾಸಿಯವರು 8ನೇ ನವಂಬರ್ 1928ರಂದು ಬಾಗಲಕೋಟೆಯಲ್ಲಿ ಒಂದು ಬಡ ಮುಸಲ್ಮಾನ ಕುಟುಂಬದಲ್ಲಿ ಜನಿಸಿದ್ದರು. ಪದವಿ ಪೂರ್ವ ಶಿಕ್ಷಣವನ್ನು ಮುಗಿಸಿದ ಅವರಿಗೆ ಅಂಚೆ ಇಲಾಖೆಯಲ್ಲಿ ನೌಕರಿ ಸಿಕ್ಕಿತ್ತು. ಕರ್ನಾಟಕದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಕಟ್ಟಿ ಬೆಳೆಸಿದ ಮೊದಲಿಗರಲ್ಲಿ ಒಬ್ಬರೂ, ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ಕಾಮ್ರೇಡ್ ಎನ್.ಕೆ. ಉಪಾಧ್ಯಾಯರು ವಿಜಾಪುರವನ್ನು ಕೇಂದ್ರವಾಗಿಸಿ, ಉತ್ತರ ಕರ್ನಾಟಕದಲ್ಲಿ ನಡೆಸುತ್ತಿದ್ದ ಹೋರಾಟಗಳಿಂದ ಪ್ರಭಾವಿತರಾಗಿ, ತಮ್ಮ ನೌಕರಿಗೆ ರಾಜೀನಾಮೆ ಕೊಟ್ಟು ಕಾಮ್ರೇಡ್ ಕಲಾಸಿಯವರು ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಸಕ್ರಿಯ ಕಾರ್ಯಕರ್ತರೂ ಆದರು. ಕಾಮ್ರೇಡ್ ಎನ್.ಕೆ. ಉಪಾಧ್ಯಾಯರ ಜೊತೆಯಲ್ಲಿ ಗೋವಾ ವಿಮೋಚನಾ ಚಳುವಳಿಯಲ್ಲಿ, ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಅವರು ಭಾಗವಹಿಸಿದ್ದರು. ಅನೇಕ ಜನ ಚಳುವಳಿಗಳಲ್ಲಿ ಭಾಗವಹಿಸಿದ್ದ ಅವರು ಬಂಧಿಸಲ್ಪಟ್ಟು ಜೈಲು ವಾಸ ಅನುಭವಿಸಿದ್ದರು. ಸಿಪಿಐ ಪಕ್ಷ ವಿಭಜನೆಯಾದ ನಂತರ ಅವರು ಸಿಪಿಐ(ಎಂ) ನೊಂದಿಗೆ ಗುರುತಿಸಿಕೊಂಡರು.

ನೌಕರಿಯನ್ನು ಬಿಟ್ಟು ಬಂದ ನಂತರ ಅವರು ಕಾಮ್ರೇಡ್ ಉಪಾಧ್ಯಾಯರ ಮಾರ್ಗದರ್ಶನದಲ್ಲಿ ಟಾಂಗಾ ಓಡಿಸುವವರನ್ನು, ಬೀಡಿ ಕಾರ್ಮಿಕರನ್ನು, ಪೌರ ಕಾರ್ಮಿಕರನ್ನು, ದಿನಗೂಲಿ ನೌಕರರನ್ನು ಬಾಗಲಕೋಟೆ ಸಿಮೆಂಟ್ ಕಾರ್ಮಿಕರನ್ನು ಸಂಘಟಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರು. ಕೈಮಗ್ಗದ ನೇಕಾರರ ಸಂಘಟನೆಯಲ್ಲಿಯೂ ಅವರು ಸಕ್ರಿಯವಾಗಿದ್ದರು. ಕೆಲವು ವರ್ಷಗಳ ಕಾಲ ಅವರು ಸಿಐಟಿಯು ರಾಜ್ಯ ಜನರಲ್ ಕೌನ್ಸಿಲ್ ಸದಸ್ಯರಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ಅವರು ಸಿಐಟಿಯು ನೇತೃತ್ವದಲ್ಲಿ ಗ್ರಾಮ ಪಂಚಾಯತ್ ನೌಕರರನ್ನು ಸಂಘಟಿಸುವಲ್ಲಿ ಆಸಕ್ತಿ ವಹಿಸಿದ್ದರು. ಗ್ರಾಮ ಪಂಚಾಯತ್ ನೌಕರರ ವಿಜಾಪುರ ಜಿಲ್ಲಾ ಸಮಿತಿಯ ಅಧ್ಯಕ್ಷರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು.

ಕಾಮ್ರೇಡ್ ಕಲಾಸಿ ಅವರ ಅಂತಿಮ ಯಾತ್ರೆಯಲ್ಲಿ ಸಿಪಿಐ(ಎಂ)ಪಕ್ಷದ ಕಾರ್ಯಕರ್ತರು ವಿವಿಧ ಸಾಮೂಹಿಕ ಸಂಘಟನೆಗಳ ಸದಸ್ಯ ಅಲ್ಲದೆ ಕಾಮ್ರೇಡ್ ಕಲಾಸಿ ಅವರ ಅಭಿಮಾನಿಗಳ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಕಾಮ್ರೇಡ್ ಕಲಾಸಿ ಅವರ ಪಾರ್ಥಿವ ಶರೀರದ ಮೇಲೆ ಅವರು ತಮ್ಮ ಜೀವನದುದ್ದಕ್ಕೂ ಎತ್ತಿ ಹಿಡಿದ ಕೆಂಪು ಬಾವುಟವನ್ನು ಹೊದಿಸಲಾಗಿತ್ತು.

ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ಪಕ್ಷದ ರಾಜ್ಯ ಸಮಿತಿಯ ಸದಸ್ಯರೂ ವಿಜಾಪುರ ಜಿಲ್ಲಾ ಮುಖಂಡರೂ ಆಗಿರುವ ಭೀಮಸಿ ಕಲಾದಗಿ ಅವರು ವಹಿಸಿಕೊಂಡಿದ್ದರು. ಸಿಪಿಐ(ಎಂ)ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯ ನಿತ್ಯಾನಂದಸ್ವಾಮಿ, ರಾಜ್ಯ ಸಮಿತಿ ಸದಸ್ಯರಾದ ಕಾಮ್ರೇಡ್ ವಿ.ಪಿ. ಕುಲಕರ್ಣಿ ಹಾಗೂ ಪಕ್ಷದ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಅಣ್ಣಾರಾಯ ಈಳಿಗೇರ, ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಮುಖಂಡರಾದ ಕುಂಬಾರ್ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪಕ್ಷದ ವಿಜಾಪುರ ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಎಂ.ಎನ್. ಸೊನ್ನದ, ಸುರೇಖಾ ರಜಪೂತ ಹಾಗೂ ರಾಮದುರ್ಗ ಸಮಿತಿಯ ಸದಸ್ಯರಾದ ಗೈಬು ಸಾಬ್ ಜೈನೆಖಾನ್ ಉಪಸ್ಥಿತರಿದ್ದರು. ಜನಶಕ್ತಿ ವಾರ ಪತ್ರಿಕೆಯು ಡಿ.ಎಂ.ಕಲಾಸಿ ಅವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿದೆ. ಅವರ ಕುಟುಂಬದ ದುಃಖದಲ್ಲಿ ಭಾಗಿಯಾಗಿದೆ.



ತುಂಡುಭೂಮಿ ಕೇಳಿದವರ ಎದೆಗೆ ಗುಂಡು ಹೊಡೆದ ರಾಜಶೇಖರರೆಡ್ಡಿ ಸರ್ಕಾರ ಜನರ ನಿಟ್ಟುಸಿರು, ಆಕ್ರೋಶದಲ್ಲಿ ಕೊಚ್ಚಿಹೋದೀತು.

- **ಶ್ರೀನಿವಾಸ ರೆಡ್ಡಿ**, ಮುಳುಬಾಗಿಲು

★

ಕ್ರೂರ ಕಾನೂನುಗಳಿದ್ದಷ್ಟು ಪ್ರಜಾಪ್ರಭುತ್ವಕ್ಕೆ ದೊಡ್ಡ ಬೆದರಿಕೆಯೇ. ಡಾ. ಹನೀಫ್ ಪ್ರಕರಣ ಕುರಿತು ಲೇಖನ ಎಚ್ಚರಿಕೆಯ ಗಂಟೆಯೂ ಹೌದು.

- **ಅಬ್ದುಲ್ ರಶೀದ್**, ಸಿದ್ದಾಪುರ

★

ದಂಧೆಕೋರರಿಗೆ ಬದುಕು ಅಡವು ಇಡಲು ತಿರಸ್ಕರಿಸುತ್ತಿರುವ ನಂದಗುಡಿ ಜನರ ಹೋರಾಟದ ನಿಜ ಚಿತ್ರಣ ಉತ್ತಮವಾಗಿದೆ.

- **ನಂಜೇಗೌಡ.ಬಿ.**, ಹೆಚ್.ಕ್ರಾಸ್(ನಂದಗುಡಿ)

★

ಎಲ್ಲವೂ ಇದ್ದು ಇಲ್ಲದಂತಾಗಿರುವ ಉಡುಪಿ ಜಿಲ್ಲೆಯ ಸ್ಥಿತಿ ಬದಲಾವಣೆಗೆ ಹೋರಾಟ ಬೆಳೆಯಬೇಕು. ಲೇಖನಕ್ಕೆ ಧನ್ಯವಾದಗಳು

- **ಭಾಸ್ಕರರಾವ್**, ಉಡುಪಿ

ಸಂಪಾದಕೀಯ

ಆತ್ಮಹತ್ಯೆ ಪ್ಯಾಕೇಜ್ ಕ್ರೂರ ಅಪಹಾಸ್ಯ

ಭಾರತದ ಪ್ರಧಾನಿ ಮನಮೋಹನ ಸಿಂಗ್ ನೇತೃತ್ವದ ಕೇಂದ್ರ ತಂಡವು ಇತ್ತೀಚೆಗೆ (ಆಗಸ್ಟ್ 3) ರಾಜ್ಯಕ್ಕೆ ಭೇಟಿ ನೀಡಿರುವುದು ಮಹತ್ವದ ಅಂಶವಾಗಿದೆ. ರೈತರ ಆತ್ಮಹತ್ಯೆಯನ್ನು ತಡೆಯಲೆಂದೇ ಅತೀ ಹೆಚ್ಚಿನ ಆತ್ಮಹತ್ಯೆಗಳಾಗುತ್ತಿರುವ ಮಹಾರಾಷ್ಟ್ರ (ವಿದರ್ಭ) ಕರ್ನಾಟಕ, ಕೇರಳ ರಾಜ್ಯಗಳಿಗೆ ಒಂದು ವಿಶೇಷವಾದ ಹಣಕಾಸಿನ ಪ್ಯಾಕೇಜ್‌ನ್ನು ಕಳೆದ ಅಕ್ಟೋಬರ್‌ನಲ್ಲಿ ಪ್ರಧಾನಿ ಘೋಷಿಸಿದ್ದರು. ಈ 'ವಿಧರ್ಬಾ ಪ್ಯಾಕೇಜ್' ಎನ್ನಲಾಗುವ ಇದರಡಿಯಲ್ಲಿ ಒದಗಿಸಲಾದ ಹಣಕಾಸು ಖರ್ಚಿನ ಬಗ್ಗೆ ವಿಮರ್ಶಿಸಲು ಈ ಸಭೆ ಸೇರಿತ್ತಾದರೂ ನೀಡಿದ ಹಣವೇ ಅತ್ಯಲ್ಪವಿರುವಾಗ ಅದರ ಜಾರಿ ವಿಮರ್ಶೆಗೆ ಅರ್ಥವೇನಿದೆ ಎಂಬ ಪ್ರಶ್ನೆ ಸಹಜವಾದುದೇ.

ಈಗ ಘೋಷಿತವಾದ 16,000 ಕೋಟಿ ರೂ. ಹಣದಲ್ಲಿ ರಾಜ್ಯದ ಪಾಲು 2689 ಕೋಟಿಯಾದರೂ ದೊರೆತದ್ದು 75ಕೋಟಿ. ಪರಿಸ್ಥಿತಿ ಗಂಭೀರ ಇರುವಾಗಲೂ ಪೂರ್ತಿ ಹಣ ಯಾಕೆ ಬಿಡುಗಡೆ ಮಾಡಲಿಲ್ಲ? ಮತ್ತು ಪ್ರಧಾನಿಗಳು ಈ ಮೊದಲೇ ಯಾಕೆ ವಿಮರ್ಶೆಗೆ ಬರಲಿಲ್ಲ ಎಂಬುದು ಮುಖ್ಯ ಪ್ರಶ್ನೆ.



ಕರ್ನಾಟಕ ಸರ್ಕಾರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾಯ್ದೆಗೆ ತಿದ್ದುಪಡಿ ತಂದ ನಂತರವೇ ರಾಜ್ಯಕ್ಕೆ ಪ್ರಧಾನಿಗಳು ಬಂದು ಪ್ಯಾಕೇಜ್‌ನ ಹಣವನ್ನು ಬಿಡುಗಡೆ ಮಾಡಲು ಮುಂದಾಗಿದ್ದಾರೆ. ಕೇಂದ್ರದ ಈ ಬ್ಲಾಕ್ ಮೇಲ್‌ನಿಂದಾಗಿ ತಿದ್ದುಪಡಿಗಳನ್ನು ತರಾತುರಿಯಲ್ಲಿ ಅಂಗೀಕರಿಸಿದ್ದಕ್ಕೆ 'ಜಾ-ಕೋ' ಸರ್ಕಾರಕ್ಕೆ ಕೇಂದ್ರಸರ್ಕಾರ ನೀಡಿದ ಶಹಬಾಸ್‌ಗಿರಿಯ ಬಹುಮಾನವಿದು. ಹಾಗೆಯೇ ಈ ಹಿಂದೆ ಕೃಷಿಯ ಕತ್ತು ಕೊಯ್ಯುವ 'ಕೃಷಿ ನೀತಿ'ಯನ್ನು ಅಂಗೀಕರಿಸಿದ್ದು ಕೇಂದ್ರಸರ್ಕಾರದ ದಬಾವಣೆಯಿಂದಲೇ. ಎಪಿಎಂಸಿ ಕಾಯ್ದೆ ತಿದ್ದುಪಡಿ ವಿರುದ್ಧ ರಾಜ್ಯದಲ್ಲಿ ನಡೆದ ಪ್ರತಿಭಟನೆ ಹಿನ್ನೆಲೆಯಲ್ಲಿ 'ತಿದ್ದುಪಡಿ ವಾಪಸು ಅಸಾಧ್ಯ'. ಅದನ್ನು ಅಂಗೀಕರಿಸಿ ಜಾರಿ ಮಾಡದಿದ್ದರೆ ಕೇಂದ್ರ ಸರ್ಕಾರ ಹಣಕಾಸು ನೆರವು ಸಿಗುವುದಿಲ್ಲ, ಎಂದು ಸ್ವತಃ ಮುಖ್ಯಮಂತ್ರಿಗಳೇ ಒಂದು ಸಂದರ್ಭದಲ್ಲಿ ಆಡಿರುವುದು ಇದಕ್ಕೆ ಜ್ವಲಂತ ಸಾಕ್ಷಿಯಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿನಾಶಕಾರಿ ಆರ್ಥಿಕ ನೀತಿಗಳನ್ನು ಜಾರಿಗೊಳಿಸುತ್ತಾ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ವಾತಾವರಣ ನಿರ್ಮಿಸುತ್ತಿದೆ. ಇನ್ನೊಂದೆಡೆ 'ಸಾಂತ್ವನ'ದ ಪ್ಯಾಕೇಜ್ ಘೋಷಿಸುವುದು ಮಹಾ ದ್ರೋಹವಾಗಿದೆ.


ದೇಶದಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಆತ್ಮಹತ್ಯೆಗೀಡಾಗುತ್ತಿರುವ ವಿದರ್ಭದಲ್ಲಿ ಆತ್ಮಹತ್ಯೆಯ ಪ್ಯಾಕೇಜ್ ಪ್ರಕಟಿಸಿದ ನಂತರವೂ ಅದನ್ನು ತಡೆಯಲಾಗಿಲ್ಲ. ವಿದರ್ಭದಲ್ಲಿ ಕಳೆದ ಒಂದು ವರ್ಷದಲ್ಲಿ 597 ಪ್ರಕರಣಗಳು ಘಟಿಸಿದ್ದರೆ, ಪ್ಯಾಕೇಜ್ ನಂತರ ಅದು ಎರಡಷ್ಟಾಗಿರುವುದು ಪ್ಯಾಕೇಜ್‌ನ ಟೊಳ್ಳುತನವನ್ನು ಬಹಿರಂಗಪಡಿಸಿದೆ. ಈಗ ಗುರುತಿಸಲಾದ ಆತ್ಮಹತ್ಯೆಯ ತೀವ್ರತೆ ಇರುವ ಒಟ್ಟು 31 ಜಿಲ್ಲೆಗಳಲ್ಲಿ ಕರ್ನಾಟಕದ ಬೆಳಗಾಂ, ಶಿವಮೊಗ್ಗ, ಹಾಸನ, ಕೊಡಗು, ಚಿತ್ರದುರ್ಗ ಜಿಲ್ಲೆಗಳಲ್ಲಿ ಆತ್ಮಹತ್ಯೆಗಳು ಅತ್ಯಧಿಕವಾಗಿವೆ. ಇಂತಹ ಗಂಭೀರ ಸ್ಥಿತಿಯಿರುವಾಗ ಪ್ಯಾಕೇಜ್ ಪರಿಹಾರದ ಬರೀ ಮಾತುಗಳು ಕೇವಲ ಮೊಸಳೆ ಕಣ್ಣೀರಾಗಿದೆ.

ಇನ್ನೊಂದು ಸಂಗತಿ ಎಂದರೆ ಕೇಂದ್ರದಿಂದ ತುರ್ತು ನಿರ್ವಹಣೆಗೆಂದು ನೀಡಲಾದ 16.05 ಕೋಟಿ ಹಣದಲ್ಲಿ ಒಂದು ನಯಾ ಪೈಸೆಯನ್ನು ಕರ್ನಾಟಕ ಖರ್ಚು ಮಾಡಿಲ್ಲವೆಂದು ವರದಿಯಿದೆ. ಅಲ್ಲದೇ ಈ ಪ್ಯಾಕೇಜ್‌ನ ಜಾರಿಯ ಹೊಣೆ ನೀಡಲಾದ ನೀರಾವರಿ, ತೋಟಗಾರಿಕೆ, ಸಹಕಾರ, ಪಶುಸಂಗೋಪನೆ, ಕೃಷಿ ಇಲಾಖೆಗಳ ನಡುವೆ ಸಮನ್ವಯವೇ ಇಲ್ಲವಾಗಿದೆ. ಅಂದರೆ ನಿಜಕ್ಕೂ ಸರ್ಕಾರದ ಇಚ್ಛೆ ಏನಿದೆ? ಹೀಗಾದರೆ ಪ್ಯಾಕೇಜ್ ಯಾರ ಪಾಕೆಟ್‌ಗೆ ಸೇರಲಿದೆ?

ರೈತರ ಆತ್ಮಹತ್ಯೆಯನ್ನು ನಿಜಕ್ಕೂ ತಡೆಯಬೇಕಿದ್ದಲ್ಲಿ ಮೂಲಭೂತವಾದ ಪರಿಹಾರದ ಕ್ರಮಗಳನ್ನು ಕೈಗೊಳ್ಳಬೇಕಿದೆ. ನಿಚ್ಚಳವಾಗಿ ಕಾಣುವಂತೆ ಸಾಲದ ಬಾಧೆ ಪ್ರಮುಖವಾಗಿ ಖಾಸಗಿ ಲೇವಾದೇವಿಗಾರರ ಹಿಡಿತದಿಂದ ರೈತರನ್ನು ಪಾರು ಮಾಡಬೇಕಿದೆ. ಬ್ಯಾಂಕ್‌ಗಳು ಸಾಲ ನೀಡಲು ನಿರಾಕರಿಸುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ಧಣಿಗಳತ್ತ ಸಾಲದ ಕೂಪಕ್ಕೆ ಹೋಗುವ ಸ್ಥಿತಿ ನಿರ್ಮಾಣವಾಗಿದೆ. ಆದ್ದರಿಂದ ಸರ್ಕಾರವೇ ಹಿಂದಿನ ಒಟ್ಟು ಕೃಷಿ ಸಾಲ ಮನ್ನಾ ಮಾಡುವುದಲ್ಲದೇ ಬಡ್ಡಿ ಹೊರೆ ಇಲ್ಲದೆ ಹೊಸದಾಗಿ ಸಾಲ ನೀಡಬೇಕಿದೆ. ರೈತರು ಬೆಳೆದ ಫಸಲಿಗೆ ಲಾಭದಾಯಕ, ಬೆಂಬಲ ಬೆಲೆ ನೀಡಬೇಕು. ಬೀಜ -ಗೊಬ್ಬರ, ಕ್ರಿಮಿನಾಶಕ, ವಿದ್ಯುತ್ ಒಳಗೊಂಡು ಕೃಷಿ ಅವಶ್ಯಕ ವಸ್ತುಗಳನ್ನು ಸಬ್ಸಿಡಿಯಾಧಾರದಲ್ಲಿ ಒದಗಿಸಬೇಕು. ವಿದೇಶಿ ಕಂಪನಿಗಳ ಕೈಗೆ ಕೃಷಿಯನ್ನು ಒಪ್ಪಿಸುವ, ವಿದೇಶದಿಂದ ಆಮದು ಮಾಡಿಕೊಳ್ಳುವುದು ನಿಲ್ಲಬೇಕು. ಕೃಷಿ ಎಂದರೆ ನಷ್ಟ ಎಂಬುದು ನಿಲ್ಲಬೇಕು.

ಆದರೆ ರಾಜ್ಯಕ್ಕೆ ಬಂದಿದ್ದ ಅರ್ಥಶಾಸ್ತ್ರಜ್ಞರೂ(?) ಆಗಿರುವ ಪ್ರಧಾನಿಗಳು ಇಂತಹ ಯಾವುದೇ ಒಂದು ಕ್ರಮಗಳನ್ನು ಪ್ರಕಟಿಸಲಿಲ್ಲ. ಅವರು ಪ್ರಕಟಿಸಿದ 18 ಕೃಷಿ ಯೋಜನೆಗಳಲ್ಲಿ ಅಂತಹ ಭರವಸೆಗಳೇ ಇಲ್ಲ. ಕೃಷಿ ಹಾಗೂ ಕೃಷಿ ಮಾರುಕಟ್ಟೆಯನ್ನು ಸಂಪೂರ್ಣ ದಿವಾಳಿಯೆಬ್ಬಿಸಿ ಕಾರ್ಪೋರೇಟ್ ಕಂಪನಿಗಳ ಪೂರ್ಣ ಹಿಡಿತಕ್ಕೆ ಒಪ್ಪಿಸುವ ಕೃಷಿ ನೀತಿ, ಎಪಿಎಂಸಿ ಕಾಯ್ದೆ ತಿದ್ದುಪಡಿ ಎದುರಿನಲ್ಲಿ ಈ ಪ್ಯಾಕೇಜ್ ಎಂಬುದು ರೈತರ ಪಾಲಿಗೆ ಒಂದು ಕ್ರೂರ ಅಪಹಾಸ್ಯವೇ ಆಗಿ ಕಾಣುತ್ತಿದೆ.

ಮುಖ್ಯಮಂತ್ರಿ ಇಬ್ಬಂದಿತನದ ಅರ್ಥವೇನು?



ಕೃಷಿ ಉತ್ಪನ್ನ ಮಾರಾಟ ಸಮಿತಿ ಕಾಯ್ದೆಗೆ ಕರ್ನಾಟಕ ಸರ್ಕಾರ ತಂದಿರುವ ತಿದ್ದುಪಡಿಗಳನ್ನು ವಿರೋಧಿಸಿ ರಾಜ್ಯಾದ್ಯಂತ ವರ್ತಕರು ನಡೆಸುತ್ತಿದ್ದ ಮಾರುಕಟ್ಟೆ ಬಂದ್ ಹಿಂತೆಗೆದುಕೊಳ್ಳಲಾಗಿದೆ. ಈ ಯಶಸ್ವಿ ಮುಷ್ಕರದಿಂದಾಗಿ ಮುಖ್ಯಮಂತ್ರಿಯವರು ತಿದ್ದುಪಡಿಯ ಸಾಧಕ ಬಾಧಕಗಳನ್ನು ಚರ್ಚಿಸಲು ಕೃಷಿ ಮಾರುಕಟ್ಟೆ ಸಚಿವರ ದರ್ಶನಾಪುರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸುವುದಾಗಿ ಪ್ರಕಟಿಸಲಾಗಿದೆ.

ವರ್ತಕರ ಮುಷ್ಕರ, ಅದೇ ರೀತಿಯಲ್ಲಿ ರೈತ ಕೂಲಿಕಾರರ, ಹಮಾಲರ ಚಳುವಳಿ ಸರ್ಕಾರದ ಮೇಲೆ ತೀವ್ರತರ ಒತ್ತಡ ನಿರ್ಮಿಸಿತ್ತು. ಆದರೆ ಈಗಾಗಲೇ ತಿದ್ದುಪಡಿಗಳನ್ನು ಅಂಗೀಕರಿಸಿದ್ದ ಸರ್ಕಾರ ಯಾವುದೇ ರೀತಿಯಲ್ಲಿ ಬೇಡಿಕೆ ಪರಿಗಣಿಸಲು ಸಿದ್ಧವಿರಲಿಲ್ಲ. ಈಗಲೂ ಇಲ್ಲ. ಈ ಮುಷ್ಕರ ವಿಫಲಗೊಳ್ಳುವಂತೆ ಹಲವು ತಂತ್ರಗಳನ್ನು ಮಾಡಲಾಯ್ತು. ಕೃಷಿ ತಜ್ಞರೆಂಬುವವರಿಂದ ತಿದ್ದುಪಡಿ ಸಮರ್ಥಿಸುವ ಪ್ರಚಾರವನ್ನು ಸರ್ಕಾರ ನಡೆಸಿತಲ್ಲದೇ, ಅಂತಿಮವಾಗಿ ಬಂದ್ ಕೈಬಿಟ್ಟು ಕೂಡಲೇ ಮಾರುಕಟ್ಟೆ ವಹಿವಾಟು ಆರಂಭಿಸಬೇಕೆಂದೂ, ಆರಂಭಿಸದಿದ್ದಲ್ಲಿ ವ್ಯವಹಾರದ 'ಲೈಸೆನ್ಸ್' ರದ್ದುಪಡಿಸಬಾರದೇಕೆ ಎಂದು ಬೆದರಿಕೆ ಒಡ್ಡಿತು. ಕೃಷಿಯನ್ನು ಉದ್ಧಾರ ಮಾಡುವುದಾಗಿ ಬೊಗಳೆ ಹೊಡೆಯುವ 'ಕೆಡಿಎಫ್' ಸರ್ಕಾರ ಕೃಷಿ ಹಾಗೂ ಮಾರುಕಟ್ಟೆಯನ್ನು ಕಾರ್ಪೋರೇಟ್ ಕಂಪನಿಗಳ ಕೈಗೆ ಒಪ್ಪಿಸಿ ಅವಕ್ಕೆ ಆಹುತಿ ನೀಡಬಾರದೆಂದು ನಡೆದ ಒಂದು ಪ್ರಜಾಸತ್ತಾತ್ಮಕ ಚಳುವಳಿಯನ್ನು 'ಸ್ವಾಗತಿಸಿದ ರೀತಿ. ಈ ಧ್ವನಿಯೇ ಸಾಕಲ್ಲವೇ. ಯಾರು ಏನಾದರೇನು ತಾನು ಮಾತ್ರ ಕಾರ್ಪೋರೇಟ್ ಕಂಪನಿಗಳ ಪಾದಸೇವೆಗೆ ಸಿದ್ಧ ಎಂಬುದಕ್ಕೆ'.

ವರ್ತಕರ ನಿಯೋಗದೊಂದಿಗೆ ಮಾತನಾಡಿದ ಬಳಿಕ ಬೇಡಿಕೆಗಳ ಬಗ್ಗೆ 'ಸಹಾನುಭೂತಿಯಿಂದ' ಪರಿಶೀಲಿಸುವುದಾಗಿಯೂ, ಅದಕ್ಕಾಗಿ ಒಂದು ಸಮಿತಿ ರಚಿಸುವುದಾಗಿ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿಯೇನೋ ಪ್ರಕಟಿಸಿದರು. ಆದರೆ ಅಂದೇ ಹಾಸನಕ್ಕೆ ಹಾರಿ 'ತಿದ್ದುಪಡಿ ಹಿಂತೆಗೆವ ಪ್ರಶ್ನೆಯೇ ಇಲ್ಲವೆಂದರು' ಇಂತಹ ಇಬ್ಬಂದಿ ಹೇಳಿಕೆ ಯಾಕೆ ಬಂತು. ಅವರೇ, ನಿಯೋಗದವರು ಹೇಳಿದಂತೆ 'ಈ ತಿದ್ದುಪಡಿ ಮಾಡದಿದ್ದರೆ ಕೇಂದ್ರ ಸರ್ಕಾರದ ಗ್ರ್ಯಾಂಟ್ ಹಣ ನಮಗೆ ಸಿಗುವುದಿಲ್ಲ' ಅಂದರೆ ತಿದ್ದುಪಡಿ ತರಲು ಯಾರ ಒತ್ತಡ ಇದೆ ಎಂಬುದು ಸ್ಪಷ್ಟ. ಕೇಂದ್ರಕ್ಕೆ ವಿಶ್ವಬ್ಯಾಂಕ್ ಕಾರ್ಪೋರೇಟ್ ಕಂಪನಿಗಳ ಒತ್ತಡ ಅದಕ್ಕೆ ಕೇಂದ್ರಕ್ಕೆ ಒತ್ತಡ, ಬಹುತೇಕ ರಾಜ್ಯಗಳು ಇದರ ಜಾರಿಗೆ ಉತ್ಸುಕರು. ಇನ್ನು ಕೇಂದ್ರ - ರಾಜ್ಯ ಸರ್ಕಾರಗಳು ಒಂದಾದ ಮೇಲೆ ಜನರ ಪ್ರತಿಭಟನೆಯ ಧ್ವನಿಗೆ ಎಲ್ಲಿ ಜಾಗ?

ಆದ್ದರಿಂದ ಈಗ ಪ್ರತಿಭಟನೆ ಕೇವಲ ಎಪಿಎಂಸಿಯ ಒಂದು ಸಮಸ್ಯೆಯಾಗಿ ಉಳಿದಿಲ್ಲ. ಇದು ರಾಜಕೀಯ ಪ್ರಶ್ನೆಯಾಗಿ ಮಾರ್ಪಟ್ಟಿದೆ. ಅಂದರೆ ಉದಾರೀಕರಣ ಜಾಗತೀಕರಣದ ಆರಾಧಕ ಬಿಜೆಪಿ, ಜೆಡಿ(ಎಸ್)ನ ಅಧಿಕಾರದಿಂದ ಕಿತ್ತೊಗೆಯುವ ಪ್ರಮುಖ ಗುರಿ ಸಾಧನೆಗಾಗಿ ಜನಸಮೂಹಗಳು, ವರ್ತಕರ ಹೋರಾಟ ಮತ್ತೆ ಆರಂಭಿಸುವುದು ಅನಿವಾರ್ಯ.

ಸ್ಥಳೀಯ ಸಂಸ್ಥೆಗಳ ಚುನಾವಣೆ

ಚುನಾವಣೆ ನಡೆಸಲೇಬೇಕೆಂಬ ಆಯೋಗದ ಬಿಗಿಪಟ್ಟನ್ನು ಉಚ್ಚ ನ್ಯಾಯಾಲಯವು ಸಡಿಲಗೊಳಿಸಿತು. ಇದೇ ಆಗಸ್ಟ್ 30 ರಂದು ನಡೆಸಬೇಕೆಂದಿದ್ದ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಾಲ್ಕು ವಾರಗಳ ನಂತರ ನಡೆಸಲು ಸೂಚಿಸುವುದರೊಂದಿಗೆ ಕೆಲವರ ಬಿಗಿ ಉಸಿರು ನಿರಾಳಗೊಂಡಿದೆ. ರಾಜ್ಯದಲ್ಲಿ ನಗರಸಭೆ, ಪುರಸಭೆ, ಮಹಾನಗರ ಪಾಲಿಕೆಯಂತಹ ಸುಮಾರು 163 ಸ್ಥಳೀಯ ಸಂಸ್ಥೆಗಳಿಗೆ ಅವಧಿ ಏಪ್ರಿಲ್‌ನಲ್ಲೇ ಮುಕ್ತಾಯಗೊಂಡಿದೆ. ಅಲ್ಲಿಂದ ಇಲ್ಲಿಗೆ ಎರಡು ಬಾರಿ ಚುನಾವಣೆ ಮುಂದೂಡಲಾಗಿದೆ.

ವಿಪರೀತ ಮಳೆಯಿಂದಾಗಿ ಉಂಟಾಗಿರುವ ನೆರೆ ಹಾವಳಿ, ತಂದ ಅಪಾರ ಹಾನಿ ಸಂಕಷ್ಟದ ಸ್ಥಿತಿ ಒಂದೆಡೆ ಉಂಟಾಗಿದ್ದರೆ, ಹಬ್ಬಗಳ ಕಾರಣದಿಂದ ಪೋಲೀಸ್ ರಕ್ಷಣೆ ಅಸಾಧ್ಯ ಎಂಬುದನ್ನು ನ್ಯಾಯಾಲಯ ಪರಿಗಣಿಸಿದೆ. ಆದರೆ ಈ ಮೊದಲೇ ಚುನಾವಣೆಗಳನ್ನು ನಡೆಸಬೇಕೆಂದು ಆಯೋಗ ದಿಢೀರನೇ ದಿನಾಂಕ ಪ್ರಕಟಿಸಿದಾಗ ಮುಖ್ಯಮಂತ್ರಿ ರೆಡಿ ಎಂದರೂ ನಿಜಕ್ಕೂ ಆಡಳಿತ ಪಕ್ಷಗಳಾದ ಜೆಡಿ(ಎಸ್), ಬಿಜೆಪಿ, ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಸಿದ್ಧವಿರಲಿಲ್ಲ.


ನಾಲ್ಕು ವಾರಗಳ ಕಾಲ ಎಂದರೆ ಸೆಪ್ಟೆಂಬರ್ ಕೊನೆ, ಆದರೆ ಈಗಲೇ ಅಧಿಕಾರದ ಹಸ್ತಾಂತರದ ಜ್ವರ. ಅದರ ಸುತ್ತಲೇ ಆಳುವ ಪಕ್ಷಗಳು, ವಿರೋಧ ಪಕ್ಷವೂ ಗಿರಕಿ ಹೊಡೆಯುತ್ತಿರುವಾಗ ಅಕ್ಟೋಬರ್ 3ರ ಎದುರಿನಲ್ಲಿ ಚುನಾವಣೆ ಏನಾದೀತು ಎಂಬ ಅಂಶವೂ ಇದೆ. ಏನೇ ಆಗಲಿ ಜನತೆಯ ಕೈಗೆ ಅಧಿಕಾರದ ವಿಕೇಂದ್ರಿಕರಣದ ಹಾದಿಯಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಮಹತ್ವದ ಪಾತ್ರವಿದೆ. ಅದನ್ನು ಕಾಯಬೇಕಾದುದು ಅತಿ ಅಗತ್ಯ. ಆ ಸಂಸ್ಥೆಗಳಿಗೆ ಸರ್ಕಾರದ ಆಡಳಿತಾಧಿಕಾರಿಗಳನ್ನೇ ನೇಮಿಸಿ ಕಾಲ ತಳ್ಳುವುದು ಜನಹಿತದ ದೃಷ್ಟಿಯಿಂದ ಕೆಡಕೇ ಆಗಿದೆ.

ಸೇವೆಯಲ್ಲ ಸುಲಿಗೆ...

ಬೆಂಗಳೂರು ಮಹಾನಗರ ಸಾರಿಗೆ ಬಸ್‌ಗಳ ಪ್ರಯಾಣದ ದರವನ್ನು ಸಂಸ್ಥೆ ಮಧ್ಯರಾತ್ರಿಯಲ್ಲೇ ಹೇಳದೇ ಕೇಳದೇ ಹೆಚ್ಚಿಸಿ ಬಿಟ್ಟಿದೆ. ದಿನದ ಪಾಸ್ ಈಗ 25 ರೂ.ಗಳ ಬದಲು 30 ರೂ. ಸಾರ್ವಜನಿಕರ ಸುಲಿಗೆಗೆ ಅದು ಕೊಡುವ ಕಾರಣ. ನೌಕರರಿಗೆ ಸಂಬಳ ಹೆಚ್ಚಿಸಲಾಗಿದೆ. ನಿರ್ವಹಣಾ ವೆಚ್ಚ ಹೆಚ್ಚಿದೆ ಎಂಬುದು.

ಪ್ರಯಾಣದರಗಳನ್ನು, ಈ ಮೂರು ವರ್ಷಗಳಲ್ಲಿ ಮೂರು ಬಾರಿ ಹೆಚ್ಚಿಸಿದೆ. ಈ ಹಿಂದಿನ ದರಗಳಲ್ಲೇ ಸಂಸ್ಥೆಗೆ ಹಲವಾರು ಸೋರಿಕೆಗಳ ನಡುವೆಯೂ ಕೋಟ್ಯಾಂತರ ರೂ.ಗಳ ಲಾಭವೆಂದು ಸಂಸ್ಥೆಯ ಬಳಿ ಸಾರ್ವಜನಿಕರ ಹಣ ಉಳಿದುಕೊಂಡಿದೆ. ಡೀಸೆಲ್ ಬೆಲೆಗಳನ್ನು ಕೇಂದ್ರ ಸರ್ಕಾರ ಇಳಿಸಿ ಹಲವಾರು ತಿಂಗಳುಗಳೇ ಆಗಿವೆ. ಪ್ರಯಾಣಿಕರ ಸಂಖ್ಯೆಯೂ ಏರಿದೆ. ಹೀಗಿರುವಾಗ ಸಂಸ್ಥೆಯ ಮುಖ್ಯಸ್ಥರ ಹೇಳಿಕೆ ಕೇವಲ ವಂಚನೆಯದ್ದಾಗಿದೆ. ಬೆಂಗಳೂರಿನಂತಹ ಮಹಾನಗರ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಸಾಮಾನ್ಯ ಪ್ರಯಾಣಿಕರು, ಮುಖ್ಯವಾಗಿ ಕಾರ್ಮಿಕರು ಅತ್ಯಂತ ದೂರದ ಹಾದಿಯನ್ನೇ ಕ್ರಮಿಸಬೇಕಾಗಿದೆ. ಹಲವು ಬಸ್‌ಗಳನ್ನು ಬದಲಿಸಬೇಕಾಗುತ್ತದೆ. ಪ್ರತಿಬಸ್‌ಗೂ ಅದೇ ದುಬಾರಿ ದರ ತೆರುವುದು ಅಸಾಧ್ಯವಾಗಿದೆ. ಆದ್ದರಿಂದಲೇ ಪಾಸ್‌ನ್ನು ಅವಲಂಬಿಸಲಾಗುತ್ತಿದೆ. ಈಗಲೂ ದಿನದ ಪಾಸ್ ದರವು ದುಡಿಮೆಯ ಕೂಲಿಯಲ್ಲಿ ಕೆಲವೊಮ್ಮೆ ಅರ್ಧದಷ್ಟು ಇಲ್ಲ 1/3 ರಷ್ಟು.

ಸಾರ್ವಜನಿಕ ಹಿತರಕ್ಷಣೆ, ಸೇವೆಗೆಂದೇ ಇದ್ದ ಸಂಸ್ಥೆಯೊಂದು ಸರ್ಕಾರದ ನೀತಿಯಿಂದಾಗಿ ದುಡ್ಡು ಮಾಡುವ ದಂಧೆಗಾರನಾಗಿ ಮಾರ್ಪಡುಗುತ್ತಿರುವುದು ಖಂಡನೀಯ. ಈ ಕೂಡಲೇ ದರ ಏರಿಕೆ ಹಿಂತೆಗೆಯಬೇಕು ಮಾತ್ರವಲ್ಲ ಕಡಿತವನ್ನು ಮಾಡಬೇಕು.



1857ರ ಬಂಡಾಯ

ಸಮಕಾಲೀನ ಜಗತ್ತಿನಲ್ಲಿ ಕ್ವಿಂಗ್ ಮನೆತನದ ವಿರುದ್ಧ ನಡೆದ ಚೈನಾದ ಟಾಯ್‌ಪಿಂಗ್ ಬಂಡಾಯವೊಂದನ್ನು ಬಿಟ್ಟರೆ ಇಷ್ಟೊಂದು ಬೃಹತ್ ಪ್ರಮಾಣದ ಬಂಡಾಯ ಮತ್ತೊಂದಿಲ್ಲಾ.

ರಾಷ್ಟ್ರೀಯ ಬಂಡಾಯವಾಗಿ 1857 ರ ಹೋರಾಟ

ಕಳೆದ ವಾರದಿಂದ

ಈ ಬಂಡಾಯವನ್ನಾರಂಭಿಸಿದ ಸಿಪಾಯಿಗಳಿಗೆ ಆಧುನಿಕ ಮಿಲಿಟರಿ ಸಂಘಟನೆಯ ಮತ್ತು ನಾಯಕತ್ವದ ಪೂರ್ಣ ಅರಿವಿತ್ತು. ಅವರಿಗೆ ಪಾಳೇಗಾರಿಶಾಹಿ ವರ್ಗಗಳೊಂದಿಗೆ ಯಾವುದೇ ಸಂಬಂಧಗಳಿರಲಿಲ್ಲ.

ರಾಜರು, ನವಾಬರು, ಜಮೀನ್ದಾರರು ಮತ್ತು ತಾಲ್ಲೂಕುದಾರರ ಜಗತ್ತಿನೊಂದಿಗೆ ಅವರಿಗೆ ಯಾವುದೇ ಜೀವಂತ ಸಂಬಂಧಗಳಿರಲಿಲ್ಲ. ಮತ್ತು ಈ ಹಳೆಯ ವ್ಯವಸ್ಥೆಗಳ ಬಗ್ಗೆ ಯಾವುದೇ ಸಹಾನುಭೂತಿಯನ್ನೂ ಅವರು ಹೊಂದಿರಲಿಲ್ಲ. ಈ ಎಲ್ಲಾ ಕಾರಣಗಳಿಂದ 1857ರ ವಿಪ್ಲವ ಭಾರತೀಯ ರಾಷ್ಟ್ರೀಯತೆಯ ಹೊರ ಹೊಮ್ಮುವಿಕೆಗೆ ಅತ್ಯಗತ್ಯವಾದ ಬೀಜಾಂಕುರವನ್ನು ಮಾಡಿತು. ಹಾಗಾಗಿಯೇ ಬಂಡಾಯಗಾರರು ತಾವು ವಶಕ್ಕೆ ತೆಗೆದುಕೊಂಡ ಪ್ರದೇಶಗಳಲ್ಲಿ ಪ್ರಾತಿನಿಧಿಕ ಆಡಳಿತ ಮಂಡಳಿಯನ್ನು ರಚಿಸಿ ಅದಕ್ಕೆ ಅರ್ಹರಾದ ಮತ್ತು ಸಮರ್ಥರಾದ ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡಿ ಅದರ ಮೂಲಕ ಆಡಳಿತ ಮತ್ತು ಬಂಡಾಯವನ್ನು ಮುಂದುವರಿಸಲು ಪ್ರಯತ್ನಿಸಿದರು. ದೆಹಲಿ, ಲಕ್ನೋ ಮುಂತಾದ ಪ್ರದೇಶಗಳಲ್ಲಿ ಇಂತಹ ಸಮಿತಿಗಳು ರೂಪಿತಗೊಂಡು ಅತ್ಯಲ್ಪಾವಧಿಯಲ್ಲೇ ಅವಸಾನ ಹೊಂದಿದರೂ ಅವು ಹೊಸ ರಾಷ್ಟ್ರೀಯ ಪರಿಕಲ್ಪನೆಯನ್ನು ಜಾರಿಗೆ ತರಲು ಕಿರು ಪ್ರಯತ್ನವನ್ನು ನಡೆಸಿದ್ದವು.



1858ರ ನವೆಂಬರ್‌ನಲ್ಲಿ ವಿಕ್ಟೋರಿಯಾ ರಾಣಿ ಹೊರಡಿಸಿದ ಘೋಷಣಾ ಪತ್ರಕ್ಕೆ ಪ್ರತ್ಯುತ್ತರಕ್ಕಾಗಿ ಔದ್‌ನ ನವಾಬನಾದ ಬಿರಜಿಸ್ ಖಾದಿರ್‌ನ ಹೆಸರಿನಲ್ಲಿ ಹೊರಡಿಸಿದ ಘೋಷಣೆ ಇಲ್ಲಿ ಉಲ್ಲೇಖಾರ್ಹ. 'ಬ್ರಿಟಿಷರು ಭಾರತೀಯ ರಾಜ್ಯಗಳನ್ನು ಒಂದಾದ ನಂತರ ಒಂದರಂತೆ ಹಾಳು ಮಾಡಿದ್ದಾರೆ. ಮೈಸೂರಿನ ಟಿಪ್ಪು ಸುಲ್ತಾನನಿಂದ ಹಿಡಿದು ಪಂಜಾಬಿನ ದುಲೀಪ್ ಸಿಂಗ್‌ನವರೆಗೆ ಇಡೀ ಹಿಂದೂಸ್ತಾನದಲ್ಲಿ ಎಲ್ಲ ಪ್ರಮುಖ ರಾಜ್ಯಗಳನ್ನು ಬ್ರಿಟಿಷರು ಧ್ವಂಸ ಮಾಡಿದ್ದಾರೆ. ಆದ್ದರಿಂದ ಸಿಪಾಯಿಗಳು ಮತ್ತು ಬಂಡಾಯಗಾರರು ಬ್ರಿಟಿಷರನ್ನು ನಂಬಬಾರದು. ವಿಕ್ಟೋರಿಯಾ ರಾಣಿಯ ಭರವಸೆಗಳು ಶೂನ್ಯ. ರಾಣಿಯ ಆಳ್ವಿಕೆಯಲ್ಲಿ ಭಾರತೀಯರ ಸ್ಥಾನ ಸೌದೆ ಒಡೆಯುವವರ ಮತ್ತು ನೀರು ಸೇದಿ ಹಾಕುವ ಕೂಲಿಗಳ ಸ್ಥಾನವಲ್ಲದೆ ಬೇರೇನೂ ದೊರಕದು. ಅವರೆಂದಿಗೂ ಅವರ ಮನೆಯೊಡೆಯರಾಗಲು ಸಾಧ್ಯವಿಲ್ಲ'.

ಬ್ರಿಟಿಷರು ಆಕ್ರಮಿಸಿಕೊಂಡ ಎಲ್ಲಾ ರಾಜ್ಯಗಳು ಒಂದೆಂಬ ರಾಷ್ಟ್ರೀಯತೆ ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಹೊರ ಹೊಮ್ಮುತ್ತಿರುವುದನ್ನು ಸ್ಪಷ್ಟವಾಗಿ ಗುರ್ತಿಸಬಹುದಾಗಿದೆ. ಬ್ರಿಟಿಷರು ಪರಕೀಯರು ಮತ್ತು ಅತಿಕ್ರಮಣಕಾರರು. ಅವರನ್ನು ಹೊಡೆದಟ್ಟಬೇಕು. ತಮ್ಮ ಭವಿಷ್ಯವನ್ನು ತಾವೇ ಶ್ರಮಪಟ್ಟು ರೂಪಿಸಿಕೊಳ್ಳಬೇಕೆಂಬ ದೃಢ ನಿರ್ಧಾರ ಅವರ ಪರಿಕಲ್ಪನೆಯ ರಾಷ್ಟ್ರೀಯತೆಯಾಗಿತ್ತು. ಈ ಬಂಡಾಯಕ್ಕೆ ನಾಯಕತ್ವ ಒಂದು ಕೇಂದ್ರೀಕೃತ ನೆಲೆಯಿಂದ ದೊರೆತದ್ದಲ್ಲ. ಅದು ಬಹುಮುಖಿಯಾದ ಮೂಲಗಳಿಂದ ಬಂದದ್ದು. ಇಂತಹ ನಾಯಕತ್ವದಿಂದ ರೂಪಿತಗೊಂಡ ರಾಷ್ಟ್ರೀಯತೆ ವಿಶಿಷ್ಟವಾದ ಜಾತ್ಯಾತೀತ ಸ್ವರೂಪವನ್ನು ಹೊಂದಿತ್ತು. ಇದು ಮುಂದೆ ನಡೆದ ಸ್ವಾತಂತ್ರ ಸಮರಗಳಲ್ಲಿ ವಿಕಾಸಗೊಂಡು 1947ರಲ್ಲಿ ಆಧುನಿಕ ಜಾತ್ಯಾತೀತ ಪ್ರಜಾ ಗಣತಂತ್ರವಾಗಿ ಭಾರತವಾಗಿ ರೂಪಿತವಾಯಿತು. ○

ತಸ್ಲಿಮಾ ನಸ್ರಿನ್ ಮೇಲೆ ಹಲ್ಲೆ

ತಸ್ಲಿಮಾ ನಸ್ರಿನ್ ಬಾಂಗ್ಲಾದೇಶದ ಖ್ಯಾತ ಕಾದಂಬರಿಗಾರ್ತಿ. ಮುಸ್ಲಿಂ ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾಗಿರುವ ಇವರ 'ಶೋಧ' ಕಾದಂಬರಿಯ ತೆಲುಗು ಆವೃತ್ತಿಯ ಬಿಡುಗಡೆ



ಸಮಾರಂಭವು ಹೈದರಾಬಾದ್‌ನಲ್ಲಿ ನಡೆಯಿತು. ಎಂಐಎಂ ಎಂಬ ಮೂಲಭೂತವಾದಿ ಪಕ್ಷದ ಮೂವರು ಶಾಸಕರು, ಅವರ ಬೆಂಬಲಿಗರು ಈ ಸಮಾರಂಭದಲ್ಲಿ ತಸ್ಲಿಮಾ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಈ ಹಲ್ಲೆಯನ್ನು ನಾಡಿನ ಪ್ರಗತಿಪರ ವ್ಯಕ್ತಿಗಳು ತೀವ್ರವಾಗಿ ಖಂಡಿಸಿದ್ದಾರೆ. ಇವರ ಮೇಲೆ ನಿಷ್ಠುರ ಕ್ರಮಕ್ಕೆ ಆಗ್ರಹಿಸಲಾಗಿದೆ.

ಚುನಾಯಿತ ಪ್ರತಿನಿಧಿಗಳೇ ಇಂತಹ ಗೂಂಡಾಗಿರಿ, ದೈಹಿಕ ಹಲ್ಲೆಗೆ ಇಳಿದಿರುವುದು ತೀರಾ ಖಂಡನಾರ್ಹವಾಗಿದೆ.

ಸ್ವಾತಂತ್ರ್ಯ ಭಾರತ

ಸ್ವಾತಂತ್ರ್ಯ ಭಾರತ ಅರವತ್ತು ವರುಷ
ಕೆಲವರಿಗೆ ಖಂಡಿತವು ತಂದಿಹುದು ಹರುಷ
ಈ ಇಡಿಯ ದೇಶಕ್ಕೆ ಆದವರು ಗಂಡ
ಅಂಬಾನಿ ಆ ಟಾಟಾ ಬಿರ್ಲಾಗಳ ತಂಡ

ಗೂಳಪ್ಪಗಳು

ಆಳುತಿಹ ದೊರೆ ಜನರು ಗೂಳಪ್ಪರನ್ನು
ಸಾಕಿಟ್ಟು ಸಜ್ಜನಕೆ ತಿನಿಸುವರು ಮಣ್ಣು
ಗೂಳಪ್ಪಗಳ ಕೈಲಿ ಕೊಟ್ಟಿಟ್ಟುಗನ್ನು
ಮುರಿಯುವರು ನಿಜ ನುಡಿವ ಮಂದಿಗಳ ಬೆನ್ನು

- ವಿಡಂಬಾರಿ

ಅಯ್ಯೋ ಬೇಡ ಕಣ್ರೀ....

ಇತ್ತೀಚಿಗೆ ಮಾಧ್ಯಮಗಳ ತುಂಬಾ ಅದೇ ಸುದ್ದಿ. ನಿತ್ಯ ಒಂದಲ್ಲ ಒಂದು ಆತ್ಮಹತ್ಯೆ. ಎಸ್.ಎಸ್.ಎಲ್.ಸಿ. ಫೇಲು-ಆತ್ಮಹತ್ಯೆ ಪಿಯುಸಿ ಫೇಲು-ಆತ್ಮಹತ್ಯೆ. ಫೇಲಾದೋರು ಆತ್ಮಹತ್ಯೆ ಮಾಡಿಕೊಳ್ಳೊದಿರಲಿ, ರ್‍ಯಾಂಕ್ ಬರಲಿಲ್ಲ ಅಂತ ಆತ್ಮಹತ್ಯೆ. ಇನ್ನು ಪ್ರೇಮಿಗಳ ಆತ್ಮಹತ್ಯೆ ಮಾಮೂಲು ಸಂಗತಿಯಾಗಿದೆ. ರೈತರ ಆತ್ಮಹತ್ಯೆ, ಒಂದು ಕಡೆ. ಬಡತನದ ಬವಣೆ ತಾಳಲಾರದೆ ಆತ್ಮಹತ್ಯೆ. ಮತ್ತೊಂದೆಡೆ ಸಿನಿಮಾ ತಾರೆಯರ ಆತ್ಮಹತ್ಯೆ. ಇದೆಲ್ಲದರ ಜೊತೆಗೆ ಆತ್ಮಹತ್ಯಾ ಬಾಂಬುಗಳು ಬೇರೆ. ಛೇ, ಜನ ಏನೆಲ್ಲ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರಲ್ಲ, ಅಂತ ಹಾಗೇ ಯೋಚನೆ ಮಾಡ್ತಾ ಮಲಗಿದ್ದೆ. ಅಬ್ಬಾ ಎಂಥಾ ಭಯಂಕರ ಕನಸು ಬಿತ್ತು ಅಂತೀರಿ. ನೆನಸಿಕೊಂಡ್ರೆ ಭಯ ಆಗುತ್ತೆ. ಜನ ಹೀಗೇ ಹೊಸ ಹೊಸ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಳ್ಳೋಕೆ ಶುರು ಮಾಡ್ತಾರಂತೆ. ಆಗ ಈ ಮೇಲೆ ಹೇಳಿದ ಸುದ್ದಿಗಳ ಜೊತೆ ಈ ಕೆಳಗಿನ ಥರದ ಸುದ್ದಿಗಳೂ ಪೇಪರ್‌ನಲ್ಲಿ ಟಿ.ವಿ.ಯಲ್ಲಿ ದಿನಾ ಬರುತ್ತವಂತೆ :

ರಾಜಕಾರಣಿಗಳ ಸರಣಿ ಆತ್ಮಹತ್ಯೆ:

ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಸೋತ ಅಭ್ಯರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ತೀವ್ರ ಆತಂಕದ ಸಂಗತಿಯಾಗಿದೆ. ನಿನ್ನೆ ಆತ್ಮಹತ್ಯೆ ಮಾಡಿಕೊಂಡ ಶ್ರೀ ಶಾಸಕಯ್ಯನವರು ಈ ಸರಣಿಯಲ್ಲಿ ಇಪ್ಪತ್ತಮೂರನೆಯ ವರಾಗಿದ್ದಾರೆ. ಕಳೆದವಾರ ಶಾಸಕರೊಬ್ಬರು ಮಂತ್ರಿ ಪದವಿ ಸಿಗದೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದು.



ಸರ್ಕಾರಿ ನೌಕರರ ಆತ್ಮಹತ್ಯೆ: ಸರ್ಕಾರಿ ನೌಕರ ಶ್ರೀ ಲಂಚೋದರ ಅವರು ನಿನ್ನೆ ನಿಧನರಾದರು. ಶ್ರೀಯುತರಿಗೆ ಸುಮಾರು 48 ವರ್ಷ ವಯಸ್ಸಾಗಿತ್ತು. ಈ ಜಿಲ್ಲೆಯಲ್ಲಿ ಜನರು ಯಾವುದೇ ಸರ್ಕಾರಿ ನೌಕರನಿಗೆ ಲಂಚ ಕೊಡುವುದಿಲ್ಲ ಎಂದು ತೀರ್ಮಾನಿಸಿರುವುದರಿಂದ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ 25ನೇ ಸರ್ಕಾರಿ ನೌಕರ ಇವರಾಗಿದ್ದಾರೆ. ತಾವು ಕೆಲಸ ಮಾಡಿದರೂ ಲಂಚ ಸಿಗದೆ ಬೇಸತ್ತು ಸರ್ಕಾರಿ ನೌಕರರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಈ ಪ್ರವೃತ್ತಿ ಬೇರೆ ಜಿಲ್ಲೆಗಳಿಗೂ ಹಬ್ಬುತ್ತಿರುವುದು ತೀವ್ರ ಆತಂಕದ ಸಂಗತಿಯಾಗಿದೆ.

ಶಿಕ್ಷಕರ ಸರಣಿ ಆತ್ಮಹತ್ಯೆ: ವಿದ್ಯಾರ್ಥಿಗಳು ಮನೆ ಪಾಠಕ್ಕೆ ಬರುತ್ತಿಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಶಿಕ್ಷಕರ ಸಂಖ್ಯೆ ಇತ್ತೀಚೆಗೆ ಜಾಸ್ತಿಯಾಗಿದೆ. ಈ ಬಗ್ಗೆ ಸರ್ಕಾರ ಮಧ್ಯ ಪ್ರವೇಶಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ಟ್ಯೂಷನ್ ಕಡ್ಡಾಯ ಮಾಡಬೇಕೆಂಬ ಒತ್ತಾಯ ಕೇಳಿಬರುತ್ತಿದೆ.

ಸಾಹಿತಿಗಳ ಆತ್ಮಹತ್ಯೆ: ಸಮಾಜದಲ್ಲಿ ನಡೆಯುವುದೆಲ್ಲ ಸಾಹಿತ್ಯದಲ್ಲಿ ಪ್ರತಿಬಿಂಬಿಸುವುದು ಎಂದು ಹೇಳುತ್ತಾರೆ. ಆದರೆ ಇತ್ತೀಚೆಗೆ ಸಮಾಜದಲ್ಲಿ ಹೆಚ್ಚಿರುವ ಆತ್ಮಹತ್ಯೆ ಪ್ರವೃತ್ತಿ ಸಾಹಿತ್ಯದಲ್ಲಿ ಅಷ್ಟೇ ಅಲ್ಲ ಸಾಹಿತಿಗಳಲ್ಲಿಯೂ ಪ್ರತಿಬಿಂಬಿಸುತ್ತಿದೆ! ಎಂದರೆ ಸರಣಿ ಆತ್ಮಹತ್ಯೆ ಪ್ರವೃತ್ತಿ ಸಾಹಿತಿಗಳನ್ನೂ ಬಿಟ್ಟಿಲ್ಲ. ಅದರಲ್ಲೂ ಸಾಹಿತಿಗಳು ತಮ್ಮ ವೈಶಿಷ್ಟ್ಯ ತೋರಿಸುತ್ತಿದ್ದಾರೆ. ಖ್ಯಾತ ಸಾಹಿತಿ ಶ್ರೀ ಕವಿ ಪುಂಗವ ಅವರು ತಮ್ಮಪುಸ್ತಕಗಳು ಮಾರಾಟವಾಗದೆ ಬೇಸರಗೊಂಡು ತಮ್ಮ ಪುಸ್ತಕಗಳಿಗೆಲ್ಲ ಬೆಂಕಿಯಿಟ್ಟು, ತಾವೂ ಅದರಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪುಸ್ತಕ ಮಾರಾಟವಾಗಿಲ್ಲ, ಅಕಾಡೆಮಿಗಳಲ್ಲಿ ಸ್ಥಾನ ಸಿಗಲಿಲ್ಲ, ತಾವು ಎಂಥಾ ಸಾಹಿತ್ಯ ಸೇವೆ ಮಾಡುತಿದ್ದರೂ, ಯಾವುದೇ ಪ್ರಶಸ್ತಿಯಾಗಲೀ, ಸೈಟು, ಮನೆಯಾಗಲೀ ಸಿಗಲಿಲ್ಲ ಎಂಬ ವಿವಿಧ ಕಾರಣ ಮುಂದೊಡ್ಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಾಹಿತಿಗಳ ಸರಣಿಯಲ್ಲಿ ಶ್ರೀ ಕವಿ ಪುಂಗವ ಅವರು 36ನೇಯವರಾಗಿದ್ದಾರೆ.ಈ ಭಯಂಕರ ಕನಸು ಬಿದ್ದು, ಎಚ್ಚರವಾಗಿ ಬೆವರುತ್ತಾ ಕೂತಿದ್ದೆ. ಹೆಂಡತಿ 'ಯಾಕ್ರಿ?' ಅಂತ ಕೇಳಿದಳು. ಕನಸನ್ನೆಲ್ಲ ಹೇಳಿದೆ. 'ಅಯ್ಯೋ ಬಿಡ್ರಿ ಅಣು ಬಾಂಬುಗಳನ್ನು ಸಂಗ್ರಹಿಸಿ, ತಯಾರಿಸಿ, ದೇಶ ದೇಶಗಳೇ ಆತ್ಮಹತ್ಯೆ ಮಾಡಿಕೊಳ್ಳೊದಿಕ್ಕೆ ಹೊರಟಿವೆ. ಅಂಥಾದ್ರಲ್ಲಿ ನಿಮ್ಮ ಕನಸೇನು ಮಹಾ ಭಯಂಕರ' ಎಂದಳು. 'ಈ ವಿಚಾರಗಳನ್ನೆಲ್ಲ ಲೇಖನ ಬರೆದು ಪೇಪರ್‌ಗೆ ಕಳುಹಿಸುತ್ತೀನಿ. ಆತ್ಮಹತ್ಯೆ ಪ್ರವೃತ್ತಿ ತಡೆಗಟ್ಟೋಕೆ ಸ್ವಲ್ಪ ಪ್ರಯತ್ನ ಮಾಡ್ತೀನಿ ಕಣೆ' ಎಂದೆ. 'ಅಯ್ಯೋ ಬೇಡ ಕಣ್ರೀ...' ಎಂದಳು ಆತಂಕದಿಂದ, 'ಯಾಕೆ ಅಷ್ಟು ಗಾಬರಿಯಾಗುತ್ತಿದ್ದೀಯಾ? ಎಂದೆ 'ನೀವು ಲೇಖನ ಬರೆದು ಅದನ್ನ ಪೇಪರ್‌ಗೆ ಕಳಿಸೋದು, ಅದು ಪ್ರಕಟ ಆಗದೆ ವಾಪಸ್ ಬರೋದು. ಆಮೇಲೆ ನೀವು... ಅಯ್ಯೋ ಏನೂ ಬೇಡ ಸುಮ್ಮಿರೀಪ್ಪ." ಎಂದಳು. ○

ಖಾಯಂ ಅಲ್ಲದ ಬಿಎಸ್‌ಎನ್‌ಎಲ್ ನೌಕರರ ಪರಿಸ್ಥಿತಿ ಹೀಗಿದೆ ನೋಡಿ

ದೀಪದ ಕೆಳಗೆ ಕತ್ತಲು

ಇದು ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಬದುಕು

ಹೆಸರು ವೆಂಕಟೇಶ. ವಯಸ್ಸು 25 ರ ಸುಪಾಸು. ಹೇಳಿಕೊಳ್ಳುವುದಕ್ಕೆ ಬಿಎಸ್‌ಎನ್‌ಎಲ್ ಲ್ಲಿ ಕೆಲಸ. ಆದ್ರೆ ಸಂಬಳ ಅನ್ನೋದು ಮಾತ್ರ ಲ್ಲವೇ ಇಲ್ಲ! ಅಯ್ಯೋ! ಮತ್ತಿನ್ಯಾಕೆ ಅಲ್ಲಿ ಕೆಲ್ಸ ಾಡ್ಬೇಕು ಅಂತಿರಾ? ಏನೋ ಬಿಎಸ್‌ಎನ್‌ಎಲ್ ಾಯಂ ನೌಕರಿಯಲ್ಲಿರೋ ಲೈನ್ ಮ್ಯಾನ್ ವರಾಗಿಯೇ ಕರೆದುಕೊಂಡು ಹೋದ್ರೆ.. ಅಲ್ಲಿ ಗೋ ಪುಡಿಗಾಸಿಗಾಗಿ... ಅದರಲ್ಲೇ ದಿನದ ದುಕನ್ನು ನೂಕುವ ಆಶೆಗಾಗಿ!

ಮತ್ತೊಬ್ಬ ಗಂಗಾಧರ. ಆರೇಳು ವರ್ಷಗಳಿಂದ ಿಎಸ್‌ಎನ್‌ಎಲ್ ನಲ್ಲಿ ಗುತ್ತಿಗೆ ಕಾರ್ಮಿಕನಾಗಿ ದುಡಿಯುತ್ತಿದ್ದಾನೆ. ಕಳೆದ 2 ವರ್ಷಗಳಿಂದ ಸಂಘಟಿತರಾದ ಪರಿಣಾಮ ಸಂಬಳ ಾಸ್ತಿಯಾಗಿದೆ. ಆದರೆ ಕಳೆದ ತಿಂಗಳಿಂದ ಇದ್ದಕ್ಕಿದ್ದಂತೆ ಆತನ ಸಂಬಳದಲ್ಲಿ 1200 ಕಡಿತ ಮಾಡಲಾಗುತ್ತಿದೆ. ಇದನ್ನು ಪ್ರಶ್ನಿಸಿದರೆ ಅಧಿಕಾರಿಗಳು 'ಲೈನೇಜ್' ನೆಪದಲ್ಲಿ ನುಣುಚಿಕೊಳ್ಳುತ್ತಾರೆ.

ಇದು ಕೇವಲ ವೆಂಕಟೇಶ ಮತ್ತು ಗಂಗಾಧರನ ಕಥೆ ಮಾತ್ರವಲ್ಲ. ಇಡೀ ಜಗತ್ತಿಗೆ ಸಂಪರ್ಕ ಜಾಲ ಕಲ್ಪಿಸುತ್ತೇವೆಂದು ಜಂಭ ಕೊಚ್ಚಿತ್ತಿರುವ ದೂರಸಂಪರ್ಕ ಉದ್ದಿಮೆಯಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಯುವಜನರು ನಿತ್ಯ ಅನುಭವಿಸುವ ಯಾತನೆಮಯ ಬದುಕಿದು.

ದಾಖಲೆಗಳೇ ಇಲ್ಲ! : ಇದು ಕೇವಲ ಕರ್ನಾಟಕ ಕಥೆ ಮಾತ್ರ ಅಲ್ಲ! ದೇಶದ್ಯಾಂತ ಇರುವ ಎಲ್ಲಾ ದೂರ ಸಂಪರ್ಕ ಎಕ್ಸ್‌ಛೇಂಜ್‌ಗಳಲ್ಲಿ ದುಡಿಯುತ್ತಿರುವ ದಿನಗೂಲಿಗಳ ಬದುಕಿದು. ದೇಶದ ಸಾವಿರಾರು ಎಕ್ಸ್‌ಂಚೇಜ್‌ಗಳಲ್ಲಿ ಹೌಸ್ ಕೀಪಿಂಗ್, ಕಂಪ್ಯೂಟರ್ ಆಪರೇಟರ್, ಕೇಬಲ್ ದೋಷ ರಿಪೇರಿ, ಟ್ರೇಸಿಂಗ್, ಅಗೆತ ಮತ್ತು ಸೆಕ್ಯೂರಿಟಿ ಮೊದಲಾದ ಹೆಸರಲ್ಲಿ ಇವರನ್ನು ದುಡಿಸಿಕೊಳ್ಳಲಾಗುತ್ತಿದೆ. ಇವರಿಂದ ಖಾಯಂ ನೌಕರರಿಂದ ಮಾಡಿಕೊಳ್ಳುವ ಎಲ್ಲಾ ಕೆಲಸಗಳನ್ನು ಮಾಡಿಸಿಕೊಳ್ಳಲಾಗುತ್ತಿದೆ. ಆದರೆ ಸಿಗುವ ಸವಲತ್ತುಗಳು ಮಾತ್ರ ಶೂನ್ಯ. ಕರ್ನಾಟಕದಲ್ಲಿ ಕಳೆದೆರಡು ವರ್ಷಗಳಲ್ಲಿ ಈ ಗುತ್ತಿಗೆ ಕಾರ್ಮಿಕರು ಸಂಘಟಿತರಾಗುತ್ತಿರುವ ಪರಿಣಾಮದಿಂದ ಕಛೇರಿಯೊಳಗೆ ಕೆಲಸ ಮಾಡುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ಇ.ಎಸ್.ಐ., ಪಿ.ಎಫ್. ಸೌಲಭ್ಯ ಸಿಗುತ್ತದೆ ಮತ್ತು ಲೈನ್‌ಮೆನ್ ಕೆಲಸ ಮಾಡುತ್ತಿರುವವರಿಗೆ ದಿನಕ್ಕೆ 100ರೂ. ಕೂಲಿ ಸಿಗುತ್ತಿದೆ. ಅಷ್ಟು ಬಿಟ್ಟರೆ ಇವರು ಬಿಎಸ್‌ಎನ್‌ಎಲ್ ನಲ್ಲಿ ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ಯಾವುದೇ ದಾಖಲೆಗಳು ಇಲ್ಲ. ಗುತ್ತಿಗೆದಾರರು ನೀಡಬೇಕಾದ ಗುರುತಿನ ಚೀಟಿ, ಸಂಬಳ ಚೀಟಿ, ಇತ್ಯಾದಿಗಳು ಎಂಟು ಹತ್ತು ವರ್ಷಗಳ ಕಾಲ ಕೆಲಸ ಮಾಡಿದರೂ ಸಿಕ್ಕಿಲ್ಲ.

1970 ಗುತ್ತಿಗೆ ಕಾರ್ಮಿಕ ನಿಷೇಧ ಕಾನೂನು ಅನ್ವಯ ಯಾವುದೇ ಒಬ್ಬ ವ್ಯಕ್ತಿ ಕೆಲಸಕ್ಕೆ ಸೇರಿದ ಮೂರು ದಿನದೊಳಗಾಗಿ ಆತನಿಗೆ, ಆತನನ್ನು ದುಡಿಸಿಕೊಳ್ಳುತ್ತಿರುವ ವ್ಯಕ್ತಿ 'ಎಂಪ್ಲಾಮೆಂಟ್ ಕಾರ್ಡ್' ನೀಡಬೇಕು. ಮಾತ್ರವಲ್ಲ ಕೆಲಸಕ್ಕೆ ಸೇರಿದ ಮೂರು ತಿಂಗಳಿಗೊಳಗೆ ಭವಿಷ್ಯ ನಿಧಿ ಹಣವನ್ನು ಸಂಬಂಧಿಸಿದ ಪಿಎಫ್ ಕಛೇರಿಯಲ್ಲಿ ಕಾರ್ಮಿಕನ ಹೆಸರಿನಲ್ಲಿ ಖಾತೆ ತೆರೆದು ಹಣ ಪಾವತಿಸಬೇಕು. ಅಲ್ಲದೆ, ಸರ್ಕಾರ ನಿಗದಿಪಡಿಸಿದ ಕನಿಷ್ಟ ಕೂಲಿಯನ್ನು ನಿಯಮಿತವಾಗಿ ಮತ್ತು ಪ್ರತಿ ತಿಂಗಳ 5 ತಾರೀಖಿನೊಳಗೆ ನೀಡಬೇಕೆಂದು ನಿರ್ದೇಶನವಿದೆ.

ಆದರೆ ಇವೆಲ್ಲ ಕಾನೂನು ಪ್ರಕಾರ ಸಿಗಬೇಕಾದ ಸವಲತ್ತುಗಳಿಂದ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು ವಂಚಿತರಾಗಿದ್ದಾರೆ. ಈ ಬಗ್ಗೆ ಪಿ.ಎಫ್. ಆಯುಕ್ತರು ಸ್ವತಃ ಬಿಎಸ್‌ಎನ್‌ಇಎಲ್ ಆಡಳಿತಕ್ಕೆ ಪತ್ರ ಬರೆದಿದ್ದರೂ ಅದನ್ನು ಗಾಳಿಗೆ ತೂರಲಾಗಿದೆ.

ಲೈನೇಜ್ ಎಂಬ ಭೂತ! ಪ್ರತಿ ವರ್ಷ ಗುತ್ತಿಗೆ ಅವಧಿ ಮುಗಿದು ಹೊಸ ...ಡರ್ ಕರೆಯುವ ...ದರ್ಭ ಬಂತೆಂದರೆ ...ರು ಗುತ್ತಿಗೆ ...ರ್ಮಿಕರಿಗೆ ತುಂಬಾ ...ಂಕದ ಕ್ಷಣಗಳು ಯಾಕೆಂದರೆ, ಅಗ ಬಿಎಸ್‌ಎನ್‌ಎಲ್ ಆಡಳಿತ ಈ 'ಲೈನೇಜ್' ಎಂಬ ಅಸ್ತ್ರವನ್ನು ಬಳಸಿ ಕಾರ್ಮಿಕರನ್ನು ಮನೆಗೆ ಕಳಿಸುವ ಕೆಲಸ ಮಾಡುತ್ತದೆ.

ಲೈನೇಜ್ ಎಂದರೆ ಒಂದು ಎಕ್ಸ್‌ಚೇಂಜ್ ವ್ಯಾಪ್ತಿಯಲ್ಲಿ ಎಷ್ಟು ಸಾವಿರ ಸ್ಥಿರ ದೂರವಾಣಿ ಸಂಪರ್ಕಗಳಿವೆಯೋ. ಅವುಗಳಿಂದ ಬರುವ ಆದಾಯದ ಆಧಾರದಲ್ಲಿ ನೌಕರರಿಗೆ ವೇತನ ಹಂಚಿಕೆ ಮಾಡುವುದು. ಉದಾರಹಣೆಗೆ ಒಂದು ಎಕ್ಸ್‌ಚೇಂಜ್ ವ್ಯಾಪ್ತಿಯಲ್ಲಿ 36 ಸಾವಿರ ಸಂಪರ್ಕಗಳಿದ್ದಲ್ಲಿ ಅದಕ್ಕೆ ಪ್ರತಿ ಸಂಪರ್ಕಕ್ಕೆ ರೂ.1.80 ಪೈಸೆಯಂತೆ ಗುಣಿಸಿ ಅದರಿಂದ ಬರುವ ಆದಾಯವನ್ನು ಕಾರ್ಮಿಕರ ಮಧ್ಯ ವೇತನವಾಗಿ ಹಂಚುವ ವಿಧಾನ. ಇದರಿಂದಾಗಿ ಒಬ್ಬ ಕಾರ್ಮಿಕ ಇದ್ದಕ್ಕಿದ್ದಂತೆ 1000 ದಿಂದ 1200 ಸಂಬಳ ಕಳೆದುಕೊಳ್ಳುತ್ತಾನೆ. ಪ್ರತಿಭಟಿಸಿದರೆ ಆ ಹಣಕ್ಕೆ ಸರಿ ಹೊಂದುವಷ್ಟು ಕಾರ್ಮಿಕರನ್ನು ಮಾತ್ರ ಉಳಿಸಿಕೊಂಡು ಉಳಿದಂತೆ ಇರುವ ಕಾರ್ಮಿಕರನ್ನು ಮನೆಗೆ ಕಳಿಸಲಾಗುತ್ತಿದೆ. ಆಶ್ಚರ್ಯಕರ ಸಂಗತಿಯೆಂದರೆ ಗುತ್ತಿಗೆದಾರರಿಗೆ ಹೆಚ್ಚಿನ ಲೈನೇಜ್ ನೀಡುವ ಬಿಎಸ್‌ಎನ್‌ಎಲ್ ಆಡಳಿತ, ಅವರ ಅವಧಿ ಮುಗಿಯುತ್ತಿದ್ದಂತೆ, ಲೈನೇಜ್ ದರವನ್ನು ಕಡಿಮೆಗೊಳಿಸಿ, ಅದನ್ನು ಕಾರ್ಮಿಕರ ಮೇಲೆ ಬಳಸುತ್ತಿದೆ. ಇದರ ಪರಿಣಾಮವಾಗಿ ಸದ್ಯ ಬೆಂಗಳೂರು ಜಿಲ್ಲೆಯಲ್ಲಿಯೇ ಸುಮಾರು 15 ರಿಂದ 20 ಕಾರ್ಮಿಕರಿಗೆ ಕೆಲಸ ನಿರಾಕರಿಸಲಾಗಿದೆ. ಮತ್ತು ನೂರಾರು ಕಾರ್ಮಿಕರಿಗೆ ಸಾವಿರಾರು ರೂ. ಸಂಬಳ ಕಡಿತ ಮಾಡಲಾಗಿದೆ.

ಕೇಸು ದಾಖಲು: ಪ್ರತಿ ವರ್ಷ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರಿಗೆ ಆಗುತ್ತಿರುವ ಈ ಅನ್ಯಾಯವನ್ನು ಪ್ರತಿಭಟಿಸಲು ಮತ್ತು ಈ ಬಗ್ಗೆ ಬಿಎಸ್‌ಎನ್‌ಎಲ್ ಆಡಳಿತದ ವಿರುದ್ಧ ಕಾರ್ಮಿಕ ವಿವಾದ ಕಾಯ್ದೆ ಅಡಿಯಲ್ಲಿ ಕೇಸ್ ದಾಖಲಿಸಲು ರಾಜ್ಯ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಸಂಘ ನಿರ್ಧರಿಸಿದೆ.

ಆಗಸ್ಟ್ 13 ರಂದು ಪೀಣ್ಯದಲ್ಲಿರುವ ಪ್ರಾದೇಶಿಕ ಕೇಂದ್ರ ಕಾರ್ಮಿಕ ಆಯುಕ್ತರ ಕಛೇರಿ ಎದುರು ಪ್ರತಿಭಟನೆ ನಡೆಸಿ ಸಾಮೂಹಿಕವಾಗಿ ಕೇಸು ದಾಖಲಿಸಲು ನಿರ್ಧರಿಸಲಾಗಿದೆ. ಈ ಬಗ್ಗೆ ಈಗಾಗಲೇ ಸಾವಿರಾರು ಕರಪತ್ರವನ್ನು ಮುದ್ರಿಸಿ ಬಿಎಸ್‌ಎನ್‌ಎಲ್ ನೌಕರರ ಮತ್ತು ಗುತ್ತಿಗೆ ಕಾರ್ಮಿಕರ ನಡುವೆ ವ್ಯಾಪಕ ಪ್ರಚಾರ ನಡೆಸಲಾಗಿದೆ.

ಕೆ. ಮಹಾಂತೇಶ್

ಖಮ್ಮಂ ಗೋಲಿಬಾರ್ ಮತ್ತು ಕುರುಡು ಮಾಧ್ಯಮಗಳು



ಆಂಧ್ರ ಪ್ರದೇಶದ ಖಮ್ಮಂ ಸಮೀಪದ ಮುದಿಗೊಂಡದಲ್ಲಿ 7 ಜನರ ಶಾಂತಿಯುತ ಹೋರಾಟಗಾರರು ರೆಡ್ಡಿ ಸರ್ಕಾರದ ಪೊಲೀಸರ ಗುಂಡಿಗೆ ಬಲಿಯಾದರು.

ಕಳೆದ ಮೂರು ತಿಂಗಳಿಂದ ಆಂಧ್ರ ಪ್ರದೇಶದ ನಿವೇಶನರಹಿತ ಬಡವರಿಗೆ ನಿವೇಶನ ಭೂಮಿ ನೀಡಬೇಕೆಂದು ಒತ್ತಾಯಿಸಿ ಲಕ್ಷಗಟ್ಟಲೆ ಜನರು ರಾಜ್ಯವ್ಯಾಪಿ ಬೀದಿಗಿಳಿದು ಹೋರಾಡುತ್ತಿದ್ದರೂ ನಮ್ಮ ಹೆಚ್ಚಿನ ಪತ್ರಿಕೆ ಟಿ.ವಿ. ಚಾನೆಲ್‌ಗಳಿಗೆ ಅದೇನು ಅಂತಹ ಮಹತ್ವದ ಸುದ್ದಿಯಾಗಿರಲಿಲ್ಲ. ಹೆಚ್ಚೆಂದರೆ ಹೈದರಾಬಾದ್‌ನಲ್ಲಿ ಪೊಲೀಸರು ಚಳುವಳಿಕಾರರ ಮೇಲೆ ವಾಟರ್ ಜೆಟ್ ಪ್ರಯೋಗಿಸಿದ್ದೊಂದರ ಚಿತ್ರ ಹಾಕಿ ಕೈತೊಳೆದುಕೊಂಡಿದ್ದವು. ಹೋರಾಟದ ವಿವರ ಬೇಡಿಕೆಗಳ ಬಗೆಗೆ ಏನೂ ಇರಲಿಲ್ಲ.

ಗೋಲಿಬಾರ್ ನಡೆದ ಮೇಲೆ ಅದು ದೇಶವ್ಯಾಪಿ ಸುದ್ಧಿಯಾಯಿತು. ಕರ್ನಾಟಕದಲ್ಲೂ ಸಹ. ಅಂದರೆ ನಮ್ಮ ಮಾಧ್ಯಮಗಳಿಗೆ ಯಾರದ್ದಾದರೂ ತಲೆ ಉರುಳಬೇಕು, ರಕ್ತ ಚೆಲ್ಲಬೇಕು, ಆಗಷ್ಟೇ ಅದು ಸುದ್ದಿ. ಇದು ಒಂದು ಕಡೆ, ಮತ್ತೊಂದು ಕಡೆ ನಂದಿಗ್ರಾಮ ಗೋಲಿಬಾರ್ ಮತ್ತು ಖಮ್ಮಂ ಗೋಲಿಬಾರ್ ಎರಡೂ ಒಂದೇ ಎನ್ನುವಂತೆ, ಕಮ್ಯೂನಿಸ್ಟ್ ಪಕ್ಷಗಳೇ ಗೋಲಿಬಾರ್‌ಗೆ ಕಾರಣ ಎಂದು ಆರೋಪಿಸಿ ಹಲವು ಪತ್ರಿಕೆಗಳು ಬರೆದಿವೆ. ಆ ವಿಷಯದ ಆಳಕ್ಕೆ ಹೋಗಲು ತಯಾರಿಲ್ಲದೇ ಅಥವಾ ಮನಸ್ಸಿಲ್ಲದ ಅರೆಬೆಂದ ಲೇಖನಗಳು ಸಂಪಾದಕೀಯ ಎನ್ನುವ ಇಂತಹ ಅಪಕ್ವ ಬರಹಗಳನ್ನು ನೋಡಿದರೆ ನಮ್ಮ ಮಾಧ್ಯಮಗಳ ಪೂರ್ವಗ್ರಹ, ಕಣ್ಣಿಗೆ ರಾಚುತ್ತದೆ.

'ಅಗ್ನಿ' ವಾರಪತ್ರಿಕೆಯ ಸಂಪಾದಕರು, 'ಕಮ್ಯೂನಿಸ್ಟರು ಇತ್ತೀಚಿಗೆ ರಕ್ತಕ್ಕೆ ಹಾತೊರೆಯುವ ರಣ ಹದ್ದುಗಳಾಗುತ್ತಿದ್ದಾರೆ......... (ಆಂಧ್ರದಲ್ಲಿ) ರೈತರಿಗಿಂತ ಹೆಚ್ಚಾಗಿ ಕೆಂಬಾವುಟಗಳೇ ಹಾರಾಡತೊಡಗಿದವು......... ಪ್ರಕಾಶ್ ಕಾರಟ್... ಯೆಚೂರಿ.... ಎಂಬ ಲದ್ದಿಜೀವಿಗಳು....... ಇತ್ಯಾದಿ ಪದಗಳ ಮೂಲಕ ತಮ್ಮ ದಿವಾಳಿಯೆದ್ದ ಶಬ್ದ ಶ್ರೀಮಂತಿಕೆ, ಆಂಧ್ರ ನಿವೇಶನ ಚಳುವಳಿ ಬಗೆಗಿನ ತಮ್ಮ ಅಮೋಘ ಜ್ಞಾನವನ್ನು ಕಾರಿಕೊಂಡಿದ್ದಾರೆ.



ವಾರ್ತಾಭಾರತಿ ದಿನ ಪತ್ರಿಕೆಯು ತನ್ನ ಸಂಪಾದಕೀಯ ವೊಂದರಲ್ಲಿ 'ದೇಶದಲ್ಲಿ ಪ್ರಜಾಸತ್ತಾತ್ಮಕ ಹೋರಾಟ ಸೋಲುತ್ತಿದೆ ಎಂದು ಅವಲತ್ತುಕೊಂಡು ಅದಕ್ಕಾಗೇ ನಕ್ಸಲ್‌ವಾದ ಬೆಳೆಯುತ್ತಿದೆ ಎಂದು ಹೇಳುತ್ತಾ ಪರೋಕ್ಷವಾಗಿ ನಕ್ಸಲ್‌ವಾದವನ್ನು ಸಮರ್ಥಿಸಲು ಈ ಘಟನೆಯನ್ನು ಬಳಸಿಕೊಳ್ಳಲು ಯತ್ನಿಸಿದೆ.

ಇನ್ನು ಗೌರಿ ಲಂಕೇಶ್‌ರ ಲಂಕೇಶ್ ಪತ್ರಿಕೆಯು ಹೋರಾಟಗಾರರ ಎದೆಗೆ ಗುಂಡಿಕ್ಕಿದ ರಾಜಶೇಖರರೆಡ್ಡಿ ತನ್ನ ಮುಖ ಉಳಿಸಿಕೊಳ್ಳುವ ತಂತ್ರವಾಗಿ ಎಡಪಕ್ಷಗಳ ಬಗೆಗೆ ಆಡಿದ ಮಾತುಗಳ್ನೇ ಹಿಡಿದು ಎಡಪಕ್ಷಗಳನ್ನು ಛೇಡಿಸಲು ಹೊರಟಿದೆ.

ತಮ್ಮ ತಮ್ಮ ಪೂರ್ವಾಗ್ರಹಗಳನ್ನು ಬಿಟ್ಟು ಕೊಂಚ ವಿಷಯದ ಆಳಕ್ಕೆ ಹೋದರೆ ಸತ್ಯ ಏನೆಂದು ಅವರಿಗೇ ತಿಳಿಯುತ್ತದೆ. ಅದು ಇವರಿಗ್ಯಾಕೆ ಬೇಕು? ಅದು ಕಷ್ಟ ಬೇರೆ.

ನಂದಿಗ್ರಾಮದ ಗಲಭೆ ಒಂದು ರಾಜಕೀಯ ಪ್ರೇರಿತ ಗಲಭೆ. ಮಾರ್ಚ್ 7ರಂದೇ ಬಲವಂತದ ಭೂಮಿವಶ ಇಲ್ಲ ಎಂದು ಸರ್ಕಾರ ಸಾರಿದ್ದರೂ ಮಾರ್ಚ್ 14 ಗಲಭೆ ನಡೆಯಿತು. ಅದಕ್ಕೂ ಮೊದಲೇ ಯೋಜನೆಯ ಬೆಂಬಲಿಗರೆಂಬ ಕಾರಣಕ್ಕೆ 2 ಸಾವಿರಕ್ಕೂ ಹೆಚ್ಚು ಜನರನ್ನು ನಂದಿಗ್ರಾಮದಿಂದ ಓಡಿಸಲಾಗಿತ್ತು. ಅವರಿದ್ದ ನಿರಾಶ್ರಿತರ ಶಿಭಿರದ ಮೇಲೆ ದಾಳಿ ನಡೆಸಲಾಯಿತು. ಗ್ರಾಮದೊಳಗೆ ಉಳಿದ ಎಡರಂಗ ಬೆಂಬಲದ ಮೇಲೆ ಹಲ್ಲೆ, 150ಕ್ಕೆ ಹೆಚ್ಚು ಮನೆಗಳ ಲೂಟಿ, ಪ್ರೌಢಶಾಲಾ ವಿದ್ಯಾರ್ಥಿಯೊಬ್ಬಳ ಮೇಲೆ ತೃಣಮೂಲ ಬೆಂಗಲಿಗರಿಂದ ಅತ್ಯಾಚಾರ, ಕೊಲೆ ಎಲ್ಲವೂ ನಡೆಯುತ್ತಿದ್ದವು.

ರಸ್ತೆ ಅಗೆದು, ಸೇತುವೆ ಕೆಡವಿ ಹೊರಜಗತ್ತಿನೊಂದಿಗೆ ಸಂಪರ್ಕ ಕಡಿದುಹಾಕಲಾಗಿತ್ತು. ನಕ್ಸಲೀಯರು, ಮುಸ್ಲಿಂ ಮೂಲಭೂತವಾದಿಗಳು ಮುಂತಾದವರಿದ್ದ ಹೋರಾಟ ಸಮಿತಿಯು ಜನರನ್ನು ಜನರ ದಿಕ್ಕು ತಪ್ಪಿಸಿದ್ದರು. ಮಚ್ಚು, ಕೊಡಲಿ, ಬಂದೂಕು, ನಾಡ ಬಾಂಬುಗಳನ್ನು ಹೊಂದಿದ್ದ ಹೋರಾಟಗಾರರು ಕಾನೂನು ಸುವ್ಯವಸ್ಥೆ ಸ್ಥಾಪಿಸುವುದಕ್ಕಾಗಿ ಗ್ರಾಮ ಪ್ರವೇಶಕ್ಕೆ ಯತ್ನಿಸಿದ ಅಧಿಕಾರಿಗಳು ಮತ್ತು ಪೊಲೀಸರ ಮೇಲೆ ದಾಳಿ ಮಾಡಿದರು. ಇಂತಹ ಸಂದರ್ಭದಲ್ಲಿ ನಡೆದದ್ದು ದುರದೃಷ್ಟಕರವಾದ ಗೋಲಿಬಾರ್. ಮೂರು ನಾಲ್ಕು ತಿಂಗಳು ನಿರಾಶ್ರಿತ ಶಿಬಿರದಲ್ಲಿ ಬದುಕಬೇಕಾಗಿ ಬಂದ ಹೆಂಗಸರು ಮಕ್ಕಳ ಕಷ್ಟ ಕಾರ್ಪಣ್ಯಗಳನ್ನಾಗಲಿ, ಯೋಜನೆ ಸಂಪೂರ್ಣ ರದ್ದಾಗಿ ಹೋದ ಮೇಲೆ ಈಗಲೂ ನಂದಿಗ್ರಾಮಕ್ಕೆ ನಿರಾಶ್ರಿತರೆಲ್ಲರಿಗೂ ಮರು ಪ್ರವೇಶ ಸಿಕ್ಕಿಲ್ಲ ಎಂಬುದನ್ನಾಗಲೀ ಹೆಚ್ಚಿನ ಪತ್ರಿಕೆ ಟಿ.ವಿ.ಗಳವರು ಗಮನಿಸುವುದಕ್ಕೆ ತಯಾರೇ ಇಲ್ಲ ಎಂದರೆ ಏನಿದರ ಅರ್ಥ?

ರಕ್ತಕ್ಕಾಗಿ ಹಾತೊರೆಯುವುದು....., ರೈತರಿಗಿಂತ ಹೆಚ್ಚಾಗಿ ಕೆಂಬಾವುಟ.........., ಇಂತಹವುಗಳ ಬಗೆಗೆ. ಹೈದರಾಬಾದ್ ನಗರ ಒಂದರಲ್ಲೇ ಸುಮಾರು 1.5 ಲಕ್ಷ ಬಡಜನ ನಿವೇಶನಕ್ಕಾಗಿ ಅರ್ಜಿ ಕೊಟ್ಟು ಚಳುವಳಿಗಿಳಿದಿದ್ದಾರೆ. ರಾಜ್ಯದ ನೂರಾರು ನಗರ, ಪಟ್ಟಣ, ಹಳ್ಳಿಗಳಲ್ಲಿ....................ರಂದು ಉಪವಾಸ ಕುಳಿತ ಜನಗಳ ಸಂಖ್ಯೆಯೇ ಒಂದು ಲಕ್ಷ ಮೀರಿದೆ. ಜುಲೈ 28 ರಂದು ಆಂಧ್ರ ಬಂದ್ ಯಶಸ್ವಿಯಾಗಿದೆ ಎಂದರೆ ಇದೇನು ಸುಮ್ಮನೆಯೇ?

ಪುಟ 6 ಕ್ಕೆ



ದೇಶಪ್ರೇಮಿ ಯುವಜನರ ಸ್ವಾತಂತ್ರ್ಯ ಸಂರಕ್ಷಣಾ ಜಾಥಾ

ಸ್ವಾತಂತ್ರ್ಯದ ಸುಖವನ್ನು ಅನುಭವಿಸುತ್ತಿರುವ ನಾವು ಆ ಸುಖದ ಒಂದಂಶವನ್ನು ಸಮರ್ಪಣಾ ಭಾವದಿಂದ ದೇಶ ರಕ್ಷಣೆಗೆ ಮೀಸಲಿಟ್ಟಾಗ ಮಾತ್ರ ಸ್ವಾತಂತ್ರ್ಯ ಸಂರಕ್ಷಣೆ ಸಾಧ್ಯ ಎಂದು ಹಿರಿಯ ಸಾಹಿತಿ, ಜಾನಪದ ವಿದ್ವಾಂಸ ಡಾ: ಅಮೃತ ಸೋಮೇಶ್ವರ ಬುಧವಾರ ಇಲ್ಲಿ ತಿಳಿಸಿದರು.

ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆ ಭಗತ್‌ಸಿಂಗ್ ಜನ್ಮ ಶತಮಾನೋತ್ಸವ ಹಾಗೂ ಸ್ವಾತಂತ್ರ್ಯೋತ್ಸವದ 60ನೇ ವರ್ಷಾಚರಣೆಯ ಅಂಗವಾಗಿ ಡಿವೈಎಫ್‌ಐ ವತಿಯಿಂದ ಉಳ್ಳಾಲ ದಿಂದ ತುಮಕೂರಿನವರಿಗೆ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಸ್ವಾತಂತ್ರ್ಯ ಸಂರಕ್ಷಣಾ ಜಾಥಾವನ್ನು ತೊಕ್ಕೊಟ್ಟು ಜಂಕ್ಷನ್ ಬಳಿ ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಎಂಬುದು ಯಾರೋ ಕೊಡುವ ಅಥವಾ ಯಾರಿಂದಲೋ ಪಡೆಯುವ ದಾನವಲ್ಲ. ಅದೊಂದು ನಿರಂತರ ಚಲನಶೀಲ ಪ್ರಕ್ರಿಯೆ. ಆ ನಿರಂತರತೆ ಇರಬೇಕಾದರೆ, ಸ್ವಾತಂತ್ರ್ಯ ಪಡೆದ ಸಮಾಜದ ಜನರಲ್ಲಿ ಅದರ ಪರಿಕಲ್ಪನೆ ಇರಬೇಕು. ಸ್ವಾತಂತ್ರ್ಯಕ್ಕಾಗಿ ಹಿರಿಯರು ಕಂಡ ಕನಸುಗಳನ್ನು ಇಂದಿನ ತಲೆಮಾರಿನ ಜನ ಕಾಣುವ ಮೂಲಕ ಮುನ್ನಡೆಯಬೇಕು.

ಈ ಹಿನ್ನೆಲೆಯಲ್ಲಿ ಜನರು ತಾವು ಪಡೆದಿರುವ ಸ್ವಾತಂತ್ರ್ಯದೊಂದಿಗೆ ಪರಿಕಲ್ಪನೆಯಾಧಾರಿತ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಕಳವಳ : ಉಳ್ಳಾಲದ ವೀರರಾಣಿ ಅಬ್ಬಕ್ಕ ಮೆಟ್ಟಿದ ನೆಲದಲ್ಲಿ ಸಂರಕ್ಷಣಾ ಜಾಥಾ ಆರಂಭಗೊಳ್ಳುತ್ತಿರುವುದು ಹರ್ಷದ ಸಂಗತಿ. ರಾಣಿ ಅಬ್ಬಕ್ಕ ಬ್ರಿಟಿಷರಿಗೂ ಮೊದಲು ಪೋರ್ಚುಗೀಸರ ವಿರುದ್ಧ ಸೆಣಸಿ ಒಂದೆರಡು ಬಾರಿ ವಿಜಯಸಾಧಿಸಿದ್ದಳು. ಇದು 1857 ರಲ್ಲಿ ಮಹಿಳೆಯೊಬ್ಬಳು ಪ್ರಥಮವಾಗಿ ಮೊಳಗಿಸಿದ ಸ್ವಾತಂತ್ರ್ಯ ಕಹಳೆ ಎಂದು ಹಲವರು ಬಣ್ಣಿಸಿದರೆ, ಕೆಲವರು ಇದನ್ನು ಸಾಮಾನ್ಯ ಸಿಪಾಯಿದಂಗೆ ಎಂಬಂತೆ ಚಿತ್ರಿಸಿದ್ದಾರೆ. ಇದಕ್ಕೆ ಕಾರಣ ಇಂದು ಜನಸಾಮಾನ್ಯರಲ್ಲಿ ಮನೆ ಮಾಡಿರುವ ಅಭಿಪ್ರಾಯ ಭೇದ, ಅಲ್ಪತನ, ಸೌಹಾರ್ದತೆಯ ಕೊರತೆ ಎಂದು ವಿಷಾದಿಸಿದರು.

ಜನರು ಜಾತಿ, ಧರ್ಮ ಸೇರಿದಂತೆ ವಿವಿಧ ಕಾರಣಗಳಿಗೆ ತಮ್ಮದೇ ರೀತಿಯಲ್ಲಿ ಭಿನ್ನಾಭಿಪ್ರಾಯಗಳನ್ನು ಹೊಂದುವುದು ಸಹಜ. ಆದರೆ ಈ ಕಾರಣಗಳನ್ನು ಮುಂದಿಟ್ಟುಕೊಂಡು ರಾಷ್ಟ್ರದ್ರೋಹ ಕೃತ್ಯಗಳಲ್ಲಿ ತೊಡಗುವುದು ಅಕ್ಷಮ್ಯ ಅಪರಾಧ ಎಂದರು.

ದಾಸ್ಯದತ್ತ : ಡಿವೈಎಫ್‌ಐನ ಕೇರಳ ರಾಜ್ಯ ಮುಖಂಡ ವಿ.ವಿ.ರಮೇಶನ್ ಮಾತನಾಡಿ, ಜಾಗತೀಕರಣದ ಹಿನ್ನೆಲೆಯಲ್ಲಿ ದೇಶ ಮತ್ತೊಮ್ಮೆ ವಿದೇಶಿಗರ ದಾಸ್ಯತನಕ್ಕೆ ಈಡಾಗುವ ಅಪಾಯವಿದೆ ಎಂದು ಆತಂಕ ವ್ಯಕ್ತಪಡಿಸಿದರು. ಸ್ವಾತಂತ್ರ್ಯಾನಂತರದ ಅವಧಿಯಲ್ಲಿ ಈಚಿಗೆ ಭಾರತವನ್ನಾಳಿದ ಸರ್ಕಾರಗಳಿಗೆ ಬಡತನ, ಹಸಿವು, ನಿರುದ್ಯೋಗಗಳನ್ನಲ್ಲದೆ ಬೇರೆ ಏನನ್ನೂ ನೀಡಲಾಗಿಲ್ಲ ಎಂದು ವಿಷಾದಿಸಿದ ಅವರು, ಈ ಹಿನ್ನೆಲೆಯಲ್ಲಿ ಭಾರತ ಬದಲಾವಣೆಯನ್ನು ಎದುರು ನೋಡುತ್ತಿದೆ ಎಂದರು.

ಡಿವೈಎಫ್‌ಐ ಜಿಲ್ಲಾ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಅಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಜಿಲ್ಲಾ ಕಾರ್ಯದರ್ಶಿ ಅಶೋಕ್ ಕೊಂಚಾಡಿ, ಸಿಐಟಿಯು ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ಆರ್.ಶ್ರೀಯಾನ್, ಉದ್ಯಮಿ ಬಿ.ಎಂ. ಮುಮ್ತಾಜ್ ಅಲಿ, ಅಖಿಲ ಭಾರತ ವಕೀಲರ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷ ಯಶವಂತ ಮರೋಳಿ, ರೈತ ಸಂಘದ ಜಿಲ್ಲಾ ಮುಖಂಡ ರಾಮಚಂದ್ರ ಉಚ್ಚಿಲ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇದಕ್ಕೂ ಮುನ್ನ ಉಳ್ಳಾಲದ ರಾಣಿ ಅಬ್ಬಕ್ಕ ವೃತ್ತದಲ್ಲಿ ಅಬ್ಬಕ್ಕರ ಪ್ರತಿಮೆಗೆ ಡಾ: ಅಮೃತ ಸೋಮೇಶ್ವರ ಹಾರಾರ್ಪಣೆ ಮಾಡಿದರು ಹಾಗೂ ರಾಷ್ಟ್ರ ಧ್ವಜವನ್ನು ಡಿವೈಎಫ್‌ಐ ಜಿಲ್ಲಾಧ್ಯಕ್ಷರಾದ ಮುನೀರ್ ಕಾಟಿಪಳ್ಳರವರಿಗೆ ಹಸ್ತಾಂತರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಡಿವೈಎಫ್‌ಐ ಕೇಂದ್ರ ಸಮಿತಿ ಸದಸ್ಯ ರಮೇಶನ್ ಡಿವೈಎಫ್‌ಐ ಧ್ವಜವನ್ನು ಜಾಥಾ ತಂಡದ ನಾಯಕರಾದ ಸುನಿಲ್‌ಕುಮಾರ್ ಬಜಾಲ್‌ಗೆ ಹಸ್ತಾಂತರಿಸಿದರು. ಬಳಿಕ 500ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಡಿವೈಎಫ್‌ಐ ಕಾರ್ಯಕರ್ತರು ತೊಕ್ಕೊಟ್ಟು ಜಂಕ್ಷನ್‌ವರೆಗೆ ಘೋಷಣೆಗಳನ್ನು ಕೂಗುತ್ತಾ ಆಕರ್ಷಕ ಮೆರವಣಿಗೆ ನಡೆಸಿದರು. ಸಾರ್ವಜನಿಕ ಸಭೆಯ ನಂತರ ಜಾಥಾ ತಂಡದ ಕಲಾವಿದರಿಂದ ಸ್ವಾತಂತ್ರ್ಯ ಹೋರಾಟದ ಆಶಯಗಳನ್ನು ಬಿಂಬಿಸುವ ಬೀದಿ ನಾಟಕ, ಭಾವೈಕ್ಯ ಗೀತೆ ಹೋರಾಟದ ಹಾಡುಗಳು ನೆರೆದ ಜನರ ಗಮನ ಸೆಳೆಯಿತು.

ಕಲ್ಯಾಣ ಕ್ರಾಂತಿ ನಾಡಿನಿಂದಲೂ

ಇನ್ನೊಂದು ಜಾಥಾವು ಬಸವಕಲ್ಯಾಣದಿಂದ 9 ರಂದು ಉದ್ಘಾಟನೆಗೊಂಡಿತು. ಖ್ಯಾತ ಚಿಂತಕ ಡಾ. ಕಾಶಿನಾಥ ಅಂಬಲಿಗೆ ಉದ್ಘಾಟಿಸಿದರು. ಕೆ.ನೀಲಾ, ಮಾರುತಿ ಮಾನ್ಪಡೆ ಮುಂತಾದವರು ಭಾಗವಹಿಸಿ ಮಾತನಾಡಿದ್ದಾರೆ. ಜಾಥಾದ ನಾಯಕತ್ವವನ್ನು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಭರತ್ ರಾಜ್ ವಹಿಸಿದ್ದಾರೆ. 15 ರಂದು ಈ ಜಾಥಾವು ತುಮಕೂರಿಗೆ ತಲುಪಲಿದೆ.

■ ಮುನೀರ್ ಕಾಟಿಪಳ್ಳ

ಕುಂದಾಪುರ

ಸುಳ್ಳು ಸುದ್ದಿಗಳದ್ದೇ ಸಾಮ್ರಾಜ್ಯ

ಇಲ್ಲದ ಖಾಯಿಲೆ ಸಲ್ಲದ ಆರೋಪ ಮಹಿಳೆಗೆ ಮಾನಸಿಕ ಯಾತನೆ

ಕುಂದಾಪುರ ತಾಲ್ಲೂಕು ಅಮಾವಾಸ್ಯೆ ಬಯಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ತೊಂಬಟ್ಟು ಪರಿಸರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಯಲಕ್ಷ್ಮಿ ಬೋವಿ ಎನ್ನುವ ಮಹಿಳೆ ತಯಾರಿಸಿದ ಬಿಸಿಯೂಟವನ್ನು ಶಾಲಾಮಕ್ಕಳು ಊಟ ಮಾಡಲು ನಿರಾಕರಿಸುತ್ತಿದ್ದು ಸುಮಾರು ಒಂದು ತಿಂಗಳಿನಿಂದ ಈ ಪ್ರಕರಣವು ಅಂತ್ಯ ಕಾಣದೆ ಸಾಗಿದೆ. ಜಯಲಕ್ಷ್ಮಿ ಬೋವಿಯವರಿಗೆ ಏಡ್ಸ್ ಇದೆ ಎಂದು ಪರಿಸರದ ಕೆಲವರು ಸುದ್ದಿ ಹಬ್ಬಿಸಿದ್ದೆ ಈ ಘಟನೆಗೆ ಕಾರಣವಾಗಿದೆ. ಜಯಲಕ್ಷ್ಮಿಯವರನ್ನು ಜುಲೈ ಒಂದರಂದು ಪರಿಸರದ ಸ್ತ್ರೀ ಶಕ್ತಿ ಸಂಘದ ಶಿಫಾರಸ್ಸಿನ ಮೇರೆಗೆ ಅಡುಗೆ ಸಹಾಯಕಿಯಾಗಿ ಮುಖ್ಯೋಪಾಧ್ಯಾಯರು ನೇಮಕ ಗೊಳಿಸಿದ್ದರು. ಇದಾದ ಕೆಲವೇ ದಿನದಲ್ಲಿ ಜಯಲಕ್ಷ್ಮಿಯವರ ಪತಿ ಕ್ಯಾನ್ಸರ್ ನಿಂದಾಗಿ ಮರಣ ಹೊಂದಿದ್ದರೂ ಏಡ್ಸ್ ಬಂದು ಮೃತಪಟ್ಟಿರುವುದಾಗಿ ಸುಳ್ಳು ಸುದ್ದಿಹಬ್ಬಿಸಲಾಯಿತು. ಈಗ ಜಯಲಕ್ಷ್ಮಿಯವರಿಗೂ ಏಡ್ಸ್ ಇದೆ ಎಂಬುದಾಗಿ ಸುಳ್ಳು ವದಂತಿಗಳನ್ನು ಹಬ್ಬಿಸಿದ್ದರಿಂದ ಶಾಲಾ ಮಕ್ಕಳ ಪೋಷಕರು ಮಕ್ಕಳನ್ನು ಬಿಸಿಯೂಟ ಮಾಡಲು ಬಿಡುತ್ತಿಲ್ಲ. ಜಯಲಕ್ಷ್ಮಿಯವರನ್ನು ಈ ಕೆಲಸದಿಂದ ತೆಗೆದು ಹಾಕಬೇಕೆಂದು ಶಾಲಾ ಆಡಳಿತದ ಮೇಲೆ ಒತ್ತಡ ಹೇರಲಾಗಿದೆ. ಜಯಲಕ್ಷ್ಮಿಯವರು ಸ್ಥಳೀಯ ಸಾಮಾಜಿಕ ಕಾರ್ಯಕರ್ತೆಯವರ ಮುಖಾಂತರ ಬ್ರಹ್ಮಾವರದ ವಿ.ಸಿ.ಟಿ.ಸಿ. ಕೇಂದ್ರದಲ್ಲಿ ಎಚ್.ಐ.ವಿ. ಪರೀಕ್ಷೆ ಮಾಡಿಸಿಕೊಂಡಿದ್ದು, ಎಚ್.ಐ.ವಿ. ಇಲ್ಲದಿರುವುದು ದೃಢಪಟ್ಟಿದೆ. ಈ ಬಗ್ಗೆ ದೃಢೀಕರಣ ಪತ್ರವನ್ನು ಶಾಲೆಗೆ ನೀಡಿರುತ್ತಾರೆ. ಇಲಾಖೆ ವತಿಯಿಂದ ಯಾವುದೇ ಸಮಸ್ಯೆ ಇಲ್ಲದಿದ್ದರೂ ಸ್ಥಳೀಯರ ಅಸಹಕಾರದಿಂದ ಸಮಸ್ಯೆ ಗಂಭೀರವಾಗಿಯೇ ಇದೆ.

ಈ ಅಜ್ಞಾನಕ್ಕೆ ಈ ಪರಿಯ ಕಿಡಿಗೇಡಿತನಕ್ಕೆ ಏನೆಂದು ಹೇಳುವುದು. ಮಹಿಳೆಯೊಬ್ಬರಿಗೆ ಏಡ್ಸ್ ಇದೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಗಿದೆ. ಏಡ್ಸ್ ಇದ್ದರೂ ಅಡುಗೆ ಕೆಲಸ ಮಾಡಲು ಅದೇನು ಅಡ್ಡಿಯಿಲ್ಲ. ಅಂಥಾದ್ದರಲ್ಲಿ....

ಈ ಬಗ್ಗೆ ಜಿಲ್ಲಾ ಪಂಚಾಯತ್ ನಿಯೋಗ ಹಾಗೂ ಪತ್ರಕರ್ತರ ತಂಡಗಳು ಶಾಲೆಗೆ ಭೇಟಿ ನೀಡಿ ಜಯಲಕ್ಷ್ಮಿಯವರು ಸಿದ್ದಪಡಿಸಿದ ಬಿಸಿಯೂಟವನ್ನು ಊಟ ಮಾಡುವುದರ ಮೂಲಕ ಮಕ್ಕಳಿಗೆ ಧೈರ್ಯ ತುಂಬಲು ಪ್ರಯತ್ನಿಸಿದರೂ ಫಲಕಾರಿಯಾಗಿಲ್ಲ. ಜಿಲ್ಲಾ ಪಂಚಾಯತ್ ನಿಯೋಗದಲ್ಲಿ ಅಧಿಕಾರಿಗಳೂ ಭಾಗವಹಿಸಿರುತ್ತಾರೆ.

ಕುಂದಾಪುರ ತಾಲ್ಲೂಕು ಬಿಸಿಯೂಟ ನೌಕರರ ಸಂಘದ ಮುಖಂಡರು ಘಟನೆ ತಿಳಿದ ತಕ್ಷಣ ಅಧಿಕಾರಿಗಳನ್ನು ಭೇಟಿಯಾಗಿ ಪ್ರಕರಣದ ವಿವರ ತಿಳಿದು ಇಲಾಖಾ ವತಿಯಿಂದ ಯಾವುದೇ ಸಮಸ್ಯೆ ಇಲ್ಲದಿರುವುದನ್ನು ದೃಢಪಡಿಸಿಕೊಂಡಿರುತ್ತಾರೆ. ಗ್ರಾಮದ ಕೆಲವರ ವೈಯಕ್ತಿಕ ಹಿತಾಸಕ್ತಿಯಿಂದಾಗಿ ಪ್ರಕರಣ ಗಂಭೀರ ಸ್ವರೂಪ ಪಡೆದಿದೆ. ಇದರಿಂದಾಗಿ ಜಯಲಕ್ಷ್ಮಿಯವರು ತೀರಾ ಮಾನಸಿಕ ಹಿಂಸೆಗೊಳಪಡುವಂತಾಗಿದೆ ಜಯಲಕ್ಷ್ಮಿಯವರಿಗೆ ಇನ್ನು ನಾಲ್ವರು ಸಹೋದರಿಯರಿದ್ದು ಅವರಿಗಿನ್ನೂ ಮದುವೆಯಾಗಿರದ ಕಾರಣ ಈ ರೀತಿಯ ಸುಳ್ಳು ವದಂತಿ ಗಳಿಂದಾಗಿ ಸಹೋದರಿಯರ ಭವಿಷ್ಯತ್ತಿಗೂ ಹಾನಿಯಾಗಿದೆ.

ಈ ಪ್ರಕರಣದಲ್ಲಿ ಸ್ಥಳೀಯ ಜನತೆ ಸುಳ್ಳುಗಳಿಗೆ ಕಿವಿಗೊಡದೆ, ಮಕ್ಕಳ ಮನಸ್ಸಿನಲ್ಲಿ ಸಲ್ಲದ ವಿಚಾರವನ್ನು ತುರುಕದೆ ಬಿಸಿಯೂಟವನ್ನು ಎಲ್ಲಾ ಮಕ್ಕಳೂ ಉಣ್ಣುವಂತೆ ಸಹಕರಿಸಿದರೆ ಪ್ರಕರಣ ಸುಖಾಂತ್ಯಗೊಳ್ಳಲಿದೆ. ಆದರೆ ಚಿಂತಿಸಬೇಕಾದ ಒಂದು ಸಂಗತಿ. ಇಂತಹ ಸುಳ್ಳು ಸುದ್ದಿಗಳಿಗೆ ಜನ ಯಾಕೆ ಇಷ್ಟು ಬಲಿಬೀಳುತ್ತಾರೆ? ಇದೇ ರೀತಿ ಹಿಂದೆ ಸೂಜಿ ಪ್ರಕರಣವೂ ಕೋಮುಗಲಭೆಗೆ ಕಾರಣವಾಗಿತ್ತಲ್ಲ. ಅಷ್ಟೂ ಮರೆವೆಯೇ?

■ ಚಂದ್ರಶೇಖರ್.ವಿ

........ಕುರುಡು ಮಾಧ್ಯಮಗಳು

ಪುಟ 5 ರಿಂದ

ವ್ಯಾಪಕ ಜನಬೆಂಬಲವಿಲ್ಲದೇ ಇಂತಹ ಒಂದು ಹೋರಾಟವಾದರೂ ಸಾಧ್ಯವೇ?

ಆಂಧ್ರ ಸರ್ಕಾರ ಹರಮಾರಿಯಾಗಿದೆ. ಇಡೀ ರಾಜ್ಯದಲ್ಲಿ ಚಳುವಳಿಯ ದಮನಕ್ಕೆ ನಿಂತಿದೆ.

ಸಂಚಾಲಕ ವೆಂಕಟ್‌ರವರಿಗೆ ಬೇಡಿ ತೊಡಿಸ್ಬಿ ಎಳೆದೊಯ್ಯಲಾಗಿದೆ. 520 ಮಹಿಳೆಯರು ಸೇರಿದಂತೆ 3080 ಜನರನ್ನು ಜೈಲಿಗಟ್ಟಲಾಗಿದೆ. ಸುಮಾರು 25,000 ಮೊಕದ್ದಮೆಗಳನ್ನು ಹೂಡಲಾಗಿದೆ. ಈ ಎಲ್ಲ ಹೋರಾಟಗಳಲ್ಲಿ ಸಿಪಿಐ(ಎಂ) ಪಕ್ಷದ ಮುಖಂಡರು ಮುಂಚೂಣಿಯಲ್ಲಿ ನಿಂತು ಪೊಲೀಸರ ಲಾಠಿ ಬೂಟುಗಳಿಗೆ ಮೈಯೊಡ್ಡಿದ್ದಾರೆ.

ಸಿಪಿಐ(ಎಂ)ನ ರಾಷ್ಟ್ರ ನಾಯಕರು ಮುಂದಿನ ಚಳುವಳಿಯಲ್ಲಿ ಭಾಗವಹಿಸಲು ಸಜ್ಜಾಗಿದ್ದಾರೆ.

ಇದನ್ನು ಯಾರಾದರೂ ಪ್ರಹಸನ, ನಾಟಕ ಎಂದು ಕರೆದರೆ ಅವರ ಪ್ರಾಮಾಣಿಕತೆಯ ಬಗ್ಗೆ ಅನುಮಾನ ಮೂಡುತ್ತದೆ ಅಷ್ಟೆ. ಜನ ಇದಕ್ಕೆ ಸರಿಯಾದ ಉತ್ತರ ಕೊಡುತ್ತಾರೆ. ಪಶ್ಚಿಮ ಬಂಗಾಳದ ಜನ ಈಗಾಗಲೇ ಭಾಗಶಃ ಉತ್ತರ ಕೊಟ್ಟಿದ್ದಾರೆ.

ಇತ್ತೀಚೆಗೆ ನಡೆದ ನಂದಿಗ್ರಾಮದ ಸ್ಥಳೀಯ ಸಂಸ್ಥೆಯ ಉಪ ಚುನಾವಣೆಗಳಲ್ಲಿ ತೃಣಮೂಲ ಕಾಂಗ್ರೆಸ್ ಮೊದಲು ಇದ್ದ ಸ್ಥಾನವನ್ನು ಕಳೆದುಕೊಂಡಿದೆ. ಅದು ಸಿಪಿಐ(ಎಂ) ಪಾಲಿಗಿದೆ. ಎಡರಂಗದ ಬಲ ಮೊದಲಿಗಿಂತ ಹೆಚ್ಚಾಗಿದೆ. ಅಧಿಕಾರಕ್ಕೆ ಬಂದಿದೆ. ಇದೀಗ ಇದೇ ನಂದಿಗ್ರಾಮದ ಸಮೀಪದ ಹಲ್ದಿಯಾ ನಗರಸಭಾ ಚುನಾವಣೆಯಲ್ಲಿ 26 ಸ್ಥಾನಗಳಲ್ಲಿ 19 ಸ್ಥಾನಗಳನ್ನು ಗೆದ್ದು ತನ್ನ ವಿಜಯ ಯಾತ್ರೆ ಮುಂದುವರಿಸಿದೆ.

ಜನ ಪತ್ರಿಕೆಗಳನ್ನು ಓದಿ, ಟಿ.ವಿಗಳನ್ನು ನೋಡಿ ಅಭಿಪ್ರಾಯ ರೂಪಿಸಿಕೊಳ್ಳುವುದಕ್ಕಿಂತ ತಮ್ಮ ಜೀವನಾನುಭವದ ಮೂಲಕ ಅಭಿಪ್ರಾಯ ರೂಪಿಸಿಕೊಳ್ಳುತ್ತಾರೆ. ರೈತರನ್ನು, ಬಡವರನ್ನು ಕೊಲ್ಲುವವರು ಯಾರು ಎಂಬ ವಿಚಾರ ಎಷ್ಟೋ ಮಾಧ್ಯಮಜೀವಿಗಳಿಗೆ ಗೊತ್ತಿಲ್ಲದಿರಬಹುದು. ಆದರೆ ಜನಕ್ಕೆ ಅದು ಗೊತ್ತಿರುತ್ತದೆ. ಜನ ಮೂರ್ಖರಲ್ಲ.

ಜನ ಪಶ್ಚಿಮಬಂಗಾಳದ ಪತ್ರಿಕೆ ಟಿ.ವಿ.ಗಳನ್ನು ನಂಬುವವರಾಗಿದ್ದರೆ ಎಡರಂಗ ಪಶ್ಚಿಮ ಬಂಗಾಳದಲ್ಲಿ ಎಂದೋ ಗಂಟುಮೂಟೆ ಕಟ್ಟಬೇಕಾಗುತ್ತಿತ್ತು.

ಭಾರತ-ಅಮೆರಿಕಾ ಅಣ್ವಸ್ತ್ರ ಒಪ್ಪಂದ

ಎಡಪಕ್ಷಗಳ ನಕಾರ

ಪ್ರಸ್ತುತ ಅಣ್ವಸ್ತ್ರ ಸಹಕಾರ ಒಪ್ಪಂದವನ್ನು ಅಮೇರಿಕಾದೊಂದಿಗೆ ಭಾರತವು ಸಾಧಿಸ ಹೊರಟಿರುವ ಒಟ್ಟಾರೆ ಮೈತ್ರಿಯಿಂದ ಪ್ರತ್ಯೇಕಿಸಿ ನೋಡಬಾರದೆಂದು ಎಡಪಕ್ಷಗಳು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿವೆ. ದ್ವಿಪಕ್ಷೀಯ ಅಣ್ವಸ್ತ್ರ ಒಪ್ಪಂದವು ಭಾರತವನ್ನು ಅಮೇರಿಕಾದ ತಂತ್ರಗಾರಿಕೆಗೆ ಸಿಲುಕಿಸುವ ಸಾಧನವಾಗಿದೆ.

ಭಾರತವು ಅಮೇರಿಕಾದೊಂದಿಗೆ ಬೆಳೆಸ ...ರುಸುತ್ತಿರುವ ವ್ಯೆತ್ರಿಯ ಹಿನ್ನೆಲೆಯಲ್ಲಿ 'ಭಾರತ-ಅಮೇರಿಕಾ' ನಡುವಿನ ದ್ವಿಪಕ್ಷೀಯ ಅಣ್ವಸ್ತ್ರ ಒಪ್ಪಂದವನ್ನು ಎಡ ಪಕ್ಷಗಳು ಒಪ್ಪದೆ ತಿರಸ್ಕರಿಸಿವೆ. '123 ಒಪ್ಪಂದ'ವೆಂದು ಕರೆಯಲಾಗುವ ಈ ಒಪ್ಪಂದವನ್ನು ಗಂಭೀರವಾಗಿ ಅಧ್ಯಯನ ಮಾಡಿದ ನಂತರ ಈ ತೀರ್ಮಾನಕ್ಕೆ ಬರಲಾಗಿದೆ. ಭಾರತ-ಅಮೇರಿಕಾ ನಡುವಿನ ವ್ಯೂಹಾತ್ಮಕ ಮೈತ್ರಿ ಸಂಬಂಧ ...ರಿತಂತೆ ಲೋಕಸಭೆಯಲ್ಲಿ ಪರಾಮರ್ಶೆ ...ರಾಗುವವರೆಗೂ ಸರ್ಕಾರವು ಈ ಒಪ್ಪಂದವನ್ನು ಕಾರ್ಯರೂಪಕ್ಕೆ ತರದಂತೆ ತಾಕೀತು ಮಾಡಿವೆ. ಅಂತರಾಷ್ಟ್ರೀಯ ಒಪ್ಪಂದಗಳು ಮತ್ತು ಕೆಲವು ...ಪಕ್ಷೀಯ ಒಪ್ಪಂದಗಳನ್ನು ಲೋಕಸಭೆಯಲ್ಲಿ ಅನುಮೋದನೆ ಪಡೆದ ನಂತರವೇ ...ರಿಗೊಳಿಸುವಂತೆ ಮಾಡಲು ಸಂವಿಧಾನಾತ್ಮಕ ...ದ್ದುಪಡಿಗಾಗಿ ಒತ್ತಾಯಿಸುವುದಾಗಿ ಅವು ಹೇಳಿವೆ.

123 ಒಪ್ಪಂದ

123 ಒಪ್ಪಂದದ ಪ್ರಕಾರ ಭಾರತವು ತನ್ನ ನಾಗರೀಕ ಅಣುಶಕ್ತಿ ಕಾರ್ಯಗಳನ್ನು ಅಂದರೆ ಅಣುಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವ ಅಣು ಸಂಶೋಧನಾ ಕಾರ್ಯಗಳನ್ನು ಮಿಲಿಟರಿ ಅಣ್ವಸ್ತ್ರ ವ್ಯಾಪ್ತಿಯಿಂದ ಬೇರ್ಪಡಿಸಬೇಕು, ತನ್ನ ನಾಗರೀಕ ಅಣುಶಕ್ತಿ ಸ್ಥಾವರಗಳನ್ನು ಅಂತರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ(ಐಎಇಎ)ಯ ತಪಾಸಣೆಗೆ ಒಳಪಡಿಸಬೇಕು, ಅಣ್ವಸ್ತ್ರ ಪರೀಕ್ಷೆ ಮಾಡಬಾರದು, ಇತ್ಯಾದಿ. ಇದಕ್ಕೆ ಪ್ರತಿಯಾಗಿ ಅಮೇರಿಕಾವು ವಿಶ್ವದರ್ಜೆಯ ಅಣುಶಕ್ತಿ ಉತ್ಪಾದನಾ ಸಾಮಗ್ರಿ ಮತ್ತು ತಂತ್ರಜ್ಞಾನವನ್ನು ಭಾರತಕ್ಕೆ ನೀಡುವುದು. ಇನ್ನಿತರ ಐದು ಅಣ್ವಸ್ತ್ರ ಸರಬರಾಜುದಾರ ರಾಷ್ಟ್ರಗಳಿಂದಲೂ ಭಾರತಕ್ಕೆ ಅಣ್ವಸ್ತ್ರ ಸಾಮಗ್ರಿ ದೊರಕುವಂತೆ ಮಾಡಲು ದೊಡ್ಡಣ್ಣನ ಪಾತ್ರ ವಹಿಸುವುದು, ಇತ್ಯಾದಿ.

ಭಾರತಕ್ಕೆ ಅಮೇರಿಕಾದ ಗಾಳ

ಪ್ರಸ್ತುತ ಅಣ್ವಸ್ತ್ರ ಸಹಕಾರ ಒಪ್ಪಂದವನ್ನು ಅಮೇರಿಕಾದೊಂದಿಗೆ ಭಾರತವು ಸಾಧಿಸ ಹೊರಟಿರುವ ಒಟ್ಟಾರೆ ಮೈತ್ರಿಯಿಂದ ಪ್ರತ್ಯೇಕಿಸಿ ನೋಡಬಾರದೆಂದು ಎಡಪಕ್ಷಗಳು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿವೆ. ಈ ಒಪ್ಪಂದವು 2005ರ ಜೂನ್ ಮತ್ತು ಜುಲೈನಲ್ಲಿ ಭಾರತ - ಅಮೇರಿಕಾ ನಡುವೆ ಏರ್ಪಟ್ಟಿರುವ ಮಿಲಿಟರಿ ಒಪ್ಪಂದ ಮತ್ತು ಅವು ನೀಡಿರುವ ಜಂಟಿ ಹೇಳಿಕೆಯ ಭಾಗವಷ್ಟೆ. ಹೀಗಾಗಿ, ಭಾರತದ ಸ್ವತಂತ್ರ ವಿದೇಶಾಂಗ ನೀತಿ, ಮಿಲಿಟರಿ ಸ್ವಾಯತ್ತತೆ ಮತ್ತು ಏಷ್ಯಾದಲ್ಲಿ ಭಾರತವು ಅಮೇರಿಕಾದ ನಂಬಿಕಾರ್ಹ ಮಿತ್ರನಾಗುವುದರಿಂದ ಉದ್ಭವಿಸುವ ದುಷ್ಪರಿಣಾಮಗಳು - ಇವೆಲ್ಲ ತೊಡಕುಗಳನ್ನು ಪರಿಗಣಿಸದೆ ಅಮೇರಿಕಾದೊಂದಿಗಿನ '123' ಒಪ್ಪಂದವನ್ನು ಪ್ರತ್ಯೇಕ ಒಪ್ಪಂದವೆಂದು ನೋಡಲು ಸಾಧ್ಯವಿಲ್ಲ. ಜಾಗತಿಕ ಮಟ್ಟದಲ್ಲಿ ಎರಡು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳು ಒಗ್ಗೂಡುತ್ತಿವೆ ಎಂದು ಬೊಗಳೆ ಬಿಡುತ್ತಿರುವುದು, ಪರಸ್ಪರ ಭಾರತ- ಅಮೇರಿಕಾಗಳ ನಡುವೆ ಆರ್ಥಿಕ-ವಾಣಿಜ್ಯ ಕ್ಷೇತ್ರಗಳಲ್ಲಿ ಹೆಚ್ಚುತ್ತಿರುವ ಪ್ರಭಾವ, ಸೇನೆ ಬೀಡು ಬಿಡಲು ಬೆಂಬಲ ನೀಡುವ ಒಪ್ಪಂದದ ಮೂಲಕ ರಾಚುತ್ತಿರುವ ಮಿಲಿಟರಿ ಸಹಭಾಗಿತ್ವ, ಜಂಟಿ ಕಾರ್ಯಾಚರಣೆಗಳು ಮತ್ತು ಭಾರತವು ತನ್ನಿಂದ ದುಬಾರಿ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳಬೇಕೆಂದು ಅಮೇರಿಕಾ ಪೀಡಿಸುತ್ತಿರುವುದು - ಇಂತಹ ಕ್ರಮಗಳ ಮೂಲಕ ಭಾರತವನ್ನು ರಾಜಕೀಯ, ಆರ್ಥಿಕ ಮತ್ತು ಮಿಲಿಟರಿ ಸಂಬಂಧಗಳ ಚಕ್ರವ್ಯೂಹದೊಳಗೆ ಸಿಲುಕಿಸಲು ಯತ್ನಿಸಲಾಗುತ್ತಿದೆ. ಇದರ ಜೊತೆಗೆ ಭಾರತವು ಅಂತರಾಷ್ಟ್ರೀಯ ಅಣು ಶಕ್ತಿ ಸಂಸ್ಥೆ(ಐಎಇಎ) ಯಲ್ಲಿ ಇರಾನ್ ವಿರುದ್ಧ ಎರಡು ಬಾರಿ ಮತ ಚಲಾಯಿಸಿದ್ದೂ ಅಲ್ಲದೆ, ಇರಾನ್‌ನ್ನು ಮೂಲೆಗುಂಪು ಮಾಡಲು ತನಗೆ ಮುಂದೆಯೂ ಸಹಕಾರ ನೀಡುತ್ತದೆಂದು ಅಮೇರಿಕಾ ಸ್ಪಷ್ಟ ನಿರೀಕ್ಷೆ ಇಟ್ಟುಕೊಂಡಿದೆ.

ಆತಂಕಕಾರಿ ಹೈಡ್ ಕಾಯಿದೆ

ಅಮೇರಿಕಾ ತನ್ನ ಎರಡೂ ಸದನಗಳಲ್ಲಿ ಅಂಗೀಕಾರ ಮಾಡಿರುವ ಹೈಡ್ ಕಾಯಿದೆ (ಹೆನ್ರಿ ಜೆ ಹೈಡ್ ಅಮೇರಿಕಾ-ಭಾರತ ಶಾಂತಿಯುತ ಅಣುಶಕ್ತಿ ಸಹಕಾರ ಒಪ್ಪಂದ ಕಾಯಿದೆ) ಯಲ್ಲಿ ಅಣ್ವಸ್ತ್ರ ಸಹಕಾರಕ್ಕೆ ಸಂಬಂಧವಿಲ್ಲದ, ಅಮೇರಿಕಾದ ಬೇಳೆ ಬೇಯಿಸಿಕೊಳ್ಳುವಂತಹ ಹತ್ತು ಹಲವು ವಿಷಯಗಳನ್ನು ತುರುಕಲಾಗಿದೆ. ಅವುಗಳಲ್ಲಿ ಕೆಲವೆಂದರೆ:

1) ಭಾರತದ ವಿದೇಶಾಂಗ ನೀತಿಯು ಅಮೇರಿಕಾದ ವಿದೇಶಾಂಗ ನೀತಿಗೆ ಅನುಸಾರವಾಗಿದೆಯೆಂದು ಅಮೇರಿಕಾದ ಅಧ್ಯಕ್ಷನು ಅಲ್ಲಿನ ಸಂಸತ್ತಿಗೆ ವಾರ್ಷಿಕ ವರದಿ ನೀಡಬೇಕು, ಅದರಲ್ಲೂ ವಿಶೇಷವಾಗಿ ಇರಾನ್‌ನ್ನು ಮೂಲೆಗುಂಪು ಮಾಡಿ ದಿಗ್ಬಂದನ ವಿಧಿಸಲು ಭಾರತ ಬೆಂಬಲ ನೀಡುತ್ತಿರುವ ಬಗ್ಗೆ ತಿಳಿಸಬೇಕು.

2) ಕಾನೂನುಬಾಹಿರವಾಗಿ ಅಂತರಾಷ್ಟ್ರೀಯ ಜಲಗಡಿಯೊಳಗೆ ಯುದ್ಧ ನೌಕೆಗಳು ಸಂಚರಿಸಲು ಅನುಮತಿ ನೀಡವುದು ಒಳಗೊಂಡಂತೆ ಅಣ್ವಸ್ತ್ರ ಪ್ರಸರಣ ಭದ್ರತೆಗಾಗಿ ಅಮೇರಿಕಾಗೆ ಭಾರತವು ಔಪಚಾರಿಕ ಒಪ್ಪಂದ ನೀಡಿ ಅದರೊಂದಿಗೆ ಪಾಲ್ಗೊಳ್ಳಬೇಕು.

3) ಭಾರತವು ಇದುವರೆಗೂ ಸಹಿ ಮಾಡಿಲ್ಲದ ಒಪ್ಪಂದಗಳಾದ ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ಕಾಯಿದೆ, ಆಸ್ಟ್ರೇಲಿಯಾ ಗುಂಪು, ಇತ್ಯಾದಿಯಂತಹ ಹಲವಾರು ದ್ವಿಪಕ್ಷೀಯ ಒಪ್ಪಂದಗಳಿಗೆ ಬದ್ಧವಾಗಬೇಕು.

123 ಒಪ್ಪಂದವು ಅಣ್ವಸ್ತ್ರ ವಿಷಯಕ್ಕೆ ಸಂಬಂಧಿಸಿದಂತೆ ಬರೆ ಅಣ್ವಸ್ತ್ರ ಸಾಮಗ್ರಿಗಳನ್ನು ಪೂರೈಸುವುದಕ್ಕೆ ಮಾತ್ರ ಸೀಮಿತವಾಗಿದ್ದರೆ, ಮೇಲಿನ ಆತಂಕಕಾರಿ ಅಂಶಗಳೆಲ್ಲ ಹೈಡ್ ಕಾಯಿದೆಯಲ್ಲಿದ್ದು, ಹೈಡ್ ಕಾಯಿದೆಯ ವ್ಯಾಪ್ತಿ ಬಹಳ ವಿಶಾಲವಾಗಿದೆ. 123 ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಭಾರತ ಅಣ್ವಸ್ತ್ರ ಪರೀಕ್ಷೆ ಮಾಡುವುದಿರಲಿ, ಅಮೇರಿಕಾದ ವಿದೇಶಾಂಗ ನೀತಿಗೆ ಧಕ್ಕೆಯುಂಟಾಗುವಂತೆ ನಡೆದುಕೊಂಡರೂ ಸಾಕು ತಾನು ಭಾರತಕ್ಕೆ ನೀಡಿರುವ ಎಲ್ಲ ತಂತ್ರಜ್ಞಾನವನ್ನು ಮೂರು ಕಾಸು ಪರಿಹಾರ ತೆತ್ತು ವಾಪಸು ಕಿತ್ತುಕೊಳ್ಳುವುದು. ಹೀಗೆ ವಿಶಾಲ ವ್ಯಾಪ್ತಿಯುಳ್ಳ ಹೈಡ್ ಕಾಯಿದೆಯು ಅಮೇರಿಕಾದ ರಾಷ್ಟ್ರೀಯ ಕಾಯಿದೆಯಾಗಿರುವುದರಿಂದ ಹೈಡ್ ಕಾಯಿದೆಗೆ ಭಂಗ ಬಂದಾಕ್ಷಣ 123 ಒಪ್ಪಂದವನ್ನು ಅದು ರದ್ದುಗೊಳಿಸುತ್ತದೆ. ಅಂತಿಮವಾಗಿ ಭಾರತವು ಐಎಇಎ ಯ ತಪಾಸಣೆಯನ್ನು ಶಾಶ್ವತವಾಗಿ ಮುಂದುವರೆಸಬೇಕಾಗುತ್ತದೆ ಮತ್ತು ಎಂದಿನಂತೆ ಅಣ್ವಸ್ತ್ರ ವಿಷಯದಲ್ಲಿ ಮೂಲೆಗುಂಪಾಗುತ್ತದೆ. ಹಾಗಾಗಿ ಹೈಡ್ ಕಾಯಿದೆಯನ್ನು ಕಡೆಗಣಿಸಿ ಬರೆ 123 ಒಪ್ಪಂದದ ಸಹಿ ಕುರಿತು ವಿಜಯೋತ್ಸವ ಆಚರಿಸುವುದರಿಂದ ಏನೂ ಪ್ರಯೋಜನವಿಲ್ಲ.

ಪ್ರಮುಖವಾಗಿ ಜಾಗತಿಕ ಮಟ್ಟದಲ್ಲಿ ಅಣ್ವಸ್ತ್ರ ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿಸುತ್ತಾ ಅಲಿಪ್ತ ರಾಷ್ಟ್ರಗಳ ಮುಂದಾಳತ್ವ ವಹಿಸಿಕೊಂಡಿರುವ ಭಾರತವು ಅಮೇರಿಕಾದೊಂದಿಗಿನ ಅಣ್ವಸ್ತ್ರ ಒಪ್ಪಂದದಿಂದಾಗಿ ತನ್ನದೇ ನೀತಿಗೆ ಎಳ್ಳು ನೀರು ಬಿಟ್ಟಂತಾಗುತ್ತದೆ.

ಪ್ರಧಾನಿ ಲೋಕಸಭೆಯಲ್ಲಿ ನೀಡಿದ ಭರವಸೆಗಳು ಗಾಳಿಯಲ್ಲಿ?

123 ಒಪ್ಪಂದವು ಲೋಕಸಭೆಯಲ್ಲಿ ಪ್ರಧಾನಮಂತ್ರಿಗಳು ನೀಡಿದ ಭರವಸೆಗಳಿಗೆ ಬದ್ಧವಾಗಿದೆಯೆಂದು, ಇದು ಭಾರತದ ನಿಲುಮೆಗೆ ಸಂದ ಜಯವೆಂದು ಬಿಂಬಿಸಲಾಗುತ್ತಿದ್ದರೂ, ವಾಸ್ತವವಾಗಿ ಈ ಒಪ್ಪಂದಕ್ಕೂ ಪ್ರಧಾನಮಂತ್ರಿಯವರು ನೀಡಿದ ಭರವಸೆಗೂ ಸಾಮ್ಯವಿಲ್ಲ. ಭಾರತವು ಶಾಶ್ವತವಾಗಿ ಅಡಕತ್ತರಿಯಲ್ಲಿ ಸಿಕ್ಕುವುದಿದ್ದರೆ, ಅಮೇರಿಕಾದ ಮಾತುಗಳು ದ್ವಂದ್ವಗಳಿಂದ ಕೂಡಿದೆ. ಪ್ರಧಾನಮಂತ್ರಿಯವರು 2006, ಆಗಸ್ಟ್ 17 ರಂದು ಲೋಕಸಭೆಯಲ್ಲಿ ಉತ್ತರಿಸುತ್ತಾ



'ಭಾರತ-ಅಮೇರಿಕಾ ಅಣ್ವಸ್ತ್ರ ಒಪ್ಪಂದವು ಅಣ್ವಸ್ತ್ರ ಇಂಧನದ ಪೂರ್ತಿ ಅವಧಿಯುವರೆಗೂ ಅನ್ವಯಿಸುತ್ತದೆ' ಎಂದು ಹೇಳಿದ್ದ ಭರವಸೆಯು ಉಲ್ಲಂಘನೆಯಾಗಿದೆ. ಒಪ್ಪಂದದಲ್ಲಿ ಇದೇ ಪದಗಳ ಸೋಗನ್ನೇ ಬಳಸುತ್ತಾ ಯಾವುದೇ ರೀತಿಯ ಇಂಧನ ಉತ್ಪಾದನೆ, ಪುನರ್-ಸಂಸ್ಕರಣೆ ಮತ್ತು ಭಾರ ಜಲ ಉತ್ಪಾದನಾ ತಂತ್ರಜ್ಞಾನ ವರ್ಗಾವಣೆಯು ಸಹಕಾರವನ್ನು ನಿರಾಕರಿಸಲಾಗಿದೆ.

ಮತ್ತೂ ಮುಂದುವರಿದು, ಪ್ರಸಕ್ತ ಒಪ್ಪಂದವು ಇಂಧನದ ಉಭಯ ಬಳಕೆ ತಂತ್ರಜ್ಞಾನ ಅಭಿವೃದ್ಧಿಯನ್ನು ನಿರಾಕರಿಸುವುದರಿಂದ ಕ್ಷಿಪ್ರ ಪ್ರಜನಕ (Fast breeder) ಅಣು ಸ್ಥಾವರಗಳಂತಹ ಪರ್ಯಾಯಗಳನ್ನು ಅಭಿವೃದ್ಧಿ ಪಡಿಸುವುದರ ಮೇಲೆ ದಿಗ್ಬಂಧನ ವಿಧಿಸಬಹುದು. ಇದರಿಂದ ಭಾರತವು ಥೋರಿಯಂ ನಿಕ್ಷೇಪದಿಂದ ಮೂರು-ಆಯಾಮದ, ಸ್ವಾವಲಂಬಿ ಅಣುಶಕ್ತಿ ಸ್ಥಾವರಗಳನ್ನು ದಿಗ್ಬಂಧನದ ನೆರಳಲ್ಲೇ ನಿರ್ಮಿಸಬೇಕಾಗುತ್ತದೆ. ಉಭಯ ಬಳಕೆ ತಂತ್ರಜ್ಞಾನವನ್ನು ಅಣ್ವಸ್ತ್ರ ಕ್ಷೇತ್ರದಲ್ಲಿ ಮಾತ್ರವಲ್ಲದೆ ಹಲವಾರು ಉಪಯೋಗಗಳಿಗಾಗಿ ಬಳಸಬಹುದು. ಇದನ್ನು ನಿರಾಕರಿಸಿರುವುದರಿಂದ ಅಮೇರಿಕಾವು ಭಾರತವನ್ನು ಒಂದು ಮುಂದುವರೆದ ಅಣ್ವಸ್ತ್ರ ರಾಷ್ಟ್ರವೆಂದು ಪರಿಗಣಿಸಿ ಸಂಪೂರ್ಣ ನಾಗರೀಕ ತಂತ್ರಜ್ಞಾನ ಕೊಡುತ್ತದೆಂದು ಲೋಕಸಭೆಯಲ್ಲಿ ಪ್ರಧಾನಮಂತ್ರಿ ಹೇಳಿದ್ದ ಮಾತುಗಳು ಹುಸಿಯಾಗಿವೆ.

ನಿರಂತರವಾಗಿ ಇಂಧನ ಸರಬರಾಜು ಮಾಡುವ ಗ್ಯಾರಂಟಿಯ ಮೇಲಷ್ಟೆ ನಾವು ನಮ್ಮ ಅಣು ಸ್ಥಾವರಗಳನ್ನು ಐಎಇಎ ಯ ಶಾಶ್ವತ ಸುರಕ್ಷತಾ ತಪಾಸಣೆಗೊಳಪಡಿಸುತ್ತೇವೆಂದು ಎಂದು ಹೇಳಿದ್ದ ಪ್ರಧಾನಮಂತ್ರಿಯುವರ ಮಾತು ಹುಸಿಯಾಗಿದೆ. ನಾವೇನೋ ಶಾಶ್ವತ ಸುರಕ್ಷತಾ ತಪಾಸಣೆಗೆ ಒಪ್ಪಿದ್ದರೂ ಶಾಶ್ವತ ಇಂಧನ ಸರಬರಾಜು ಮಾತ್ರ ಇನ್ನೂ ಖಾತ್ರಿಯಾಗಿಲ್ಲ. ಅಲ್ಲದೆ, ಈ ಒಪ್ಪಂದವೇನಾದರೂ ಮುರಿದು ಬಿದ್ದಲ್ಲಿ, ಹೈಡ್ ಕಾಯಿದೆ ಪ್ರಕಾರ ಇತರೆ ಅಣ್ವಸ್ತ್ರ ಸರಬರಾಜುದಾರ ಗುಂಪಿನ ರಾಷ್ಟ್ರಗಳು ಭಾರತಕ್ಕೆ ಯಾವುದೇ ಇಂಧನ ಸಾಮಗ್ರಿ ನೀಡದಂತೆ ಅಮೇರಿಕಾವು ಅನಿವಾರ್ಯ ಒತ್ತಡ ತರಬೇಕಾಗುತ್ತದೆ.

ಈ ಒಪ್ಪಂದವು ಭವಿಷ್ಯತ್ತಿನಲ್ಲಿ ಭಾರತವನ್ನು ಹೊರಬರಲಾಗದ ಅಣ್ವಸ್ತ್ರ ವ್ಯೂಹದೊಳಕ್ಕೆ ದೂಕುವುದರಿಂದ ಐಎಇಎ ಶಾಶ್ವತ ಸುರಕ್ಷತಾ ತಪಾಸಣೆಗಾಗಿ ನಮ್ಮ ನಾಗರೀಕ ಅಣ್ವಸ್ತ್ರ ಕಾರ್ಯಾಗಾರಗಳನ್ನು ಮಿಲಿಟರಿ ಚಟುವಟಿಕೆಗಳಿಂದ ಪ್ರತ್ಯೇಕಿಸುವ ಮೊದಲು ದೇಶದ ಹಿತವನ್ನು ಖಾತರಿಪಡಿಸಿಕೊಳ್ಳಬೇಕು. ಇಂಧನ ಭದ್ರತೆ ಮತ್ತು ಇಂಧನ ಸಂಪನ್ಮೂಲಗಳನ್ನು ಒದಗಿಸುವ ನೆಪದಲ್ಲಿ ಅಮೇರಿಕಾವು ತನ್ನ ಖಾಸಗಿ ಕಂಪನಿಗಳಿಗೆ ಬಿಲಿಯನ್‌ಗಟ್ಟಲೆ ಲಾಭ ಮಾಡಿಕೊಡುವ ದುರುದ್ದೇಶ ಹೊಂದಿದೆಯೆಂಬುದನ್ನು ಅರಿತುಕೊಳ್ಳಬೇಕಾಗಿದೆ.

ದ್ವಿಪಕ್ಷೀಯ ಅಣ್ವಸ್ತ್ರ ಒಪ್ಪಂದವು ಭಾರತವನ್ನು ಅಮೇರಿಕಾದ ತಂತ್ರಗಾರಿಕೆಗೆ ಸಿಲುಕಿಸುವ ಸಾಧನವಾಗಿದೆ. ಅಣ್ವಸ್ತ್ರ ಒಪ್ಪಂದದ ಜೊತೆ ಜೊತೆಗೆ ಜಂಟಿ ಮಿಲಿಟರಿ ಕಾರ್ಯಾಚರಣೆಗಳನ್ನು ನಡೆಸಲಾಗುತ್ತಿದೆ. ಅಮೇರಿಕಾದ ನೌಕಾ ಪಡೆಯು ಇಂಧನಕ್ಕಾಗಿ, ನಿರ್ವಹಣಾ ದುರಸ್ತಿ ಕಾರ್ಯಗಳಿಗಾಗಿ ನಿರಂತರವಾಗಿ ಭಾರತದ ನೌಕಾ ನೆಲೆಗಳಿಗೆ ಭೇಟಿ ಕೊಡುತ್ತಿವೆ. ಅಮೇರಿಕಾ, ಜಪಾನ್ ಮತ್ತು ಆಸ್ಟ್ರೇಲಿಯಾಗಳ ನಡುವೆ ಜರುಗುತ್ತಿರುವ ತ್ರಿಪಕ್ಷೀಯ ಜಂಟಿ ಕಾರ್ಯಾಚರಣೆಗೆ ಭಾರತವನ್ನು ಸೇರಿಸಿಕೊಳ್ಳಲಾಗುತ್ತಿದೆ. ಭಾರತವು ತನ್ನ ಶಸ್ತ್ರಾಸ್ತ್ರಗಳನ್ನು ಕೊಂಡುಕೊಳ್ಳಬೇಕೆಂದು ಅಮೇರಿಕಾ ಹೆಚ್ಚೆಚ್ಚು ದುಂಬಾಲು ಬೀಳುತ್ತಿದೆ.

ಈ ಹಿನ್ನೆಲೆಯಲ್ಲಿ ಭಾರತದ ಸ್ವತಂತ್ರ ವಿದೇಶಾಂಗ ನೀತಿ ಮತ್ತು ಸ್ವಾವಲಂಬಿ ಅಣ್ವಸ್ತ್ರ ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸುವಲ್ಲಿ ಅದರ ಸಾರ್ವಭೌಮತೆಯನ್ನು ಅಮೇರಿಕಾದೊಂದಿಗೆ ಅಣ್ವಸ್ತ್ರ ಒಪ್ಪಂದ ಮಾಡಿಕೊಳ್ಳಲೋಸುಗ ರಾಜಿ ಮಾಡಿಕೊಳ್ಳಬಾರದೆಂದು ಎಡ ಪಕ್ಷಗಳು ಈ ಹಿಂದೆಯೇ ಹೇಳಿದ್ದವು. ಹೈಡ್ ಕಾಯಿದೆಯು ಅಂಗೀಕಾರವಾಗಿ ಹೊರಬರುವವರೆಗೂ 123 ಒಪ್ಪಂದಧ ಮಾತುಕತೆಗಳಿಂದ ದೂರ ಸರಿಯಬೇಕೆಂದು ಅವು ಯುಪಿಎ ಸರ್ಕಾರಕ್ಕೆ ತಿಳಿಸಿದ್ದವು.

ಒಪ್ಪಂದಕ್ಕೆ ಸಹಮತವಿಲ್ಲ - ಪ್ರಕಾಶ್ ಕಾರಟ್

ಭಾರತ ಸರ್ಕಾರವು ಅಮೇರಿಕಾದೊಂದಿಗೆ ಜಂಟಿಯಾಗಿ ನೀಡಿದ ಜುಲೈ 2005 ರ ಹೇಳಿಕೆಯನ್ನು ಎಡಪಕ್ಷಗಳು ನಿರಂತರವಾಗಿ ವಿರೋಧ ಮಾಡುತ್ತಲೇ ಬಂದಿವೆ. ಅದರಲ್ಲಿ ಪರಮಾಣು ಸಹಕಾರ ಒಪ್ಪಂದವೂ ಸೇರಿದೆ. ಅಮೇರಿಕಾವು 'ಹೈಡ್ ಕಾಯಿದೆ' ಯನ್ನು ಅಂಗೀಕರಿಸಿದ ನಂತರ ಅದರಲ್ಲಿರುವ ಷರತ್ತುಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದ ಕಾರಣ ಭಾರತ ಸರ್ಕಾರವು ದ್ವಿಪಕ್ಷೀಯ ಒಪ್ಪಂದದ ಮಾತುಕತೆಗೆ ಮುಂದಾಗಬಾರದೆಂದು ಸಿಪಿಐ(ಎಂ) ಎಚ್ಚರಿಸಿತ್ತು.

'ಅಮೇರಿಕಾದ ಸಹಾಯದೊಂದಿಗೆ ಶಕ್ತಿಶಾಲಿ ರಾಷ್ಟ್ರ' ವಾಗಬಹುದು ಎಂಬ ಭ್ರಮೆಯನ್ನು ನಾವು ಒಪ್ಪುವುದಿಲ್ಲ.

ಭಾರತವು ತನ್ನದೇ ಆದ ಹಾದಿಯಲ್ಲಿ ಅಭಿವೃದ್ಧಿ ಸಾಧಿಸುವ ಸಂಪನ್ಮೂಲ ಮತ್ತು ಸ್ವಾಭಿಮಾನವನ್ನು ಹೊಂದಿದೆ ಎಂದು ಕರಾಟ್ ನುಡಿದರು.

ಸಂಸತ್ತಿನಲ್ಲಿರುವ ಬಹುಸಂಖ್ಯಾತ ಸದಸ್ಯರಿಗೆ ಈ ಒಪ್ಪಂದದೊಂದಿಗೆ ಸಹಮತ ಇಲ್ಲ ಎಂಬುದನ್ನು ಪ್ರಧಾನ ಮಂತ್ರಿ ಹಾಗೂ ಸರ್ಕಾರವು ಗಮನಿಸಬೇಕು ಎಂದ ಪ್ರಕಾಶ್ ಕರಾಟ್ ಸರ್ಕಾರದ ಬಗ್ಗೆ ನಮ್ಮ ಸ್ವಂತ ನಿಲುವನ್ನು ಹೊಂದಲು ನಾವು ಬದ್ಧರಾಗಿದ್ದೇವೆ ಎಂದು ಹೇಳಿದ್ದಾರೆ.

ಸ್ವಾತಂತ್ರ್ಯದ ಅರವತ್ತು ವರ್ಷಗಳು
ಪ್ರಜಾಸತ್ತಾತ್ಮಕ ಪರಿವರ್ತನೆಯ ಹೋರಾಟ

ದೇಶ ಸ್ವಾತಂತ್ರ್ಯದ ಅರವತ್ತನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ; ಈ ಸಂದರ್ಭದಲ್ಲಿ, ಆಗಸ್ಟ್ 15, 1947 ರಂದು ವಸಾಹತುಶಾಹಿಯಿಂದ ವಿಮೋಚನೆಗೊಂಡ ಭಾರತದ ಸಾಧನೆಯತ್ತ ಹೆಮ್ಮೆಯಿಂದ ಹಿಂದಿರುಗಿ ನೋಡುತ್ತಿದೆ. ಕೋಟ್ಯಂತರ ಜನಸಾಮಾನ್ಯರು ಭಾಗವಹಿಸಿದ, ವಿವಿಧ ಘಟ್ಟಗಳಲ್ಲಿ ಸಾವಿರಾರು ಮಂದಿ ಬಲಿದಾನ ನೀಡಿದ ಈ ಸಮರದ ಸಾಧನೆ ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸಂನ ಸೋಲಿನ ನಂತರ ವಸಾಹತುಶಾಹಿಯ ಪತನದ ಮೊದಲ ಐತಿಹಾಸಿಕ ಮೈಲುಗಲ್ಲಾಯಿತು ಎಂದು ನೆನಪಿಸಿಕೊಳ್ಳುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಇಲ್ಲಿ ಈ ಸ್ವಾತಂತ್ರ್ಯದ ಆರು ದಶಕಗಳ ಸಾಧನೆಗಳ, ನಿರೀಕ್ಷೆಗಳ ಬಗ್ಗೆ ಒಂದು ವಿಹಂಗಮ ನೋಟ ಬೀರಿದ್ದಾರೆ.



ಪ್ರಕಾಶ್ ಕಾರಟ್

ಸ್ವತಂತ್ರ ಭಾರತದ ಆರು ದಶಕಗಳ ಇತಿಹಾಸ ವೈವಿಧ್ಯಮಯ, ಸಾರ್ವಭೌಮ ದೇಶಗಳಾಗಿ ಹೊಮ್ಮಿದ ಸಮಾಜಗಳಲ್ಲಿ ಹಿಂದಿನ ಸೋವಿಯೆತ್ ಒಕ್ಕೂಟದ ನಂತರ ಭಾರತವೇ ಅತ್ಯಂತ ದೊಡ್ಡ ಹಾಗೂ ವೈವಿಧ್ಯಮಯ ಸಮಾಜ ಎಂದೆನಿಸಿಕೊಂಡಿದೆ. ಇಂತಹ ಒಂದು ಸಮಾಜ ಒಂದು ಆಧುನಿಕ, ಜಾತ್ಯಾತೀತ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ, ಎಲ್ಲಾ ನಾಗರಿಕರಿಗೂ ಜೀವನದ ಪ್ರಗತಿಯ ಸಮಾನ ಅವಕಾಶಗಳನ್ನು ಒದಗಿಸುವಂತಹ ದೇಶವಾಗುವ ಹೋರಾಟ ಹಲವು ತಿರುವು-ಮುರುವುಗಳಿಂದ ಕೂಡಿತ್ತು ಎಂಬುದು ಹಿಂತಿರುಗಿ ನೋಡುವಾಗ ಕಾಣುವ ಸಂಗತಿ.

ಒಂದು ಆಧುನಿಕ ಸ್ವತಂತ್ರ ಭಾರತವನ್ನು ಕಟ್ಟುವ ಕೆಲಸ ಒಂದು ಅತ್ಯಂತ ಕಹಿ ವಾತಾವರಣದಲ್ಲೇ ಆರಂಭ ವಾಗಬೇಕಾಯಿತು. ದೇಶವಿಭಜನೆಯ ಬೆನ್ನ ಹಿಂದೆಯೇ ಹತ್ತು ಲಕ್ಷ ಜನರ ಮಾರಣ ಹೋಮ ನಡೆಯಿತು. ಒಂದು ಕೋಟಿ ಜನ ಹೊಸದಾಗಿ ಸೃಷ್ಟಿಯಾದ ಗಡಿಗಳ ಆಚೆಯಿಂದ ಈಚೆಗೆ, ಈಚೆಯಿಂದ ಆಚೆಗೆ ಹೋದರು. ಇಂತಹ ಸನ್ನಿವೇಶದಲ್ಲಿ, ಒಂದು ಹಿಂದುಳಿದ ಪರಿಸ್ಥಿತಿಯಲ್ಲಿ ಆಧುನಿಕ ದೇಶವೊಂದನ್ನು ಕಟ್ಟುವ ಕೆಲಸ ಸುಲಭದ್ದೇನಾಗಿರಲಿಲ್ಲ. ಆದ್ದರಿಂದ ಈ ಆರು ದಶಕಗಳಲ್ಲಿ ನಡೆದ ಪ್ರಯತ್ನಗಳಲ್ಲಿ ಹಲವು ಸಕಾರಾತ್ಮಕ ಅಂಶಗಳು ಹಲವು ನಕಾರಾತ್ಮಕ ಅಂಶಗಳನ್ನು ಕಾಣಬಹುದು.

ನೇಣುಗಂಬಕ್ಕೆ ಕೊರಳು ಕೊಟ್ಟ ಹುತಾತ್ಮ ಶಹೀದ್ ಭಗತ್‌ಸಿಂಗ್



ಜನತೆ ನೀಡಿದ ಚೈತನ್ಯ

ಆರಂಭದಲ್ಲಿಯೇ ರಾಜಮಹಾರಾಜರುಗಳ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ವಿಲೀನಗೊಳಿಸಿ ರಾಷ್ಟ್ರೀಯ ಐಕ್ಯತೆಯನ್ನು ಗಟ್ಟಿಗೊಳಿಸಿದ್ದು, ಒಂದು ಗಣತಂತ್ರ ಸಂವಿಧಾನದ ಅಡಿಯಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಸ್ಥಾಪನೆ, ಯೋಜನಾ ಪ್ರಕ್ರಿಯೆ ಮತ್ತು ಒಂದು ಸಾರ್ವಜನಿಕ ವಲಯದ (ಬಂಡವಾಳಶಾಹಿಯ ಆಶ್ರಯದಲ್ಲಿದ್ದರೂ ಕೂಡಾ) ಮೂಲಕ ಒಂದು ಆಧುನಿಕ ಆರ್ಥಿಕ ವ್ಯವಸ್ಥೆಗೆ ಅಡಿಗಲ್ಲು-ಇವು ಆರಂಭದ ಸಕಾರಾತ್ಮಕ ಅಂಶಗಳು. ಮೊದಲ ಎರಡು ಮೂರು ದಶಕಗಳ ಅಲಿಪ್ತ ವಿಶೇಶಾಂಗ ನೀತಿ ಮತ್ತು ಸಾರ್ವಜನಿಕ ವಲಯವನ್ನು ಆಧರಿಸಿದ ಕೈಗಾರಿಕೀಕರಣ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಯನ್ನು ಕಾಪಾಡಿಕೊಳ್ಳಲು ನೆರವಾಯಿತು.

ಸಂಸದೀಯ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿ ಇರುವುದು ಸ್ವತಂತ್ರ ಭಾರತದ ಒಂದು ಪ್ರಮುಖ ಸಾಧನೆ. ಇದು ಸಾಧ್ಯವಾಗಿರುವುದು ಜನಗಳಿಂದ, ಅವರ ಹೋರಾಟಗಳಿಂದ ಮತ್ತು ಪ್ರಜಾಪ್ರಭುತ್ವ ಆಂದೋಲನಗಳಿಂದ. ಎಲ್ಲಾ ಚುನಾವಣೆಗಳಲ್ಲಿ ಎಲ್ಲಾ ಮಟ್ಟಗಳಲ್ಲಿ ಜನರು ಸತತವಾಗಿ, ಉತ್ಸಾಹದಿಂದ ಭಾಗವಹಿಸಿಕೊಂಡು ಬಂದಿದ್ದಾರೆ. ಇದರಿಂದಾಗಿಯೇ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಚೈತನ್ಯಶೀಲವಾಗಿ ಉಳಿದಿದೆ.

ಈ ರಾಜಕೀಯ ಪ್ರಜಾಪ್ರಭುತ್ವವನ್ನು ದೊಡ್ಡ ವ್ಯಾಪಾರಸ್ಥರ , ಹಳ್ಳಿಗಳಲ್ಲಿನ ಶ್ರೀಮಂತರ ಮತ್ತು ಅಂತ್ರಾಷ್ಟ್ರೀಯ ಹಣಕಾಸು ಬಂಡವಾಳಿಗರ ಒಂದು ಸಣ್ಣವಲಯದ ಹತೋಟಿಯಲ್ಲಿರುವ ಆರ್ಥಿಕ ವ್ಯವಸೆಯಾಗಿ ಬುಡಮೇಲು ಮಾಡುವ ಪ್ರಯತ್ನ ನಡೆಯುತ್ತಾ ಬಂದಿದೆ. ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಜನಗಳ ಆಶೋತ್ತರಗಳು ಬಿಂಬಿತವಾದರೂ ಶ್ರೀಮಂತರನ್ನು, ಬಲಿಷ್ಠರನ್ನು ಪೋಷಿಸುವ ಆರ್ಥಿಕ ನೀತಿಗಳು ಇವಕ್ಕೆ ಸ್ಪಂದಿಸುತ್ತಿಲ್ಲ. ಕಾಂಗ್ರೆಸ್, ಬಿಜೆಪಿ ಅಥವಾ ಬೇರೆ ಯಾವುದೇ ಬಂಡವಾಳಶಾಹಿ ಪಕ್ಷ ಅಧಿಕಾರಕ್ಕೆ ಬರಲಿ, ಆರ್ಥಿಕ ನೀತಿಗಳಲ್ಲಿ ಮಾತ್ರ ಗಣನೀಯವಾಗಿ ಬದಲಾವಣೆ ಆಗುತ್ತಿಲ್ಲ. ಇದೀಗ ಒಂದು ಪ್ರಮುಖ ನಕಾರಾತ್ಮಕ ಅಂಶ.

ಪರಿವರ್ತನೆಗೆ ಅಡ್ಡಗಾಲು

ಭಾರತ ಸ್ವತಂತ್ರವಾದಾಗ ಅಧಿಕಾರ ಪಡೆದ ವರ್ಗಗಳ, ಆಳುವ ವರ್ಗಗಳ ಸ್ವಾರ್ಥ ಹಿತಾಸಕ್ತಿಗಳು ಇಂತಹ ಪ್ರಜಾಸತ್ತಾತ್ಮಕ ಪರಿವರ್ತನೆಯ ಸಾಧ್ಯತೆಗಳಿಗೆಲ್ಲಾ ಅಡ್ಡಗಾಲು ಹಾಕಿವೆ. ಸ್ವತಂತ್ರವಾಗುವ ವೇಳೆಗೆ ಭಾರತ, ಇತರ ಮಾಜಿ ವಸಾಹತುಗಳಿಗೆ ಹೋಲಿಸಿದರೆ ಸಾಕಷ್ಟು ಬೆಳೆದ ಬಂಡವಾಳಶಾಹಿ ವರ್ಗವನ್ನು ಹೊಂದಿತ್ತು. ಇದರ ಬಳಿ ಪಾಶ್ಚಿಮಾತ್ಯ ಬಂಡವಾಳಶಾಹಿಗಳಲ್ಲಿ ಇದ್ದಷ್ಟು ಬಂಡವಾಳವಿಲ್ಲದಿದ್ದರೂ ಒಂದು ಬಂಡವಾಳಶಾಹಿ ಅಭಿವೃದ್ಧಿ ಪಥವನ್ನು ಅನುಸರಿಸುವ ವಿಶ್ವಾಸವನ್ನು ಅವರು ಗಳಿಸಿದ್ದರು. ಇದೇ ಸ್ವತಂತ್ರ ಭಾರತದ ಪ್ರಭುತ್ವ ಮತ್ತು ಸಮಾಜದ ಸ್ವರೂಪವನ್ನು ನಿರ್ಧರಿಸಿತು. ಆರ್ಥಿಕ ರಂಗದಲ್ಲಿ ಇದು ಎದ್ದು ಕಂಡಿದೆ.

ಭೂಸುಧಾರಣೆಗಳನ್ನು ತರುವಲ್ಲಿ ಪಾಳೆಯಗಾರಿ ಶಕ್ತಿಗಳನ್ನು ಎದುರಿಸುವಲ್ಲಿ ವಿಫಲತೆಯಂತೂ ಕಣ್ಣಿಗೆ ರಾಚುತ್ತಿದೆ. ಇದರಿಂದಾಗಿ ಒಂದು ನ್ಯಾಯಪೂರ್ಣ ಆರ್ಥಿಕ ವ್ಯವಸ್ಥೆಯನ್ನು ನಿರ್ಮಾಣ ಮಾಡಲಾಗಲಿಲ್ಲ. ಕೃಷಿ ಸಂರಚನೆಯನ್ನು ಸುತ್ತಿಕೊಂಡ ಸಂಕೋಲೆಗಳನ್ನು ಕಿತ್ತು ಹಾಕಲು ಅದು ದಶಕಗಳಾದರೂ ಆಗದೇ ಇರುವುದರಿಂದಲೇ ಗ್ರಾಮಾಂತರದಲ್ಲಿನ ಶೋಷಕ ವ್ಯವಸ್ಥೆ ಮುಂದುವರೆದಿದೆ, ಸಾಮೂಹಿಕ ಬಡತನ, ರೋಗ, ಸಾಮಾಜಿಕ ವಂಚನೆಯೂ ಹಾಗೆಯೇ ಮುಂದುವರೆದಿದೆ. 1960ರ ಹಾಗೂ 1970ರ ದಶಕದಲ್ಲಿ ಕೃಷಿ ಉತ್ಪಾದನೆಗೆ ದೊರೆತ ಒತ್ತು, ನಂತರ ಭೂಸುಧಾರಣೆಯ ಅಭಾವದಿಂದಾಗಿ, ಈಗ 90 ರ ದಶಕದಿಂದೀಚೆಗೆ ನವ ಉದಾರವಾದಿ ನೀತಿಗಳಿಂದಾಗಿ ಒಂದು ದೀರ್ಘಾವಧಿ ಕಾರ್ಷಿಕ ಬಿಕ್ಕಟ್ಟು ಸೃಷ್ಟಿಯಾಗುವಂತಾಗಿದೆ.

ಕನಸುಗಳ ನೆನಪಿಲ್ಲ

ಸ್ವಾತಂತ್ರ್ಯದ ನಾಲ್ಕನೇ ದಶಕದ ನಂತರ ದೇಶದ ಆಳುವ ವರ್ಗಗಳು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳ ಹಾದಿ ಹಿಡಿದ ಮೇಲೆ ಅವರು ಬಯಸಿದಂತೆ ರಾಷ್ಟ್ರೀಯ ಉತ್ಪನ್ನವೇನೋ ಹೆಚ್ಚಿತು. ಆದರೆ ಅದರಿಂದ ಮಾನವ ಸಂಕಟ ಜನಸಾಮಾನ್ಯರ ನೋವುಗಳು ಸ್ವಲ್ಪವೂ ಶಮನವಾಗಿಲ್ಲ.

ಅಷ್ಟೇ ಅಲ್ಲ, ಉದಾರೀಕರಣ ನೀತಿಗಳ ಬೆಂಬತ್ತಿದ ಆಳುವ ವರ್ಗಗಳು ವಿದೇಶೀ ಹಣಕಾಸು ಬಂಡವಾಳ ಮತ್ತು ಸಾಮ್ರಾಜ್ಯಶಾಹಿಯೊಂದಿಗೆ ಹೆಚ್ಚೆಚ್ಚಾಗಿ ಕೈಜೋಡಿಸುವುದನ್ನು ಇತ್ತೀಚಿನ ದಶಕದಲ್ಲಿ ನಾವು ಕಾಣುತ್ತಿದ್ದೇವೆ. ಹಲವು ಪ್ರಜಾಪ್ರಭುತ್ವ-ವಿರೋಧಿ ಕ್ರಮಗಳು ಇದರಿಂದಲೇ ಹೊಮ್ಮಿ ಬರುತ್ತಿರುವುದೂ ಕಾಣುತ್ತಿದೆ. ಈ ನವ-ಉದಾರವಾದಿ, ಜನವಿರೋಧಿ ನೀತಿಗಳಿಗೆ ಸವಾಲು ಹಾಕುವ ರಾಜಕೀಯ ಮತ್ತು ಆಂದೋಲನಗಳ ಮೇಲೆ ಪ್ರಭುತ್ವದ ಎಲ್ಲಾ ಅಂಗಗಳು ನ್ಯಾಯಾಂಗವಾಗಲಿ, ಪೋಲಿಸ್ ವ್ಯವಸ್ಥೆಯಾಗಲಿ, ಅಧಿಕಾರಶಾಹಿಯಾಗಲಿ ಹೆಚ್ಚೆಚ್ಚು ಕೆಂಡ ಕಾರುತ್ತಿವೆ. ಜನಸಾಮಾನ್ಯರಿಗೆ ಚುನಾವಣಾ ಪ್ರಜಾಪ್ರಭುತ್ವ ಬಿಟ್ಟರೆ ಬೇರೆ ಯಾವುದೇ ಪ್ರಜಾಪ್ರಭುತ್ವ ಹಕ್ಕುಗಳು ಉಳಿದಿಲ್ಲ. ಕ್ರಿಮಿನಲ್‌ಗಳು, ಭ್ರಷ್ಟ ಪೋಲಿಸ್-ಅಧಿಕಾರಶಾಹಿ ಕೂಟಗಳ ಸುಲಿಗೆಗಳಿಗೆ ಅವರು ಬಲಿಯಾಗುತ್ತಿದ್ದಾರೆ.

ಈಗ ಈ ದೇಶದ ಆಳುವ ವರ್ಗಗಳಿಗೆ ಸ್ವಾತಂತ್ರ್ಯ ಹೋರಾಟದ ಕನಸುಗಳ ನೆನಪಿಲ್ಲ, ಸಂವಿಧಾನದ ನಿರ್ದೇಶನಗಳ ನೆನಪಿಲ್ಲ. ಅಮೇರಿಕಾ ಸಂಯುಕ್ತ ಸಂಸ್ಥಾನಗಳ ನೆರವಿನಿಂದ ಭಾರತ ಒಂದು 'ಮಹಾಶಕ್ತಿ' ಯಾಗಬೇಕೆಂಬುದಷ್ಟೇ ಅವರ ಬಯಕೆ. ಅಮೆರಿಕಾದ ನೆಚ್ಚಿನ ಬಂಟನಾಗುವ ಆಸೆಯಲ್ಲಿ ಅಲಿಪ್ತನೀತಿ ಪ್ರಧಾನ ಅಂಶವಾಗಿದ್ದ ಸ್ವತಂತ್ರ ವಿದೇಶಾಂಗ ನೀತಿಯಲ್ಲಿ ಚೌಕಾಸಿ ನಡೆಸಲಾಗುತ್ತಿದೆ ಕಾಂಗ್ರೆಸ್, ಬಿಜೆಪಿ ಎರಡೂ ಸರಕಾರದಲ್ಲಿದ್ದಾಗ ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಕೈಮಿಲಾಯಿಸುವ ಅಪಾಯಕಾರಿ ನೀತಿಗಳನ್ನೆ ಅನುಸರಿಸಿವೆ. ಒಂದು ಸ್ವತಂತ್ರ ಮತ್ತು ಸ್ವಾವಲಂಬಿ ಭಾರತದ ನೆಹರೂವಾದಿ ಕಣ್ಣೋಟವನ್ನು ಈಗ ಆ ಕಾಂಗ್ರೆಸ್ ಪರಂಪರೆಯ ಹೆಸರು ಹೇಳಿಕೊಳ್ಳುವವರೇ ಕಳಚಿ ಹಾಕುತ್ತಿರುವುದೊಂದು ವಿಪರ್ಯಾಸ.

ಕಳೆದೆರಡು ದಶಕಗಳಿಂದ ದೇಶವನ್ನು ಕಾಡುತ್ತಿರುವ ಇನ್ನೊಂದು ಪಿಡುಗು ಎಂದರೆ ಕೋಮುವಾದ. ಸ್ವಾತಂತ್ರ್ಯ ಹೋರಾಟ ಪೋಷಿಸಿ ಬೆಳೆಸಿದ ಸ್ವತಂತ್ರ ಭಾರತದ ಪ್ರಭುತ್ವ ಅಂಗೀಕರಿಸಿದ ಜಾತ್ಯಾತೀತ ನೀತಿಗೆ ಸತತವಾದ ಸವಾಲುಗಳು ಬಂದಿವೆ. ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳು ಉದಯವಾಗಿ ಆರು ವರ್ಷಗಳ ಕಾಲ ಕೇಂದ್ರದಲ್ಲಿ ಅದಿಕಾರವನ್ನು ನಡೆಸಿವೆ. ಈಗ ಅವು ಅಧಿಕಾರ ಕಳಕೊಂಡರೂ ಜಾತ್ಯಾತೀತ ಪ್ರಜಾಪ್ರಭುತ್ವ ವ್ಯವಸ್ಥೆಯ ವಿವಿಧ ಅಂಗಗಳಲ್ಲಿ ತೂರಿಕೊಂಡಿರುವ ಹಿಂದುತ್ವ ಶಕ್ತಿಗಳು ಈಗಲೂ ನಮ್ಮ ಪ್ರಜಾಸತ್ತೆಗೊಂದು ಪಿಡುಗು. ಅತ್ತ ಈ ಪಿಡುಗು ಬೆಳೆದದ್ದು ಕೂಡಾ ಕಾಂಗ್ರೆಸ್ ಕೋಮುವಾದಿ ಸವಾಲನ್ನು ಎದುರಿಸಲಾರದೆ ಅದರೊಡನೆ ರಾಜಿ ಮಾಡಿಕೊಂಡದ್ದರಿಂದ. ಬಾಬ್ರಿ ಮಸೀದಿ ಧ್ವಂಸಕ್ಕೆ ಅವಕಾಶ ನೀಡುವಲ್ಲಿ ಕಾಂಗ್ರೆಸಿನ ಪಾತ್ರ ಹಾಗೂ ಆ ನಂತರ ದೇಶದಲ್ಲಿ ನಡೆದ ವ್ಯಾಪಕ ಕೋಮು ಹಿಂಸಾಚಾರ ಸ್ವತಂತ್ರ ಭಾರತದ ಇತಿಹಾಸದಲ್ಲೊಂದು ಅಳಿಸಲಾಗದ ಕಪ್ಪು ಚುಕ್ಕೆ.

ಹೋರಾಟ ಮುಂದುವರೆಯಬೇಕು

ದೇಶ ಸ್ವಾತಂತ್ರ್ಯದ 60ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವಾಗಿನ ಸನ್ನಿವೇಶ ಇದು. ಅತ್ತ ಆಳುವ ವರ್ಗಗಳು, ಅವರನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳು ಶ್ರೀಮಂತರನ್ನು ಅತಿ ಶ್ರೀಮಂತರಾಗಿಸುವ, ನೀತಿಗಳಿಗೆ ಹೆಮ್ಮೆಪಡುತ್ತಾ, ಏಶ್ಯಾದ ಬೇರೆಲ್ಲಾ ದೇಶಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕೋಟ್ಯಾಧಿಪತಿಗಳು ಇಲ್ಲಿ ಸೃಷ್ಟಿಯಾಗುತ್ತಿದ್ದಾರೆ ಎಂದು ಬೆನ್ನು ತಟ್ಟಿಕೊಳ್ಳುತ್ತಾ ಅದನ್ನು ಆಚರಿಸಲು ಮುಂದಾಗುತ್ತಿದ್ದರೆ, ಈ ದೇಶದ ದುಡಿಯುವ ಜನಗಳು ಸಾಮ್ರಾಜ್ಯಶಾಹಿ ಜಾಗತೀಕರಣ ಮತ್ತು ಅದನ್ನವಲಂಬಿಸಿದ ಆಂತರಿಕ ನೀತಿಗಳಿಗೆ ಎದುರಾಗಿ ತಮ್ಮ ಹಕ್ಕುಗಳನ್ನು ತಮ್ಮ ಬದುಕನ್ನು ರಕ್ಷಿಸಿಕೊಳ್ಳಲು ಅದಕ್ಕಾಗಿ ಸಾಮೂಹಿಕ ಆಂದೋಲನಗಳನ್ನು ಬಲಪಡಿಸಿ ಹೋರಾಟವನ್ನು ಮುಂದುವರೆಸುವ ದೃಢ ನಿರ್ಧಾರ ಕೈಗೊಳ್ಳಬೇಕಾಗಿದೆ. ಒಂದೆಡೆ ಜನ-ವಿರೋಧಿ ಉದಾರೀಕರಣ ನೀತಿಗಳು ಹಾಗೂ ಇನ್ನೊಂದೆಡೆ ಕೋಮುವಾದದ ವಿರುದ್ಧ ಹೋರಾಟಗಳನ್ನು



ಜಲಿಯನ್ ವಾಲಾಬಾಗ್‌ನಲ್ಲಿ ಬ್ರಿಟೀಷರ ಹತ್ಯಾಕಾಂಡ, ತ್ಯಾಗ ಬಲಿದಾನಗಳ ವೀರಗಾಥೆ

ಮುಂದುವರೆಸಿದರೆ ಮಾತ್ರ ಮುನ್ನಡೆ ಸಾಧ್ಯ.

ದೇಶದಲ್ಲಿ ಕೋಟ್ಯಾಧಿಪತಿಗಳ ಸಂಖ್ಯೆಯ ಬಗ್ಗೆ ಕೆಲವರು ಹೆಮ್ಮೆ ಪಡುತ್ತಿದ್ದರೆ, ಸಾರ್ವಜನಿಕ ಆರೋಗ್ಯಕ್ಕೆ ಒಟ್ಟು ರಾಷ್ಟ್ರೀಯ ಉತ್ಪನ್ನದ ಕೇವಲ 0..9 ಶೇ. ಖರ್ಚು ಮಾಡುವ, 5 ವರ್ಷದ ಕೆಳಗಿನ ಮಕ್ಕಳಲ್ಲಿ ಅರ್ಧದಷ್ಟು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿರುವ, ಭೀಕರ ಲೈಂಗಿಕ ಹಿಂಸಾಚಾರ ಹೆಚ್ಚುತಿರುವ, ಲಿಂಗ ಅನುಪಾತ ಇಳಿಯುತ್ತಿರುವ, ಕನಿಷ್ಟ ಪ್ರಾಥಮಿಕ ಶಿಕ್ಷಣವನ್ನೂ ಪುಕ್ಕಟೆಯಾಗಿ ಕಡ್ಡಾಯವಾಗಿ ಕೊಡಲಾರದ, ದಲಿತರ ಮೇಲೆ ಈಗಲೂ ರಾಕ್ಷಸೀ ಪಕ್ಷಪಾತ ನಡೆಸುವ ದೇಶ ನಮ್ಮದು ಎಂದೂ ನಾಚಿಕೆಪಡಬೇಕಾಗಿದೆ. ಇವು ಕೂಡಾ ಅರವತ್ತು ವರ್ಷಗಳ ನಂತರದ ಸ್ವತಂತ್ರ ಭಾರತದ ಕಥೆಯ ಭಾಗ.

ಆಶಾಕಿರಣ - ಎಡ ಶಕ್ತಿಗಳ ಹೋರಾಟ


ಸ್ವತಂತ್ರ ಭಾರತದ ಅರವತ್ತು ವರ್ಷಗಳ ಕಥೆ ಪ್ರಜಾಪ್ರಭುತ್ವದ ವಿಸ್ತರಣೆಗಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ನಿರಂತರ ಹೋರಾಟದ ಕಥೆಯೂ ಆಗಿದೆ. ಪ್ರಜಾಪ್ರಭುತ್ವದ ವಿಸ್ತರಣೆಯಷ್ಟೇ ಅಲ್ಲ, ಜಾತ್ಯಾತೀತತೆಯ ರಕ್ಷಣೆಗಾಗಿ ಮತ್ತು ಒಂದು ಸಾಮಾಜಿಕ - ಆರ್ಥಿಕ ಪರಿವರ್ತನೆಗಾಗಿ ಹೋರಾಟಗಳ ಕಥೆ. ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಾಗಳಲ್ಲಿ ಭೂಸುಧಾರಣೆಗಳ ಜಾರಿ,



ಸೈಮನ್ ಗೋ ಬ್ಯಾಕ್ ಚಳುವಳಿ

ಅಲ್ಲಿ ಎಡ ನೇತೃತ್ವದ ಸರ್ಕಾರಗಳ ಅಸ್ತಿತ್ವ, ಜತೆಗೆ ದೇಶದೆಲ್ಲೆಡೆ ಸರ್ವಾಧಿಕಾರಶಾಹಿ ಮತ್ತು ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ, ತಮ್ಮ ಜೀವನಾಧಾರ ಉಳಿಸಿಕೊಳ್ಳಲು ಹಾಗೂ ನವ ಉದಾರವಾದಿ ಧಾಳಿಗಳನ್ನು ಹಿಮ್ಮೆಟ್ಟಿಸಲು ಕಾರ್ಮಿಕರು, ರೈತರು ಮತ್ತಿತರ ದುಡಿಯುವ ಜನ ವಿಭಾಗಗಳ ಅಸಂಖ್ಯಾತ ಹೋರಾಟಗಳು ಪ್ರಜಾಪ್ರಭುತ್ವದ ಆಧಾರವನ್ನು ಗಟ್ಟಿಗೊಳಿಸಿವೆ, ಒಂದು ಹೆಚ್ಚು ಸಮಾನಾತ್ಮಕವಾದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಾಗಿ ಹೋರಾಟವನ್ನು ಬಲಗೊಳಿಸಿದೆ.

ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆಯನ್ನು ರಕ್ಷಿಸುವ ಹೋರಾಟವನ್ನು ನಡೆಸುವುದು, ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಪ್ರಗತಿ ಸಾಧಿಸುವಲ್ಲಿ ಒಂದು ಪರ್ಯಾಯ ಅಭಿವೃದ್ಧಿ ಪಥವನ್ನು ಮುಂದಿಡುವುದು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಮಾತ್ರ ಸಾಧ್ಯ. ಎಡಶಕ್ತಿಗಳಲ್ಲಿ ಪ್ರಮುಖವಾದ ಸಿಪಿಐ(ಎಂ)ಗೆ ಇಂತಹ ಪರ್ಯಾಯದ ಅಗತ್ಯದ ಅರಿವಿದೆ - ಆ ಅರಿವಿನಿಂದಲೇ ಈ ಪರ್ಯಾಯವನ್ನು ವಾಸ್ತವಗೊಳಿಸಲು ಕೋಟ್ಯಾಂತರ ಜನಗಳನ್ನು ಅಣಿನೆರೆಸಿ ದುರ್ಗಮ ಹೋರಾಟದ ಹಾದಿಯಲ್ಲಿ ಅವು ಮುಂದೆ ಸಾಗುತ್ತವೆ. ಸ್ವಾತಂತ್ರ್ಯ ಹೋರಾಟದಲ್ಲಿ ಉಜ್ವಲ ಪಾತ್ರ ವಹಿಸಿದ ಕಮ್ಯುನಿಸ್ಟರು ಈ ಹೋರಾಟದಲ್ಲಿ ಅಷ್ಟೇ ಉಜ್ವಲವಾದ ಪಾತ್ರವನ್ನು ವಹಿಸುತ್ತಾರೆ. ○



ಬಾಬ್ರಿ ಮಸೀದಿ ಧ್ವಂಸ.
ಉದಾರೀಕರಣದ ಆರ್ಥಿಕ ನೀತಿಗಳ ಜೊತೆಯಲ್ಲೇ ಹೆಡೆ ಎತ್ತಿ ನಿಂದ ಕೋಮುವಾದ

ನೆರೆ ಹಾವಳಿ : ಕೊಚ್ಚಿಹೋದ ಬದುಕು

ಮುಂಗಾರು ಮಳೆಯು ದೇಶಾದ್ಯಂತ ಸೃಷ್ಟಿಸಿರುವ ಅವತಂರಗಳು ಭೀಕರವಾಗಿದೆ. ಬಿಹಾರ, ಅಸ್ಸಾಂ, ಉತ್ತರ ಪ್ರದೇಶ, ಕೇರಳಗಳಲ್ಲಿ ನೀರಿನಲ್ಲೇ ಮುಳುಗಿವೆಯೋ ಎಂಬಷ್ಟು ತೊಂದರೆಗೀಡಾಗಿವೆ.

ಕರ್ನಾಟಕ, ಮಹಾರಾಷ್ಟ್ರದ, ಛತ್ತೀಸಗಡ, ಗುಜರಾತ್, ಪಶ್ಚಿಮ ಬಂಗಾಳಗಳಲ್ಲಿಯೂ ಪ್ರವಾಹ ಅಪಾರ ಹಾನಿಯನ್ನೇ ಮಾಡಿದೆ.

ಉತ್ತರ ಭಾರತದಲ್ಲಿ ಬಿಹರ ಒಂದರಲ್ಲೇ ಒಂದು ಕೋಟಿ ಎಂಟು ಲಕ್ಷಕ್ಕೂ ಹೆಚ್ಚು ಜನರು ಪ್ರವಾಹದಲ್ಲಿ ತೊಂದರೆಗೆ ಗುರಿಯಾಗಿ ದ್ದಾರೆ. ನೂರಕ್ಕೂ ಹೆಚ್ಚು ಸತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ 20 ಲಕ್ಷಜನ ಬಾದಿತರಾಗಿದ್ದಾರೆ. ದೇಶಾದ್ಯಂತ ಲಕ್ಷಾಂತರ ಜನರು ತಮ್ಮಮನೆ, ವಸ್ತು, ವಸ್ತ್ರ, ಸಂಗ್ರಹಿಸಿಕೊಂಡಿದ್ದ ಆಹಾರ ಎಲ್ಲವನ್ನು ಕಳೆದುಕೊಂಡಿದ್ದಾರೆ.



ಹರಪನಹಳ್ಳಿ - ಮುಳುಗಿದ ಹಳ್ಳಿ

ಲಕ್ಷಾಂತರ ಹೆಕ್ಟೇರ್ ಭೂಮಿಯಲ್ಲಿನ ಸಾವಿರರು ಕೋಟಿ ರೂಪಾಯಿಗಳ ಬೆಲೆ ಹಾಳಾಗಿದೆ. ರಾಜ್ಯ ಸರ್ಕಾರಗಳು ಪರಿಹಾರಕ್ಕಾಗಿ ಕೇಂದ್ರ ಸರ್ಕಾರದ ನೋಡುತ್ತಿವೆ.

ಕೇಂದ್ರ ಸರ್ಕಾರ ಪರಿಹಾರ ಘೋಷಣೆ ಮಾಡದೆ ಇನ್ನು ಹಾನಿ ಅಂದಾಜು ಮಾಡುವುದರಲ್ಲೆ ಇದೆ.

ಹಿಂದೆ ಎನ್ ಡಿ ಎ ಸರ್ಕಾರ ಅಧಿಕಾರದಲ್ಲಿದ್ದಾಗ ನೈಸರ್ಗಿಕ ವಿಕೋಪ ಪರಿಹಾರ ಪ್ರಾಧಿಕಾರವನ್ನು ರಚಿಸಲಾಯಿತಾದರೂ ಅದಕ್ಕೆ ಶಾಸನಾತ್ಮಕ ಅಧಿಕಾರ ಕೊಡಲಿಲ್ಲ. ಇಲ್ಲಿಯುವರೆಗೂ ಈ ಪ್ರಾಧಿಕಾರಕ್ಕೆ ಹಣ ನಿಗದಿಯಾಗಲಿಲ್ಲ. ಎನ್ನುವುದು ನಿಜಕ್ಕೂ ಮತ್ತೊಂದು(ಮನುಷ್ಯ ನಿರ್ಮಿತ) ದುರಂತವೇ ಸರಿ.

ಉತ್ತರ ಭಾರತದಲ್ಲಿನ ಪ್ರವಾಹ ಪರಿಸ್ಥಿತಿಗೆ ಕಾರಣಗಳು ಹಲವು. ಬಿಹಾರ ಮತ್ತು ನೆರೆಯ ಪ್ರದೇಶಗಳಲ್ಲಿನ ಪ್ರವಾಹಕ್ಕೆ ಕಾರಣಕ್ಕೆ ನೇಪಾಳ ದೇಶದಿಂದ ಭಾರತಕ್ಕೆ ಹರಿದು ಬರುವ ನೀರೇ ಕಾರಣವಾಗಿದೆ. 1996ರಲ್ಲಿ ನೇಪಾಳ ಕಮ್ಯುನಿಸ್ಟ್ ಪಕ್ಷ(ಸಿಪಿಎನ್(ಯುಎಮ್ ಎಲ್) ಪಕ್ಷದ ಅಧಿಕಾರಿ ಪ್ರದಾನಿಯಾಗಿದ್ದ ಸಂದರ್ಭದಲ್ಲಿ ಭಾರತ



ತೀರ್ಥಹಳ್ಳಿ - ನಡುನೀರಿನಲ್ಲಿ

ಮತ್ತು ನೇಪಾಳದ ನಡುವೆ ಆಗಿದ್ದ ಒಪ್ಪಂದ ಜಾರಿಯಾಗದೆ ಹಾಗೆ ನೆನೆಗುದಿಗೆ ಬಿದ್ದಿದೆ. ಅದು ಜಾರಿಯಾಗಿದಿದ್ದರೆ, ಸಾವಿರಾರು ಮೇಗಾವ್ಯಾಟಿಟ್ ವಿದ್ಯುತ್ ಉತ್ಪಾದನೆಯೂ ಆನುತ್ತಿತ್ತು. ಪ್ರವಾಹ ಭಿಕರತೆಯನ್ನು ನಿವಾರಿಸಬಹುದಿತ್ತು.

ಇಂತದ್ದೆ ಪ್ರಶ್ನೇ ಚೀನಾ ದೇಶದೊಂದಿಗೆ ಇದೆ. ಚೀನಾದ ಪ್ರದೇಶ ಪ್ರವಾಹದ ನೀರು ಟಿಬೆಟಿಟ್ ಮಾರ್ಗವಾಗಿ ದೊಡ್ಡ ಪ್ರಮಾಣದಲ್ಲಿ ಬ್ರಹ್ಮಪುತ್ರ ನದಿಯನ್ನು ಸೇರಿ ಈಶಾನ್ಯ ಭಾರತದಲ್ಲಿ ಭೀಕರ್ ಸಾವು ನೋವು ನಷ್ಟಗಳಿಗೆ ಕಾರಣವಾಗುತ್ತಿದೆ. ಚೀನಾದೊಂದಿಗೆ ಈ ಸಂಬಂಧ ಭಾರತ ಮಾತುಕತೆಗೆ ಮುಂದಾಗಿ ಸೂಕ್ತ ಯೋಜನೆ ರೂಪಿಸಬೇಕಾದ ತುರ್ತು ಅಗತ್ಯವಿದೆ.

ಇನ್ನು ಗಂಗಾ ನದಿಯ ಪ್ರಶ್ನೆ. ನದಿಯಲ್ಲಿ ಹೂಳು ತುಂಬುವುದು, ನದಿ ಪಾತ್ರದ ಆಕ್ರಮಣ, ಒತ್ತುವರಿಯಂತಹ ಕ್ರಮಗಳು ಪರಿಸ್ಥಿತಿ ಇಷ್ಟು ವಿಕೋಪಕ್ಕೆ ಹೋಗಲು ಕಾರಣವಾಗಿದೆ. ಈ ಸಮಸ್ಯೆಗಳ ಪರಿಹಾರ ಪ್ರತ್ಯೇಕ ರಾಜಕೀಯ ಇಚ್ಛಾಶಕ್ತಿ ಬೇಕು. ಈಗ ಅದರದ್ದೆ ಗಂಭೀರ ಕೊರತೆಯಾಗಿದೆ. ಏನಿದ್ದರೂ ತಡಮಾಡದೇ ಕೇಂದ್ರ ಸರ್ಕಾರ ತಕ್ಷಣ ಪರಿಹಾರ ಒದಗಿಸಬೇಕು.

ಕರ್ನಾಟಕದಲ್ಲಿ ಪ್ರವಾಹದ ಅಬ್ಬರ.

ಕರ್ನಾಟಕ ರಾಜ್ಯದಲ್ಲಿ ಮಳೆ ಮತ್ತು ಪ್ರವಾಹದ ಅಬ್ಬರಕ್ಕೆ ಇಲ್ಲಿಯವರೆಗೆ 242 ಜನರು ಪ್ರಾಣ ಕಳೆದುಕೊಂಡಿದ್ದಾರೆ ಸುಮಾರು 10 ಸಾವಿರದಷ್ಟು ಜಾನುವಾರಗಳು ಕೊಚ್ಚಿ ಹೋಗಿರುವ ವರದಿ ಇದೆ. ಕೇವಲ ನಾಲ್ಕು ದಿನಗಳಲ್ಲಿ 34 ಜನ ಸತ್ತಿದ್ದಾರೆ. ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳಷ್ಟು ಬೆಳೆಹಾನಿ ಹಾಗೂ ಒಂದು ಸಾವಿರ ಕೋಟಿಗಳಷ್ಟು ಆತಿ ಪಾಸ್ತಿ ಹಾನಿ ಆಗಿದೆ ಎಂದು ಸರ್ಕಾರ ಅಂದಾಜು ನಡೆಸಿದೆ. ಒಂದು ಲಕ್ಷ ಹೆಕ್ಟೆರ್ ಪ್ರದೇಶದಲ್ಲಿ ಜಲಾವೃತ್ತಗೊಂಡಿದೆ. 84 ಸಾವಿರ ಜನರು ತೊಂದರೆಗೊಳಗಾಗಿದ್ದಾರೆಂದು ಅಂದಾಜು ಮಾಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ದಶಕಗಳಲ್ಲೇ ದಾಖಲೆ ಎನ್ನಬಹುದದ ಭಾರಿ ಮಳೆ ಸುರಿದಿದೆ. ದಕ್ಷಿಣ ಕನ್ನಡ, ಬೆಳಗಾಂ, ಶಿವಮೊಗ್ಗ, ಹಾವೇರಿ, ದಾವಣಗೇರೆ, ಬಾಗಲಕೋಟೆ, ಕೊಡಗುಗಳಲ್ಲಿಯೂ ವ್ಯಾಪಕ ಹಾನಿಗಳು ಸಂಭವಿಸಿವೆ. ಜನರ ಬದುಕು ತೀರಾ ಸಂಕಷ್ಟಕ್ಕೆ ಗುರಿಯಾಗಿದೆ.

ಸರ್ಕಾರ ತಕ್ಷಣಕ್ಕೆ ನೀಡುವ 2 ಸಾವಿರ, 1 ಸಾವಿರ ಪರಿಹಾರ ಏನೂ ಸಾಲದ್ದಾಗಿದೆ. ಸರ್ಕಾರಿ ಪರಿಹಾರ ದೊಡ್ಡ ಕೈ ಮುಳುಗುತ್ತಿರುವ ಜನರಿಗೆ ಹುಲ್ಲುಕಡ್ಡಿಯ ಆಸರೆಯಂತಾಗದೆ ನಿಜವಾದ ಆಶ್ರಯವಾಗಬೇಕಾಗಿದೆ. ಪರಿಸ್ಥಿತಿಯ ಅಂದಾಜು ಪರಿಹಾರ ನೀಡಿಕೆ ತ್ವರಿತವಾಗಿ ಆಗಬೇಕಿದೆ. ○

ಅಮೋಘ ದೇಶಪ್ರೇಮದ ಪರಿ

ಸ್ವಾತಂತ್ರ್ಯ ದಿನಾಚರಣೆ ಹತ್ತಿರ ಬರುತ್ತಿದೆ ಎನ್ನುತ್ತಿರುವಾಗ ಆ ಮಧ್ಯಾಹ್ನ ಒಂದು ಆಟೋ ಕಛೇರಿಯ ಮುಂದೆ ನಿಂತಿತು. ಹಣೆಗೆ ಕೇಸರಿ ನಾಮ ಬಳಿದುಕೊಂಡ ಆಟೋ ಚಾಲಕ ಕೆಳಗಿಳಿದು ನಿಂತರು.

ಆ ಆಟೋ ಹಿಂದೆ ಬರೆದ ಘೋಷಣೆ ನೋಡಿ ಸ್ವಲ್ಪ ತಲೆ ತಿರುಗಿತು "ನನಗೆ ಅಧಿಕಾರ ಸಿಕ್ಕಿದಲ್ಲಿ ಮಾಡುವ ಮೊದಲ ಕೆಲಸ ಮತಾಂತರದ ನಿಷೇಧ. ಕಾರಣ, ಯಾವ ಮನೆಗೆ ಕ್ರೈಸ್ತರ ಪ್ರವೇಶವಾಗುವುದೋ, ಆ ಮನೆಯನ್ನು ಒಡೆಯುತ್ತಾರೆ. ಗ್ರಾಮವನ್ನುಒಡೆಯುತ್ತಾರೆ. ಕೊನೆಗೆ ರಾಷ್ಟ್ರವನ್ನು ಛಿದ್ರಗೊಳಿಸುತ್ತಾರೆ - ಮಹಾತ್ಮ ಗಾಂಧೀಜಿ"


ಈ ಹೇಳಿಕೆಯ ಕೆಳಗೆ ಮಹಾತ್ಮ ಗಾಂಧಿಜಿಯ ಚಿತ್ರ. ಅಬಬ್ಬಾ ಎಲ್ಲಿ ಹೇಳಿದ್ದಾರೆ ಗಾಂಧಿಜಿ ಹೀಗೆ. ಏನಿದು ಕತೆ. ಅವರನ್ನು ಮಾತನಾಡಿಸಿದಾಗ ಅವರೊಂದು ಕರಪತ್ರ ಕೈಗಿತ್ತು ಆಗ ತಿಳಿಯಿತು ಅವರೊಬ್ಬ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತ.

ಬೆಂಗಳೂರಿನ ಬನಪ್ಪ ಪಾರ್ಕ್‌ನಲ್ಲಿ ಆಗಸ್ಟ್ 14ರ ಮಧ್ಯರಾತ್ರಿ ಸೇರಿ ನಡೆಸುವ 'ಅಖಂಡ ಭಾರತ ಸಂಕಲ್ಪ ದಿನ' ಕ್ಕೆ ಬನ್ನಿ ಎನ್ನುತ್ತದೆ ಕರಪತ್ರ. ಕರಪತ್ರದಲ್ಲಿ ಭಯೋತ್ಪಾದನೆಗೆ ಮುಸ್ಲಿಂರೇ ಹೊಣೆ ಎಂಬಂತೆ, ಉದ್ರಿಕ್ತ ಭಾಷೆಯ ವಿವರಣೆ ಇದೆ. ಕರಪತ್ರ ಎಡಗಡೆ 'ಓಂ' ಸಂಕೇತ, ಬಲಕ್ಕೇ ಭಗತ್ ಸಿಂಗ್, ಭಗತ್ ಸಿಂಗ್ ರು ನಂಬಿದ 'ಸಮಾಜವಾದ' ಮಾರ್ಕ್ಸ್‌ವಾದದ ಯಾವ ಪ್ರಸ್ತಾಪ ನೆನಾಪೂ ಇಲ್ಲ.

ಸಂಘ ಪರಿವಾರದ ಜನ ಸ್ವಾತಂತ್ರ್ಯ ಹೋರಾಟಕ್ಕೆ ಇಳಿದಿದ್ದರೆ ಇವೆಲ್ಲಾ ತಿಳಿದಿರುತ್ತಿತ್ತು. ಅವರು ಇಳಿದಿರಲಿಲ್ಲ ಪಾಪ ಈ ಆಟೋ ತಾನೇ ಏನು ಮಾಡಿಯಾನು.

ಗಾಂಧೀಜಿ ಏನು ಹೇಳಿದದು. ಇವರೇನು ಬರೆದುಕೊಂಡರು. ಭಗತ್ ಸಿಂಗ್ ಏಯೂಾಕಾಗಿ ಹೋರಾಡಿದದು. ಇವರು ಅವರ ಹೆಸರನ್ನು ಯಾತಕ್ಕಾಗಿ ಬಳಸುತ್ತಿದ್ದಾರೆ?

ರಾಷ್ಟ್ರೀಯ ಸ್ವಯಂ ಸೇವಕ ಸಂಘವನ್ನು ಗೋಬೆಲ್ಸ್ ಸಂತತಿ ಎಂದು ಕರೆಯುವುದು ಸುಮ್ಮನೇ ಏನೂ ಅಲ್ಲ ಬಿಡಿ. ಇಲ್ಲೇ ಇದೆಯಲ್ಲಾ ಸಾಕ್ಷಿ.



ಉಗ್ರ ದೇಶಪ್ರೇಮವನ್ನೆ ಸಾರುವ ಕರಪತ್ರದಲ್ಲಿ ರೈತರ ಆತ್ಮಹತ್ಯೆಗಳ ಸುಳಿವಿಲ್ಲ. ದೇಶವನ್ನು ಕಾಡುತ್ತಿರುವ ನಿರುದ್ಯೋಗ, ಬಡತನ, ಅಸ್ಪೃಶ್ಯತೆ ಯಾವುದರ ಈ ಪದಗಳಿಗೂ ಇಲ್ಲಿ ಜಾಗವಿಲ್ಲ ಆದರೂ ಇವರದು ದೇಶ ಪ್ರೇಮ. ಪಾಕಿಸ್ತಾನದ ಬಗೆಗೆ ಕಿಡಿಕಾರಿ ಬಿಟ್ಟರೆ ಸಿದ್ಧವಾಯಿತಲ್ಲಾ ನಮ್ಮ ದೇಶಪ್ರೇಮ.



ಪಿಸುಮಾತು ಬಹುದೂರ ಕೇಳುತ್ತೆ

- ಚೀನಿ ಗಾದೆ



> ಇಲ್ಲಿ ಹೆಣ್ಣಾಗಿ ಹುಟ್ಟಿದ ಕಾರಣಕ್ಕಾಗಿಯೇ ಎಷ್ಟೆಲ್ಲ ನೋವು, ಅಪಮಾನಗಳ ಸರಮಾಲೆ, ವಿವಾಹ ಮತ್ತು ಕುಟುಂಬ ಎಂಬ ಸಂಸ್ಥೆಗಳು ಸುಳ್ಳು ಸಂರಕ್ಷಣೆಯ ಮುಖವಾಡ ಹೊತ್ತಿರುವುದು ಸಾಬೀತಾಗುತ್ತಿತ್ತು.

ಬಿಸಿಲ ಬೀದಿಯಲ್ಲೂ ತಂಪು ಬೆಳಕರಸಿ

ಇದು ಜನವಾದಿ ಮಹಿಳಾ ಸಂಘಟನೆಯ ಸಮ್ಮೇಳನಗಳ ಕಾಲ. ಪ್ರಜಾಪ್ರಭುತ್ವ ಮಾರ್ಗದಲ್ಲಿ ಕ್ರಮಿಸುವ ಸಂಘಟನೆ ಪ್ರತಿ ಮೂರು ವರ್ಷಕ್ಕೊಮ್ಮೆ ನಿಭಾಯಿಸಿದ ಕೆಲಸಗಳ ವಿಮರ್ಶೆ ಮತ್ತು ಮುಂದಿನ ಮೂರು ವರ್ಷಗಳವರೆಗೆ ನಿರ್ವಹಿಸಬೇಕಾದ ಕಾರ್ಯಗಳನ್ನು ಗುರುತಿಸಿ ಅತ್ಯಂತ ಜವಾಬ್ದಾರಿಯಿಂದ ಮುನ್ನಡಿಯಿಡುತ್ತದೆ. 'ಹೆಣ್ಣೆಂಬ' 'ಛೀ'ಕಾರಕ್ಕೆ ಎದುರಾಗಿ ಅಸ್ಮಿತ್ರತೆಯ ಸ್ವಾಭಿಮಾನದ ಕಾಂತಿಯಿಂದ ಕಂಗೊಳಿಸುವ ಗೆಳತಿಯರು ಒದಗಿ ಬಂದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡು ಮುನ್ನುಗ್ಗಿದ ಪ್ರತಿಫಲವೇ ಈ ಬಾರಿಯ ದುಪ್ಪಟ್ಟು ಸದಸ್ಯತ್ವ. ಯಾವ ಆಡಂಬರಗಳು, ಒಣಹಮ್ಮುಗಳಿಲ್ಲದ ಸಮ್ಮೇಳನದ ವೇದಿಕೆಯ ಮೇಲೆ ಹೆಂಗಳೆಯರ ಬದುಕು ಮಗ್ಗುಲಿನ ಆಯಾಮಗಳ ಅನಾವರಣ -ದುಃಖ ದುಮ್ಮಾನ, ನೋವು ನಲಿವು ಸಮಸ್ಯೆ ಸವಾಲು, ಒಳಗಿನ ಬಿಕ್ಕುವಿಕೆಗಳು ಪ್ರತಿಷ್ಠೆಯ ಪರದೆ ಹರಿದು ಈಚೆ ಬಂದಾಗ ತಲ್ಲಣದ ಕಾವು ಆಡರಿಕೊಂಡಿರುತ್ತದೆ. ಎರಗಿದ ಸಮಸ್ಯೆಗಳ ಕಗ್ಗಂಟು ಬಿಡಿಸಿ ಧೀಮಂತಿಕೆಯಿಂದ ಧೀರತೆಯಿಂದ ಬದುಕು ಹೆಣೆದುಕೊಂಡ ಅನುಭವಗಳು ಕೇಳುವಾಗ ಖಂಡಿತ ಎದೆ ತುಂಬಿ ಬರುತ್ತದೆ.

ಹೆಣ್ಣಾಗಿ ಹುಟ್ಟಿದ್ದಕ್ಕೆ

ಹೆಣ್ಣಾಗಿ ಹುಟ್ಟಿದ ಕಾರಣಕ್ಕಾಗಿಯೇ ಎಷ್ಟೆಲ್ಲ ನೋವು, ಅಪಮಾನಗಳ ಸರಮಾಲೆ, ವಿವಾಹ ಮತ್ತು ಕುಟುಂಬ ಎಂಬ ಸಂಸ್ಥೆಗಳು ಸುಳ್ಳು ಸಂರಕ್ಷಣೆಯ ಮುಖವಾಡ ಹೊತ್ತಿರುವುದು ಸಾಬೀತಾಗುತ್ತಿತ್ತು. ಈ ಬಲಿಷ್ಠ ಕೋಟೆಗಳ ಒಳಗೇ ಜೀವನಪೂರ್ತಿ ನಲುಗಿ ನರಳುವ ಪರಿಸ್ಥಿತಿ ಗಾಬರಿ ಹುಟ್ಟಿಸುತ್ತದೆ. ಲೈಂಗಿಕ ದೌರ್ಜನ್ಯಗಳು, ಕೆಲಸ ಮಾಡುವ ಸ್ಥಳಗಳಲ್ಲಿ ಮಾತ್ರವೇ ಅಲ್ಲ, ಕುಟುಂಬದ ಒಳಗೆ, ತಾಳಿಯ ನೆರಳಲ್ಲಿ ಸಮೀಪದ ಕಳ್ಳುಬಳ್ಳಿಯ ಸಂಬಂಧಿಕರಿಂದ ನಡೆಯುತ್ತಿರುವುದು ನಂಬಿಕೆಯ ಮೂಲಕ್ಕೆ ಕೊಡಲಿ ಪೆಟ್ಟಾದಂತೆ.

ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮುಸ್ಲಿಂ ಮಹಿಳೆ ದೂರು ಹೀಗಿದೆ. ಬಾನು (ಹೆಸರು ಬದಲಿಸಲಾಗಿದೆ) ಅರಳುಗಂಗಳ ಸುಂದರಿ .ಗಂಡ ವ್ಯಾಪಾರಿ. ಮನೆಯಲ್ಲಿರುವುದು ಮಾವ, ಗಂಡ ಬಾನು ಮತ್ತು ಎಳೆ ಮಗು. ಮುಂಜಾನೆದ್ದು ವ್ಯಾಪಾರಕ್ಕೆ ಹೊರಟರೆ ಗಂಡ ವಾಪಾಸು ಬರುವುದು ಪುನಃ ರಾತ್ರಿಗೆ. ಒಮ್ಮೊಮ್ಮೆ ಮರುದಿನವೂ. ಪುಟ್ಟ ಮನೆಯಲ್ಲಿನ ತನ್ನ ಸಂಸಾರವು ನಿರಾತಂಕವಾಗಿ ಬೆಳೆದು ನಳನಳಿಸುವ ಕನಸು ಹೊತ್ತವಳಿಗೆ ಅದೊಂದು ಮುಂಜಾನೆ ಬಚ್ಚಲು ಮನೆಯಲ್ಲಿ ಜಳಕ ಮಾಡುವಾಗ ಯಾರೋ ತನ್ನನ್ನು ಗಮನಿಸುತ್ತಿರುವುದು ಅರಿವಿಗೆ ಬಂದು ಜಂಘಾಬಲವೇ ಉಡುಗಿದಂತಾಯಿತು. ಸರಬರ ಸೀರೆ ಸುತ್ತಿಕೊಂಡು ಹೊರಬಂದು ನೋಡಿದರೆ ಎದೆಯೊಡೆದು ನೀರಾದಳು. ಅರವತ್ತು ದಾಟಿದ ಬಿಳಿ ಗಡ್ಡದ, ತಂದೆಯ ಸ್ಥಾನದಲ್ಲಿ ನಿಲ್ಲಬೇಕಾದ ಮಾವ, ಅಸಹ್ಯ ಬರಿಸುವ ಆಸೆ ಕಂಗಳಿಂದ ಒಡೆದ ಬಾಗಿಲ ಕಿಂಡಿಯಿಂದ ಹಣಿಕುತ್ತಿದ್ದ. ಗಾಬರಿ ತಲ್ಲಣ, ಅಪಮಾನಗಳಿಂದ ಹಿಂಡಿ ಹಿಪ್ಪೆಯಾದ ಬಾನು ಹೊರ ಪುರುಷನಾದರೆ ಕಪಾಳಕ್ಕೆರಡು ಬಾರಿಸುತ್ತಿದ್ದಳೇನೋ. ಈತ ಮಾವ. ಏನು ಮಾಡಲೂ ತೋಚದೆ, ಅರಗಿಸಿಕೊಳ್ಳಲೂ ಆಗದೆ ವಿಲವಿಲ ಒದ್ದಾಡುವಂತಾಗಿ ಕಣ್ಣಾಲಿಗಳ ತುಂಬ ರೋಷ ಹರಿದಾಡಿ ಒಳಖೋಲಿಗೆ ಓಡಿ ಬಾಗಿಲಿಕ್ಕಿಕೊಂಡು ಅತ್ತೇ ಅತ್ತಳು. ಎಂಥ ಭಯಾನಕ ಅಸಹಾಯಕ ಬಲೆಯಲ್ಲಿ ಒದ್ದಾಡುವ ತನ್ನ ಪರಿಸ್ಥಿತಿಗೆ ಮತ್ತೂ ಪಾತಾಳಕ್ಕಿಳಿದಳು. ಒಳಗೋಡಿದ ಸೊಸೆಯ ಬಿಳಿ ಪಾದಗಳು ದಿಟ್ಟಿಸಿದ ಲಜ್ಜೆಗೇಡಿ ಮುದಿ ಮಾವ, ಮುಚ್ಚಿಕೊಂಡ ಬಾಗಿಲನ್ನು ಬಡಿದೇ ಬಡಿದ. ಯಾರ ಮುಂದೆಯೂ ತೆರೆದುಕೊಳ್ಳದ ಸಂಬಂಧದ ಗುಟ್ಟಿಗೆ ಭರವಸೆಯಿತ್ತು ಸಣ್ಣದನಿಯಲ್ಲಿ. ವಿಕಾರವಾಗಿ ಆಹ್ವಾನಿಸಿದ. ಬಾನು ಸ್ಥಿತಿ ಹೇಗಾಗಬೇಡ? ತನ್ನವ್ವ ಹೇಳಿದ ಮಾತೊಂದು ಆ ಕತ್ತಲ ಖೋಲಿಯಲ್ಲಿ ನೆನಪಾಗಿ ಬೆವರಿದಳು "ಮಗಳೇ ಗಂಡಸೂರು ಅಂದ್ರ ತಲಿದಿಂಬಿನೆಡೆಯ ಹಾಂವಿದ್ದಾಂಗ........' ಬಾಗಿಲು ತೆರೆಯಲಿಲ್ಲ. ಹಸಿವಿನಿಂದ ಆಳುವ ಕೂಸಿಗೂ ಹಾಲೂಡದೆ ಕಲ್ಲಿನಂತೆ ಕೂತಳು.

ನಂಬದ ಗಂಡ

ರಾತ್ರಿ ಬಂದ ಗಂಡನಿಗೆ ಎಲ್ಲವೂ ಅರುಹಿದಳು. ತಂದೆಯ ದುರ್ವರ್ತನೆ ನಂಬಲು ಸಾಧ್ಯವಾಗಲೇ ಇಲ್ಲ. ಪರ ಮನೆಯಿಂದ ಬಂದ ಹೆಂಡತಿಯನ್ನೇ ಅನುಮಾನಿಸಿದ. ಬೇರೆ ಮನೆ ಮಾಡಲು ಹುನ್ನಾರು ಹೆಣೆಯುತ್ತಿರುವಳು, ಮುಪ್ಪು ಮಾವನ ಸೇವೆ ಮಾಡುವ ಹೊಣೆಯಿಂದ ತಪ್ಪಿಸಿಕೊಳ್ಳುತ್ತಿರುವಳು ಎಂದೆಲ್ಲ ಆಪಾದನೆಯ ಪಟ್ಟಿಯೇ ಉಸುರಿದ. ಈಗಂತೂ ಅವಳು ಏನೂ ತೋಚದ ದಿಕ್ಕೇಡಿಯಾದಳು. ಉಸಿರುಗಟ್ಟಿಸುವ ದಿನಗಳು, ಭಯದ ಬೆಳಕಿನ ದಿನಗಳು, ವಿಷದ ಕರಿನಾಗರನಿಂದ ತಪ್ಪಿಸಿಕೊಳ್ಳಲು ಹೆಣಗುವ ದಿನಗಳು. ಕಡೆಗೊಮ್ಮೆ ರೋಸಿಹೋದ ಬಾನು ಅಪಾಯದಿಂದ ಪಾರಾಗಲು ಸಂಘದ ಬಾಗಿಲು ತಟ್ಟಿದಳು. ನಿರ್ಭಯದಿಂದ ಸೆಟೆದು ನಿಂತಳು. ರೈತ ಸಂಘ, ಮಹಿಳಾ ಸಂಘಗಳು ರಕ್ಷಣೆಗೆ ನಿಂತವು. ಪೊಲೀಸ್ ಸ್ಟೇಷನ್‌ನಲ್ಲಿ ಕ್ಷಮೆ ಕೇಳಿದ ಮಾವ. ತಪ್ಪಿಗೆ ಪಶ್ಚಾತ್ತಾಪ ಪಟ್ಟ ಗಂಡ. ಕಡೆಗೆ ಬೇರೆ ಮನೆ ಮಾಡಿಕೊಂಡು ಹೊಸ ದಿನಗಳತ್ತ ಮುಖ ಮಾಡಿತು ಬಾನು ಬದುಕು.

ಕಸ್ತೂರಿ ಮೈಮೇಲೆ ಕಲೆ

ಸಮ್ಮೇಳನವೊಂದರಲ್ಲಿ ಗೆಳತಿಯೊಬ್ಬಳು ವಿವರಿಸಿದ ಘಟನೆ ಗಾಬರಿ ಪಡುವಂತಹದ್ದೆ. ಕಸ್ತೂರಿಯೆಂಬ ಹುಡುಗಿ ಹಸೆಮಣೆ ಹತ್ತಿದ ಹೊತ್ತಲ್ಲಿ ನವೋಲ್ಲಾಸದಿಂದ ಸಂಭ್ರಮದ ಕನಸುಗಳನ್ನಾಲಿಸಿ ತೇಲುತ್ತಿದ್ದಳು. ಬಾಸಿಂಗದ ಹಿಂದಿರುವ ಪತಿಯ ಕಣ್ಣುಗಳಲ್ಲಿಯೂ ತನ್ನಂತೆ ನೂರು ಕನಸುಗಳಿರಬಹುದೆಂದು ಬಗೆದಳು. ಆದರೆ ಮದುವೆಯಾದ ಮೊದಲ ದಿನದಿಂದಲೇ ಗಂಡನ ವಿಕೃತ ಚಟದಿಂದ ಭಯ ಬಿದ್ದಳು. ಪ್ರತಿ ರಾತ್ರಿಗಳು ನಡೆಯುವ ತಾಳಿಯ ನೆರಳಿನ ಧಾಳಿಗಳಲ್ಲಿ ಕಳೆಯಬೇಕಾಯ್ತು. ಬೆಳ್ಳಗೆ ಚಂದ್ರಾಮನ ಹಾಲ್ದಿಂಗಳಂತೆ ಹೊಳೆಯುವ ಕಸ್ತೂರಿಯ ಮೈ ಮೇಲೆ ಕ್ರಮೇಣ ಸಣ್ಣ ಗೋಲಾಕಾರದ ಕಲೆಗಳು ಕಾಣಿಸತೊಡಗಿದವು. ಅವು ಸಿಗರೇಟಿನಿಂದ ಸುಟ್ಟ ಗಾಯಗಳು. ಅಷ್ಟು ಮಾತ್ರ ಅಲ್ಲ, ವಿಕೃತ ಲೈಂಗಿಕ ಆಕ್ರಮಣಗಳು. ಇದು ತಾಳಲಿಕ್ಕಾಗದೆ ಮುಂಜಾನೆದ್ದಾಗ ತನ್ನಂಥ ಹೆಣ್ಣು ಜೀವವಾದ ಅತ್ತೆಯ ಮುಂದೆ ಕಷ್ಟ ತೋಡಿಕೊಂಡು ಕಣ್ಣೀರುಗರೆದಳು. ಅತ್ತೆ ಹೇಳಿದ್ದೇನು? "ಗಂಡ ಅಂದ್ರ ಹಂಗೇ ಇರ್ತಾನ. ಹೆಣ್ಣೆ ಗಂಡನ ಸಂಗಡ ಹಂಗೆಲ್ಲ ಇರಬೇಕಾಗ್ತದ. ಆಟಕ್ಕೆಲ್ಲ ಹಿಂಗ ಭಂಡ ಮಾಡ್ತಾರೇನು?" ಎಂದು ಅಷ್ಟಕ್ಕೆ ಸುಮ್ಮನಾಗಲಿಲ್ಲ. "ತವರ್ನಾಗ ಯಾರಿಗರೇ ನೋಡ್ಕೊಂಡಿ ಹ್ಯಾಂಗ...?" ನಿನಗೆ ಗಂಡ ಪಸಂದಿರಲಿಕ್ಕಿಲ್ಲ, ತವರ್ಮನ್ಯಾಗೇ ಹಿಂಗೇ ಕಲಿಸ್ಯಾರೇನು? ಅಂತ ಕೇಳಿ ಕಸ್ತೂರಿಯನ್ನು ಮತ್ತೂ ಪಾತಾಳಕ್ಕಿಳಿಸಿದಳು. ಪಂಚಮಿ ಹಬ್ಬಕ್ಕೆಂದು ತವರಿಗೆ ಹೋದಾಗ ಹೆತ್ತವ್ವನ ಎದೆಯಲ್ಲಿ ಮುಖವಿಟ್ಟು ಅತ್ತು "ಯವ್ವಾ ಮದಿ ಅಂದ್ರ ಇದೇ ಏನು? ಇಂಥಾ ಜೀವನ ನಂಗ ಬ್ಯಾಡ. ನಿನ್ನ ಬಲ್ಲಿ ನಿನ್ನ ನೆರಳ್ನಾಗ ಇರ್ತೀನಿ" ಅಂತ ಕಳ್ಳು ಕರಗುವಂತೆ ಅತ್ತಳು. ಅವ್ವನ ಕರುಳಿನಲ್ಲಿ ಕತ್ತರಿಯಾಡಿಸಿದಂತಾಯ್ತು. ಆದರೆ ಮಾಡುವುದೇನು?' ಗಂಜಿಯ ಕುಡಿದರೂ ಗಂಡನ ಮನಿ ಲೇಸು' ಅನ್ನುವುದು ನೆನಪಾಗಿ ಮಗಳ ಕಣ್ಣೀರು ಒರೆಸಿ ಹೊರಳಿ ಗಂಡನ ಮನೆಗೆ ಕಳಿಸಿದಳು. ಹುಲ್ಲು ಕಡ್ಡಿಯ ಆಸರೆಯೂ ತಪ್ಪಿ ಆಸೆ ಕಳಕೊಂಡ ಕಸ್ತೂರಿಯು ಆತ್ಮಹತ್ಯೆ ಮಾಡಿಕೊಳ್ಳುವ ಆಲೋಚನೆ ಮಾಡಿದಳು. ಸತ್ತು ಸಾಧಿಸುವುದೇನೆಂದು ಮತ್ತೆ ಮನದಲ್ಲಿ ಗಟ್ಟಿಯಾದಳು. ಯಾವತ್ತೋ ಮಾಡಿದ ಟಿಸಿಹೆಚ್ (ಶಿಕ್ಷಕರ ತರಬೇತಿ) ನಿಂದಾಗಿ ಅಚಾನಕ್ಕಾಗಿ ಟೀಚರ್ ನೌಕರಿ ದೊರೆತದ್ದೇ ತಡ ಕಸ್ತೂರಿ ನಿರಾಳ ಉಸಿರು ಬಿಟ್ಟಳು. ನೌಕರಿ ಸೇರಿದಳು. ಆದರೆ ಗಂಡ ಮಾತ್ರ ಸುಮ್ಮನಾಗಲೇ ಇಲ್ಲ. ಕೈಗೆ ಸಿಗದ ಹೆಂಡತಿ ಹೆಸರಿಗೆ ಹೊಲಸು ಭಾಷೆಯ ಪತ್ರ ಬರೆಯತೊಡಗಿದ. ಬಹಿರಂಗವಾಗಿ ಅಪಮಾನಿಸಲು ಮುಂದಾದ. ಇಲಾಖೆಯವರಿಗೆ ಇವಳೊಬ್ಬ ವ್ಯಭಿಚಾರಿ ಎಂದು ಪತ್ರ ಬರೆದ. ಒಳ ಒಳಗೇ ನೋವು ನುಂಗಿದ ಕಸ್ತೂರಿಗೆ ಅದೊಂದು ದಿನ ಸಂಘದ ಹಿತೈಷಿಗಳು ದೊರೆತು ಸಮಸ್ಯೆಯ ಬಲೆಯಿಂದ ಬಿಡಿಸಿಕೊಳ್ಳುವ ಮಾರ್ಗ ತೋರಿದರು. ಗಂಜಿಯೂ ಕೊಡದ ಪತಿಯು ತನ್ನ ಬದುಕಿಗೆ ವಿಷ ಉಣ್ಣಿಸುವುದರಿಂದ ಕಸ್ತೂರಿ ಅನಿವಾರ್ಯವಾಗಿ ಸೆಟೆದು ನಿಲ್ಲಲೇಬೇಕಾಯ್ತು.

ಎಷ್ಟೆಲ್ಲ ಹೇಳು, ಕೇಳುಗಳ ತರುವಾಯವೂ ರಿಪೇರಿಯಾಗದ ಗಂಡ ಈಗ ಜೇಲು ಕಂಬಿ ಎಣಿಸುತ್ತಿದ್ದಾನೆ. ಕಸ್ತೂರಿ ಬಿಸಿಲ ಬೀದಿಯಲ್ಲಿಯೂ ತಂಪರಸಿ ಬಾಳ ಬುತ್ತಿಯಲ್ಲಿ ಸಿಹಿ ತುತ್ತುಗಳನ್ನು ಕಟ್ಟುತ್ತಿದ್ದಾಳೆ.

ಭಾರ ಹೇರುತ್ತಲೇ ಇರುವ ಪಿರಮಿಡ್

ಬಿ.ಎಲ್.ಕೃಷ್ಣೇಗೌಡ

ಮಳವಳ್ಳಿ ಬಂಡವಾಳಶಾಹಿ ಬೆಳವಣಿಗೆಗಳನ್ನು ಈಗ ತಾನೆ ಮೈಗೂಡಿಸಿಕೊಳ್ಳುತ್ತಿರುವ ಪಟ್ಟಣ. ಮಳವಳ್ಳಿ ಪಟ್ಟಣದ ಕೇಂದ್ರ ಭಾಗದಲ್ಲಿರುವ ಹೋಟೆಲ್ಗಳಲ್ಲಿ, ಸೆಲೂನ್ಗಳಲ್ಲಿ ಅಸ್ಪೃಶ್ಯತೆಯನ್ನೇನು ಆಚರಿಸುವುದಿಲ್ಲ. ಕೇಂದ್ರ ಭಾಗದಿಂದ ಹೊರವಲಯಕ್ಕೆ ಚಲಿಸುತ್ತಿದ್ದಂತೆ ಅಸ್ಪೃಶ್ಯತೆಯ ಒಂದೊಂದೇ ಲಕ್ಷಣಗಳು ಗೋಚರಗೊಳ್ಳುತ್ತವೆ. ಪೇಟೆ ಬೀದಿಯ ಕೊನೆಯಲ್ಲಿರುವ ಕೆಂಪಮ್ಮನ ಹೋಟೇಲಿನಲ್ಲಿ ಈಗಲೂ ಎರಡು ಲೋಟ ಪದ್ಧತಿ ಜಾರಿಯಲ್ಲಿದೆ. ದಲಿತರು ಬಾಗಿಲ ಬಳಿ ಕುಳಿತು ತಿಂಡಿ ತಿನ್ನುವುದೋ, ಚಾ ಕುಡಿಯುವುದೋ ಮಾಡಬೇಕು. ಪೇಟೆ ಬೀದಿಯ ಆರಂಭದಲ್ಲಿರುವ ಹೋಟೇಲಿನಲ್ಲಿ ಒಂದೇ ಟೇಬಲಿನಲ್ಲಿ ಅಕ್ಕ-ಪಕ್ಕ ಕುಳಿತು ತಿಂಡಿ ತಿಂದ ದಲಿತ ಮೇಲ್ಜಾತಿಯ ಗೆಳೆಯರಿಬ್ಬರು ಬೀದಿಯ ಕೊನೆಯಲ್ಲಿರುವ ಹೋಟೇಲಿಗೆ ಹೋದರೆ ಒಬ್ಬ ಬಾಗಿಲಲ್ಲಿ ಕುಳಿತು ಪ್ರತ್ಯೇಕವಾಗಿಟ್ಟಿರುವ ಲೋಟದಲ್ಲಿ, ಮತ್ತೊಬ್ಬ ಹೋಟೇಲಿನ ಹಜಾರದಲ್ಲಿ ಎಲ್ಲರೂ ಬಳಸುವ ಲೋಟದಲ್ಲಿ ಚಾ ಕುಡಿಯಬೇಕು. ಹೊರವಲಯದಲ್ಲಿರುವ ಸೆಲೂನ್ಗಳಲ್ಲಿ ದಲಿತರಿಗೆ ಕ್ಷೌರ ಮಾಡುವುದಿಲ್ಲ. ಕ್ಷೌರಕ್ಕೆ ಪಟ್ಟಣದ ಮಧ್ಯಕ್ಕೆ ಬರಬೇಕು.

25 ವರ್ಷಗಳಿಂದ.....

ನಾಲ್ಕು ಕೇರಿಗಳಲ್ಲಿ ದಲಿತರಿಗೆ ಅವರಿರುವ ಜಾಗಗಳನ್ನು ಹೊರತುಪಡಿಸಿ ಬೇರೆಲ್ಲೂ ನಿವೇಶನಗಳಿಲ್ಲ. ದಲಿತರನ್ನೂ ಒಳಗೊಂಡಂತೆ ಪಟ್ಟಣದ ಬಡವರಿಗೆ ಹಂಚಿಕೆಯಾಗಲು ಕಾದಿರುವ ಸಾವಿರಾರು ನಿವೇಶನಗಳನ್ನು ಕಳೆದ 25 ವರ್ಷಗಳಿಂದ ಹಂಚಲಿಲ್ಲ. ಹೊಸ ಬಡಾವಣೆಯೊಂದನ್ನು ಹೊರತುಪಡಿಸಿ ಬೇರೆಲ್ಲೂ ದಲಿತರಿಗೆ ನಿವೇಶನಗಳನ್ನು ಮಾರುವುದಿಲ್ಲ. ಹೊಸ ಬಡಾವಣೆಯಲ್ಲೋ 30-40 ಅಳತೆಯ ನಿವೇಶನಕ್ಕೆ ಕನಿಷ್ಠ ನಾಲ್ಕು ಲಕ್ಷ ರೂ.ಗಳಷ್ಟು ದುಬಾರಿ. ಬಲಿಷ್ಠ ದಲಿತರು ಮಾತ್ರವೇ ಅಲ್ಲಿ ನಿವೇಶನಗಳನ್ನು ಕೊಳ್ಳಬಹುದು.

ಸುಮಾರು 900 ಕುಟುಂಬಗಳನ್ನು ತನ್ನೊಡಲಲ್ಲಿ ತುಂಬಿಕೊಂಡಿರುವ ದಲಿತ ಕೇರಿಗಳು ಜನರಿಂದ ತುಂಬಿ ತುಳುಕುತ್ತಿವೆ. ನೆಂಟರನ್ನೋ, ಹತ್ತಿರದ ಸಂಬಂಧಿಗಳನ್ನೋ ಮನೆಗೆ ಆಹ್ವಾನಿಸಲು ನಾಲ್ಕಾರು ಬಾರಿ ಯೋಚಿಸಬೇಕಾದ ಸ್ಥಿತಿ ದಲಿತರಿಗಿದೆ. ಅಳಿಯ-ಮಗಳು ಬಂದರೆ ನಾವು ಮಲಗಲು ಬೇರೆಯವರ ಮನೆಯಲ್ಲಿ ಜಾಗ ಹುಡುಕಬೇಕಾಗಿದೆ ಎಂದು ಕಣ್ಣೀರಾಕುತ್ತಾರೆ ಕೀರ್ತಿನಗರದ ಪದ್ಮಾವತಮ್ಮ.


ಬಾಡಿಗೆಗೆ ಮನೆ ಕೊಡುವುದಿಲ್ಲ

ಬಾಡಿಗೆಗೆ ಮನೆ ಹಿಡಿಯಲು ಹೋದರೆ ಜಾತಿ ಹಿನ್ನೆಲೆ ಕೇಳುವ ಮಾಲೀಕರು ಮನೆ ಕೊಡದೆ ನಿರಾಕರಿಸುತ್ತಾರೆ. ಕನ್ನಿಕಾ ಎಂಬ ಮಾದಿಗ ಜನಾಂಗದ ಶಿಕ್ಷಕಿ ಸಾಂಸಾರಿಕ ಭಿನ್ನಾಭಿಪ್ರಾಯದಿಂದ ಬೇರೆ ಮನೆ ಹಿಡಿಯಲು ಪ್ರಯತ್ನಿಸಿದಾಗ ವಿವಿಧ ಸಂಘಟನೆಗಳ ಒಂದು ವಾರದ ಸತತ ಪ್ರಯತ್ನದ ನಂತರ ಮಾತ್ರವೇ ಮನೆಯೊಂದನ್ನು ಕೊಡಿಸಲು ಸಾಧ್ಯವಾಯಿತು. ಆದೂ ಹಲವಾರು ನಿಬಂಧನೆಗಳೊಡನೆ!

ಸರ್ಕಾರಿ ಅನುದಾನದಿಂದ ದಲಿತ ಕೋಟಾದಲ್ಲಿ ಸಿಕ್ಕಿರುವ ಒಂದೇ ಒಂದು ಎಲ್ಪಿಜಿ ಗ್ಯಾಸ್ ಏಜೆನ್ಸಿಯನ್ನು ಹೊರತುಪಡಿಸಿ ಬೇರಾವ ಮುಖ್ಯ ವ್ಯಾಪಾರಕ್ಕೂ ದಲಿತರು ಪ್ರವೇಶಿಸಲು ಸಾಧ್ಯವಾಗಿಲ್ಲ. ಬಂಡವಾಳ ಹಾಕಲು ಶಕ್ತಿಯಿರುವ ದಲಿತರನ್ನೂ ಶ್ರೇಣೀಕೃತ ಸಮಾಜ ಯಶಸ್ವಿಯಾಗಿ ಲಾಭಗಳಿಸ ಬಹುದಾದ ಕ್ಷೇತ್ರಗಳಿಂದ ದೂರವಿಟ್ಟಿದೆ.

ಆನೇಕಲ್ : ಯುವಕನ ಕೊಲೆಯ ಸುತ್ತಮುತ್ತ

ಬೆಂಗಳೂರು ಜಿಲ್ಲೆಯ ಸುತ್ತಮುತ್ತ ರಿಯಲ್ ಎಸ್ಟೇಟ್ ದಂಧೆ ತೀವ್ರವಾಗುತ್ತಿರುವ ಪರಿಣಾಮ ಆನೇಕಲ್ ತಾಲ್ಲೂಕಿನಲ್ಲಿ ಭೂಮಿ ಬೆಲೆ ಗಗನಕ್ಕೇರಿದೆ. ಬೆಂಗಳೂರು ಜಿಲ್ಲೆಯಲ್ಲಿಯೇ ಅತಿ ಹೆಚ್ಚು ಭೂಮಿಯ ವಿನಿಮಯವಾಗುತ್ತಿರುವುದು ಆನೇಕಲ್ ತಾಲ್ಲೂಕಿನಲ್ಲಿ, ಇದರಿಂದ 5 ಉಪನೋಂದಣಿ ಕಛೇರಿಗಳನ್ನು ಮಾಡಲಾಗಿದೆ. ಇದರ ಪರಿಣಾಮವಾಗಿ ಲ್ಯಾಂಡ್ ಡೆವಲಪರ್ಸ್‌ಗಳ, ರಿಯಲ್ ಎಸ್ಟೇಟ್ ಏಜೆಂಟ್‌ರ ಸಂಖ್ಯೆ,ಇವರ ಕೆಳಗೆ ಕೆಲಸ ಮಾಡುವ ದಾಖಲೆಗಳ ಹುಡುಕಾಟ, ವಿವಾದಿತ ಭೂಮಿ ಸೃಷ್ಟಿ, ಗೂಂಡಾ-ಗುಂಪಾಗಿ ಹೋಗಿ ಆ ಭೂಮಿಗೆ ಕಾಂಪೋಂಡ್, ಬೋರ್ಡ್, ಹಾಕುವುದು, ಅದನ್ನು ತೆಗೆಯಲು ಮತ್ತೊಂದು ಗುಂಪು, ಸುಳ್ಳು ದಾಖಲೆ ಸೃಷ್ಟಿ, ಮತ್ತೊಬ್ಬರಿಗೆ ಮಾರಾಟ, ಬಂದ ಹಣದಲ್ಲಿ ಎಲ್ಲರಿಗೂ ಸುಗ್ಗಿ, ಇದು ಸಾಮಾನ್ಯ. ಮುಗ್ಧ ಜನರು. ಇಂಥ ಚಟುವಟಿಕೆಗಳಿಗೆ ಬಲಿಯಾಗುತ್ತಿರುವುದು. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ದಲಿತ ಯುವಕರು ಮತ್ತು ಭೂಮಿ ಕಳೆದುಕೊಂಡ ರೈತ ಕುಟುಂಬದ



ಯುವಕರು, ಏಕೆಂದರೆ ಓದಲು ಕಾಸಿಲ್ಲ, ಉದ್ಯೋಗವಂತೂ ಇಲ್ಲವೇ ಇಲ್ಲ.

ಇಂಥ ಗುಂಪುಗಳನ್ನೇ ರಿಯಲ್ ಎಸ್ಟೇಟ್ ವ್ಯಾಪಾರದಲ್ಲಿ ತೊಡಗಿಸಿ ಕೊಂಡಿರುವ ಬಿಜೆಪಿ, ಜೆಡಿ(ಎಸ್), ಕಾಂಗ್ರೆಸ್‌ನ ಮುಖಂಡರು ತಮ್ಮ ಪಕ್ಷಗಳ ಕಾರ್ಯಕರ್ತರಾಗಿ ಉಪಯೋಗಿಸುತ್ತಿದ್ದಾರೆ ಮತ್ತು ಅವರೇ ಇಂಥ ಗುಂಪುಗಳಿಗೆ ಮುಖ್ಯಸ್ಥರು.ಇನ್ನು ಲ್ಯಾಂಡ್ ಡೆವಲಪರ್ಸ್‌ಗಳ, ಏಜೆಂಟ್‌ರ ಗುಂಪಿನ ಮುಖ್ಯಸ್ಥರ ಹುಟ್ಟು ಹಬ್ಬಗಳು ನಡೆದರೆ ತಾಲ್ಲೂಕಿನಾದ್ಯಂತ ಕಟೌಟ್‌ಗಳು ಅದರಲ್ಲಿ ಅವುಗಳ ಪೋಟೋಗಳು ರಾರಾಜಿಸುತ್ತವೆ. ಅವರೇ ತೆಗೆಯುವ ವರೆಗೂ ಅವುಗಳನ್ನು ಯಾರು ಮುಟ್ಟುವಂತಿಲ್ಲ. ಇಂಥ ಗುಂಪುಗಳಲ್ಲಿ ಪರಸ್ಪರ ದ್ವೇಷ, ವೈಷಮ್ಯ, ಪೈಪೋಟಿ, ಘರ್ಷಣೆ ಮಾಮೂಲಿ ಯಾಗುತ್ತಿದೆ.

ಯುವಕನ ಕೊಲೆ : ಇಂಥ ದ್ವೇಷಕ್ಕೆ ಬಲಿಯಾಗಿದ್ದು, ಆನೇಕಲ್ ತಾಲ್ಲೂಕಿನ ಸಿಡಿ ಹೊಸಕೋಟೆ ಗ್ರಾಮದ ರೈತ ನಾರಾಯಣಪ್ಪ ಎಂಬುವರ ಮಗ ಚಂದ್ರಶೇಖರ್(ಚಿನ್ನಯ್ಯ) ಎಂಬ ಯುವಕ. ಜುಲೈ 22 ರಂದು ಭಾನುವಾರ ಸಂಜೆ 6.30 ರ ಸುಮಾರಿನಲ್ಲಿ ಈ ಯುವಕನನ್ನು ಇಂಥ ರಿಯಲ್ ಎಸ್ಟೇಟ್ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಆನೇಕಲ್‌ನ ಜೆಡಿ(ಎಸ್) ಕಾರ್ಯಕರ್ತರೆಂದು ಹೇಳುವ ಯುವಕರ ಗುಂಪೊಂದು ಮಾರಕಾಸ್ತ್ರಗಳಿಂದ ಅಟ್ಟಿಸಿಕೊಂಡು ಹೋಗಿ ಆನೇಕಲ್‌ನಲ್ಲಿ ಕೊಲೆಮಾಡಿದ್ದಾರೆ. ಹಾಡುಹಗಲೇ ರಾಜಾರೋಷವಾಗಿ ಕೊಲೆ ಮಾಡಿದ್ದಾರೆ ಅಂದರೆ ಪೋಲೀಸ್ ವ್ಯವಸ್ಥೆ ಯಾವ ರೀತಿ ಕೆಲಸ ಮಾಡುತ್ತಿದೆ ಅಂಥ ತಿಳಿಯಬಹುದಾಗಿದೆ.

ಇತ್ತೀಚಿನ ದಿನಗಳಲ್ಲಿ ಜೆಡಿ(ಎಸ್) ರಿಯಲ್ ಎಸ್ಟೇಟ್ ವ್ಯಾಪಾರದಲ್ಲಿ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಬಿಜೆಪಿ ಜೊತೆ ತಾಲ್ಲೂಕಿನಲ್ಲಿ ಪೈಪೋಟಿಗೆ ಇಳಿದಿರುವುದು ಬಿಜೆಪಿಗೆ ನುಂಗಲಾರದ ವಿಷಯವಾಗಿತ್ತು. ಜಾತಕ ಪಕ್ಷಿಯಂತೆ ಕಾಯುತ್ತಿದ್ದ ಬಿಜೆಪಿ ಚಿನ್ನಯ್ಯ ಎಂಬ ಯುವಕನ ಕೊಲೆಗೆ ರಾಜಕೀಯ ಬಣ್ಣ ಕಟ್ಟಿ ಮಾರನೇ ದಿನ ಆನೇಕಲ್ ಬಂದ್‌ಗೆ ಕರೆ ನೀಡಿತು. ಜೆಡಿ(ಎಸ್) ಕಾರ್ಯಕರ್ತರ ಮನೆಗಳಿಗೆ ಬೆಂಕಿ ಇಟ್ಟು, ಅಂಗಡಿಗಳನ್ನು ಜಖಂಗೊಳಿಸಲಾಗಿದೆ.

ರಾಜಕೀಯ ತಿರುವು: ರಾಜ್ಯದಲ್ಲಿ ಅಪವಿತ್ರ ಮೈತ್ರಿ ಮಾಡಿಕೊಂಡು ಅಧಿಕಾರಕ್ಕಾಗಿ ತಿಕ್ಕಾಟ ನಡೆಸುತ್ತಿರುವ ಬಿಜೆಪಿ, ಜೆಡಿ(ಎಸ್), ರಾಜಕೀಯ ತಾಲ್ಲೂಕಿಗೂ ವಿಸ್ತರಿಸಿದೆ. ಕೊಲೆ ನಂತರ ನಡೆದ ರಾಜಕೀಯ ಬೆಳವಣಿಗೆಗಳಿಂದ ಜೆಡಿ(ಎಸ್) ಆನೇಕಲ್ ತಾಲ್ಲೂಕು ಪಂಚಾಯಿತಿಗೆ ಬಿಜೆಪಿಗೆ ನೀಡಿದ್ದ ಬೆಂಬಲವನ್ನು ವಾಪಸ್ಸು ಪಡೆದು ಕಾಂಗ್ರೆಸ್‌ನೊಂದಿಗೆ ಸೇರಿ ಆಡಳಿತ ನಡೆಸಲು ಸ್ಥಳೀಯ ಮುಖಂಡತ್ವ ತೀಮಾನಿಸಿದೆ.

ಏನೇ ಬೆಳವಣಿಗೆ ಆದರೂ ಸೂಕ್ತ ತನಿಖೆ ನಡೆಸಿ ಅಪರಾಧಿಗಳಿಗೆ ತಕ್ಕ ಶಿಕ್ಷೆ ಆಗಬೇಕಿದೆ. ಮತ್ತು ಆ ಕುಟುಂಬಕ್ಕೆ ಪರಿಹಾರ ಸಿಗಬೇಕಿದೆ. ಇಂಥ ಪ್ರಕರಣಗಳು ಮರುಕಳಿಸದಂತೆ ಪೋಲೀಸರು ಎಚ್ಚರ ವಹಿಸಿ ಯಾರ ಒತ್ತಡಕ್ಕೂ ಮಣಿಯದೇ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕಿದೆ. ಜನತೆ ಧನದಾಹಿ ರಾಜಕಾರಣಿಗಳ ರಾಜಕಾರಣ ಮತ್ತು ಸ್ವಾರ್ಥಗಳಿಗೆ ಅಮಾಯಕ ಯುವಕರು ಬಲಿಯಾಗುವುದನ್ನು ತಪ್ಪಿಸಬೇಕಿದೆ.

ಆನೇಕಲ್ ಯುವಕನೊಬ್ಬನ ಕೊಲೆಯಾಗಿ ಹೋಯಿತು. ಅದಕ್ಕೆ ರಾಜಕೀಯ ಬಣ್ಣ ಬಂದು ಆನೇಕಲ್ ಬಂದ್, ಪ್ರತಿಭಟನೆಗಳೂ ನಡೆದವು. ಆದರೆ ವಾಸ್ತವಿಕವಾಗಿ ನಡೆದದ್ದೇನು? ಹೆಚ್ಚುತ್ತಿರುವ ರಿಯಲ್ ಎಸ್ಟೇಟ್ ದಂಧೆಯ ಹಾವಳಿಗೆ ಇನ್ನೆಷ್ಟು ಬಲಿಗಳು?

ಎಲ್ಲಾ ದಲಿತರೇ .... ಆದರೆ...

ಎಲ್ಲಾ ದಲಿತರೇ ಆದರೂ ಮೂರು ಜಾತಿಗಳಲ್ಲಿ ಮಳವಳ್ಳಿಯ ದಲಿತರು ಹಂಚಿ ಹೋಗಿದ್ದಾರೆ. ಸಿದ್ದಾರ್ಥನಗರ, ಕೀರ್ತಿನಗರದಲ್ಲಿ ಹರಿಜನರು. ಬಸವಲಿಂಗಪ್ಪ ನಗರದಲ್ಲಿ ಜಾಡಮಾಲಿಗಳು, ಅಶೋಕನಗರದಲ್ಲಿ ಚಮ್ಮಾರರು. ಕೀರ್ತಿನಗರದ ಹರಿಜನರಿಗಿಂತ ಸಿದ್ದಾರ್ಥನಗರದ ಹರಿಜನರು ಸ್ವಲ್ಪ ಸ್ಥಿತವಂತರು. ಸಿದ್ದಾರ್ಥನಗರದವರಿಗೆ ಅಲ್ಪಸ್ವಲ್ಪ ಭೂಮಿ ಇರುವುದೇ ಇದಕ್ಕೆ ಕಾರಣ. ಕೀರ್ತಿನಗರದ ಹೆಚ್ಚಿನವರು ಸಿದ್ದಾರ್ಥನಗರದ ದಲಿತ ರೈತರ ಹೊಲಗಳಲ್ಲಿ ದುಡಿಯುವ ಕೂಲಿಕಾರರು. ಹಾಗಾಗಿ ಕೂಲಿಕಾರರು ಯಾವ ಸ್ಥಿತಿಯಲ್ಲಿದ್ದಾರೋ ಕೀರ್ತಿನಗರದ ದಲಿತರದೂ ಅದೇ ಸ್ಥಿತಿ.

ಬಸವಲಿಂಗಪ್ಪ ನಗರದ ಜಾಡಮಾಲಿಗಳು ಕೊನೆ ಶ್ರೇಣಿಯ ದಲಿತರು, ಅವರಿಗಿಂತ ಮೇಲೆ ಅಶೋಕನಗರದ ಚಮ್ಮಾರರು ಮತ್ತೂ ಮೇಲೆ ಹರಿಜನರು. ಈ ಮೂವರ ನಡುವೆ ವೈವಾಹಿಕ ಸಂಬಂಧಗಳಿಲ್ಲ ಮಾತ್ರವಲ್ಲ ಅಸ್ಪೃಶ್ಯತೆಯೂ ಆಚರಣೆಯಲ್ಲಿದೆ. ಚಮ್ಮಾರರು ಜಾಡಮಾಲಿಗಳನ್ನು ಮನೆಗೆ ಸೇರಿಸುವುದಿಲ್ಲ. ತಾವು ಬಳಸುವ ಪಾತ್ರೆಗಳಲ್ಲಿ ಊಟವನ್ನೂ ಕೊಡುವುದಿಲ್ಲ. ಹಾಗೆಯೇ ಹರಿಜನರು ಚಮ್ಮಾರರನ್ನು, ಜಡಮಾಲಿಗಳನ್ನು ಮನೆಗೆ ಸೇರಿಸುವುದಿಲ್ಲ. ಊಟ ಕೊಡುವುದಿಲ್ಲ. ಕೆಳಗಿನವರ ಮೇಲೆ ಭಾರ ಹೇರುತ್ತಲೇ ಹೋಗುವ ಪಿರಮಿಡ್ ಇದು.

ಸಾಮಾನ್ಯ ಜ್ಞಾನಕ್ಕೊಂದು ಕಿರು ಪರೀಕ್ಷೆ

ಆರ್.ಕೆ.

'ಅತ್ಯಂತ ಸೂಕ್ತವಾದ ಜೋಡಿಪದ'ವನ್ನು ಗುರುತಿಸಿ ಹೊಂದಿಸಿ ಬರೆಯಿರಿ

ಓಂ ಶ್ರೀರಾಮ ನಮಃ

ದೈವ ಭಕ್ತಿ + ದೇಶಭಕ್ತಿ = ಸಂಘ ಪರಿವಾರ

ದೈವ ಭಕ್ತಿ, ದೇಶಭಕ್ತಿಗೆ ಸಂಬಂಧಿಸಿದ ಚಟುವಟಿಕೆ, ಪದಗುಚ್ಛಗಳನ್ನು ಹಾಗೂ ಹಲವು ದೈವ ಭಕ್ತರು ಹಾಗೂ ದೇಶ ಭಕ್ತರ ಹೆಸರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಪಟ್ಟಿಯಲ್ಲಿರುವವರು ಬಹುತೇಕ ಎಲ್ಲರೂ ಹಿಂದೂ ರಾಷ್ಟ್ರ ಪುನರುತ್ಥಾನ ಮಹಾ ಕೈಂಕರ್ಯದಲ್ಲಿ 'ಅಹೋರಾತ್ರಿ' ಶ್ರಮಿಸುತ್ತಿರುವವರೇ ಆಗಿದ್ದಾರೆ. ಕೆಲವು ಇತರೆ ಹೆಸರುಗಳಿದ್ದರೂ ಸಹ ಇವರು ದೈ.ಭ. ದೇ.ಭ ರೊಂದಿಗೆ ಕೈಜೋಡಿಸಿರುವು ದರಿಂದಾಗಿ ಹೂವಿನ ಜೊತೆ ನಾರು ಸ್ವರ್ಗಕ್ಕೆ ಸೇರುವಂತೆ ಅವರುಗಳೂ ಸಹ ದೈ.ಭ. ದೇ.ಭ.ರುಗಳೇ ಆಗಿ ಬಿಡುತ್ತಾರೆ.

ಈ ಕೆಳಗೆ ಎರಡು ಪಟ್ಟಿಯನ್ನು ನೀಡಲಾಗಿದೆ. ಎಡಗಡೆ ಪಟ್ಟಿ 'ಎ' ಯಲ್ಲಿರುವ ಪದಗಳಿಗೆ ಬಲಭಾಗದಲ್ಲಿರುವ ಪಟ್ಟಿ 'ಬಿ' ಯಲ್ಲಿರುವ ಪದಗಳಲ್ಲಿ ಸೂಕ್ತವಾಗ್ಗಿರುವುದನ್ನು ಹೊಂದಿಸಿಬರೆಯಿರಿ.

ಎಚ್ಚರಿಕೆ : ಎಡಭಾಗದಲ್ಲಿರುವ ಹಲವು ಪದಗಳಲ್ಲಿ ಆ ಒಂದೊಂದು ಪದಕ್ಕೂ ಬಲಭಾಗದಲ್ಲಿರುವ ಹಲವು ಪದಗಳು ಹೊಂದಾಣಿಕೆಯಾಗುವ ಸಂಭವ ಇರುವುದರಿಂದ ನೀವು ಅವುಗಳಲ್ಲೇ ಅತ್ಯಂತ ಹೆಚ್ಚು ಹೊಂದಾಣಿಕೆಯಾಗುವ ಜೋಡಿ ಪದವನ್ನು ಆಯ್ಕೆ ಮಾಡಬೇಕಾಗುತ್ತದೆ.

ಸೂಚನೆ : ಸರಿ ಉತ್ತರಗಳು ಯಾವುವು ಎಂಬ ಉತ್ತರಗಳನ್ನು ಕೊನೆಯಲ್ಲಿ ನೀಡಲಾಗಿಲ್ಲ. ಆದರೆ ಅತ್ಯಂತ ಸೂಕ್ತ ಜೋಡಿ ಪದಗಳು ಯಾವುವು ಎಂಬುದನ್ನು ಪತ್ತೆ ಹಚ್ಚಲು ಒಂದು ಸಣ್ಣ ಸುಳಿವನ್ನು ಇಲ್ಲಿ ನೀಡಲಾಗಿದೆ. ಗಮನಿಸತಕ್ಕದ್ದು.

ಸುಳಿವು : ನೀವು ಎ ಪಟ್ಟಿಯ ಯಾವುದಾದರೂ ಪದದ ಪಕ್ಕ 'ಬಿ' ಪಟ್ಟಿಯ ಯಾವುದೇ ಪದವನ್ನು ಇಟ್ಟಾಗ ಆ ಎರಡು ಪದಗಳ ನಡುವೆ ಒಂದು ಬಗೆಯ 'ಅಯಸ್ಕಾಂತೀಯ ಸೆಳೆತ' ಇರುವುದು. ನಿಮ್ಮ ಗಮನಕ್ಕೆ ಬಂತೆಂದರೆ ಅದೇ 'ಅತ್ಯಂತ ಸೂಕ್ತ ಜೋಡಿ ಪದ' ಎಂದು ತೀರ್ಮಾನಿಸತಕ್ಕದ್ದು.

ವಿಶೇಷ ಮನವಿ : ಅತ್ಯಂತ ಸೂಕ್ತವಾದ ಜೋಡಿ ಪದವನ್ನು ಹೊಂದಿಸುವಾಗ ಆಗಬಹುದಾದ ಅನರ್ಥ (ಅನ್ಯ ಅರ್ಥ), ಅಪಾರ್ಥ (ಅಪಾರ ಅರ್ಥ)ಗಳಿಗೆ ನಾವು ಯಾವ ರೀತಿಯಲ್ಲೂ ಹೊಣೆಯಲ್ಲ.

ಹೊಂದಿಸಿ ಬರೆಯಿರಿ:

ಪಟ್ಟಿ ಎ	ಪಟ್ಟಿ ಬಿ
1. ಕಟ್ಟಾ ಸುಬ್ರಹ್ಮಣ್ಯನಾಯ್ದು-	ಶೋಭಾ ಕರಾಂದ್ಲಾಜೆ
2. ಪ್ರವೀಣ್'ಬಾಯಿ' ತೊಗಾಡಿಯಾ-	ಶ್ರೀಗಂಧ ಸಾಗಣೆ ವಿಸ್ಮಯ
3. ಬಸವರಾಜಪಿಟೀಲ ಯತ್ನಾಳ್-	ಬೊಂ'ಬಾಯಿ'
4. ಡುಮಾ ಭಾರತಿ -	ಬೇನಾಮಿ ಬಂಡವಾಳ ಹೂಡಿಕೆ
5. ರೆಡಿಯೂರಪ್ಪ.ಬಿ.ಎಸ್. -	ಬಂಡಾಯ
6. ರೇಣುಕಾಚೌರ್ಯ-	ಗೋವಿಂದಾಚೌರ್ಯ
7. ಹಣಂತಕುಮಾರ-	ತ್ರಿಶೂಲ ಹಂಚಿಕೆ
8. ಜಗದೀಶ್‌ಶೆಟ್ಟರ-	ನರಸಮ್ಮ ಉರುಫ್ ಜಯಲಕ್ಷ್ಮಿ
9. ಬಸವರಾಜಪಾಟೀಲ ಸೇಡಂ-	ದಲಿತರಿಗೆ ಭೂಮಿ ನೀಡಿದರು (ವಿವರಣೆ ಓದಿಕೊಳ್ಳಿ)
10. ವೆಂಕಯ್ಯ ನಾಯ್ದು -	ರಾಧಿಕಾ
11. 'ಸೀಟಿ' ರವಿ -	'ಟೋಪಿ' ವಾಲಾ
12. ಯಚ್ಚಿ ಕುಮಾರಸಾಮಿ -	ಆತ್ಮಹತ್ಯೆಗಳು,
	ರಸಿಕ ಶಿಖಾಮಣಿ, ಭಿನ್ನಮತ,
	ಸುಳ್ಳು ವಿಳಾಸ

- ಕೆಲವು ಹೆಸರುಗಳಲ್ಲಿ ಆಗಿರುವ ಮುದ್ರಣ ದೋಷಗಳನ್ನು ಸಹಿಸಿಕೊಳ್ಳಲು ಕೋರಲಾಗಿದೆ. .
- 'ದಲಿತರಿಗೆ ಭೂಮಿ ನೀಡಿದರು' ಎಂಬುದನ್ನು 'ದಲಿತರಿಂದ ಕಿತ್ತುಕೊಳ್ಳಲಾಗಿದ್ದ ಭೂಮಿಯನ್ನು ಈ ವಿಚಾರ ಬಯಲಾಗಿ ಗದ್ದಲವಾದದ್ದರಿಂದ ವಾಪಸ್ ದಲಿತರಿಗೆ ಭೂಮಿ ನೀಡಿದರು' ಎಂದು ಓದಿಕೊಳ್ಳತಕ್ಕದ್ದು. ಸ್ಥಳಾಭಾವದಿಂದ ಚಿಕ್ಕದಾಗಿ ನೀಡಲಾಗಿದೆ.
- ನಮ್ಮ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಶ್ರೀಗಂಧ ಹೆಚ್ಚು ಬೆಳೆಯುತ್ತದೆ.

ಬಳ್ಳಾರಿ

ಗಡಗಡ ನಡುಗುತ್ತಿರುವ ಜಂಬುನಾಥ

ಬಳ್ಳಾರಿ ಗಣಿಗಾರಿಕೆಯ ಅರ್ಭಟಕ್ಕೆ ಇಲ್ಲಿ ಭಗವಂತನೇ ನಡುಗಬೇಕಾಗಿ ಬಂದಿದೆ

ಊರ ಪುರಾತನ ದೇವರು ಜಂಬುನಾಥ ಸ್ವಾಮಿ. ಎಲ್ಲರನ್ನೂ ರಕ್ಷಿಸಬೇಕಾದ ಮಹಾತ್ಮ ಜಾಗತೀಕರಣದ ಧಾಳಿಗೆ ಸಿಕ್ಕು ಗಣಿಸ್ಫೋಟದಿಂದ ಗಡ ಗಡ ನಡುಗುತ್ತಾ 'ನನ್ನ ರಕ್ಷಿಸಿ' ಎಂದೇ ಮನವಿ ಮಾಡಿಕೊಳ್ಳಲಾರಂಭಿಸಿದ್ದಾನೆ.

ಇದು ನಡೆದಿರುವುದು ಗಣಿ ಧೂಳಿಗೆ, ಧಾಳಿಗೆ ಸಿಕ್ಕು ನಲುಗಿರುವ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಇತಿಹಾಸ ಪ್ರಸಿದ್ಧ ಜಂಬುನಾಥ ಬೆಟ್ಟದಲ್ಲಿರುವ ಜಂಬುನಾಥ ಸ್ವಾಮಿ ದೇವರ ಕಥೆ, ವ್ಯಥೆ.

ಜಂಬುನಾಥ ಬೆಟ್ಟದಲ್ಲಿ 12ಕ್ಕೂ ಹೆಚ್ಚು ಗಣಿಗಾರಿಕೆ ಕಂಪನಿಗಳು ಹಗಲಿರಳು ಗುಡ್ಡಬಗೆದು ಕಬ್ಬಿಣದ ಖನಿಜವನ್ನು ಎತ್ತಿ ಹೊತ್ತುಯ್ಯುತ್ತಿವೆ. ಮಧ್ಯಾಹ್ನ 1-30ಕ್ಕೆ ಗಣಿಸ್ಫೋಟ ನಡೆಸುತ್ತಿವೆ. ಈ ಗಣಿಸ್ಫೋಟಕ್ಕೆ ನಮ್ಮ ಜಂಬುನಾಥ ದೇವರು ಪ್ರತಿದಿನ ಗಡ ಗಡ ನಡುಗುತ್ತಾ ಇದರಿಂದ ನನಗೆ ಎಂದು ಮುಕ್ತಿ ಎಂದು ಕೇಳುತ್ತಿದ್ದಾನೆ. ಗಣಿಧಣಿಗಳು ಖಾಸಗೀಕರಣ ಎನ್ನುತ್ತವೆ. ಕಂಪನಿಗಳು ಉದಾರೀಕರಣ ಎನ್ನುತ್ತವೆ. ರಫ್ತು ವ್ಯವಹಾರ ನಡೆಸುವ ಕಂಪನಿಗಳು ಜಾಗತೀಕರಣ ಎನ್ನುತ್ತಿವೆ. ಜಾಗತೀಕರಣ ವಿರುದ್ಧ ಹಿಡಿಶಾಪ ಹಾಕುವವರಲ್ಲಿ ಈ ಜಂಬುನಾಥ ದೇವರು ಸೇರಿಕೊಳ್ಳುವುದು ಬಿಟ್ಟು ಅನ್ಯಮಾರ್ಗವಿಲ್ಲ.

ದೇವಸ್ಥಾನದ ಸಮೀಪವೇ ಆರ್.ಪಿ.ಮೈನ್ಸ್ ಕಂಪನಿ ಗಣಿಗಾರಿಕೆ ನಡೆಸುತ್ತಿದೆ. ರಾಜ್ಯ ಪುರಾತತ್ವ ಇಲಾಖೆಯ ಅಧೀನಕ್ಕೊಳಪಟ್ಟ ಈ ದೇವಸ್ಥಾನದ ಸಮೀಪ ಯಾವುದೇ ಗಣಿಗಾರಿಕೆ ನಡೆಸುವಂತಿಲ್ಲ ಎಂಬ ಕಾಯಿದೆ ಇದೆ. ಈ ಕಾಯಿದೆಯಂತೆ 200 ಮೀಟರ್ ದೂರದಲ್ಲಿ ಗಣಿಗಾರಿಕೆ ನಡೆಸುತ್ತಿದ್ದೇವೆ ಎಂದು ಗಣಿ ಕಂಪನಿ ಹೇಳುತ್ತಿದೆ. ಈ 200 ಮೀಟರ್ ಅಳೆಯುವ ಮಾನದಂಡ ಯಾವುದು? ಎನ್ನುವುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ. ದೇವಸ್ಥಾನದ ಪಕ್ಕದಲ್ಲಿಯೇ ಆಕಾಶಕ್ಕೆ ಏಣಿ ಇಟ್ಟಂತೆ ಗುಡ್ಡ ಇರುವಾಗ ದೇವಸ್ಥಾನದಿಂದ ಗುಡ್ಡ ಏರಿಸಿ ಅಳತೆ ಮಾಡಿದರೆ ಕೇವಲ 10 ಮೀಟರ್ ದೂರದಲ್ಲಿ 200 ಮೀಟರ್ಸ್ ಆಗುತ್ತದೆ. ಎಲ್ಲಾ ಸರ್ವೇಗಳು ಗಣಿಧಣಿಗಳ ಸೇವೆ ಮಾಡಲು ಇದನ್ನೆ ಮಾಡಿವೆ.

ಗಣಿಸ್ಫೋಟದಿಂದ ಜಂಬುನಾಥ ಸ್ವಾಮಿ



ದೇವಸ್ಥಾನ ಶಿಥಿಲವಾಗುತ್ತಿದೆ ಎಂದು ದೂರು ಬಂದಿವೆ ಎಂದು ಇತ್ತೀಚಿಗೆ ರಾಜ್ಯ ಪುರಾತತ್ವ ಇಲಾಖೆ ಉಪ ನಿರ್ದೇಶಕರು, ಹೊಸಪೇಟೆ ತಹಶಿಲ್ದಾರ್ ದೇವಸ್ಥಾನಕ್ಕೆ ಭೇಟಿ ನೀಡಿ ವರದಿ ಸಲ್ಲಿಸಿದ್ದಾರೆ. ಈ ದೂರು ನೀಡಿದವರು ಯಾರು ಎಂದು ಪತ್ತೆ ಹಚ್ಚಿದರೆ 'ವಿಶ್ವಹಿಂದೂ ಪರಿಷತ್' ಬಳ್ಳಾರಿ ಜಿಲ್ಲಾ ಶಾಖೆ ಈ ದೂರು ನೀಡಿ ಆರ್.ಪಿ.ಮೈನ್ಸ್ ಗಣಿಗಾರಿಕೆ ನಿಲ್ಲಿಸಬೇಕೆಂದು ಒತ್ತಾಯಿಸಿದೆ.

ದೇಶದಲ್ಲಿ ಹಿಂದೂದೇವಾಲಯಗಳ ರಕ್ಷಣೆಯೇ ನಮ್ಮಗುರಿ ಎಂದು ಸಾರುವ ವಿಶ್ವಹಿಂದೂ ಪರಿಷತ್ ಅಲ್ಲದೇ ಬೇರೆ ಯಾವ ಸಂಘಟನೆಗಳು ಇಂತಹ ಕೆಲಸ ಮಾಡಲು ಸಾಧ್ಯ? ಎಂದು ನೀವು ಭಾವಿಸುವಂತಿಲ್ಲ. ಇಲ್ಲೂ ದೇವರ ಹೆಸರು, ನಮ್ಮ ಪಿಸುರು ಎನ್ನುವದೇ ಆಗಿದೆ.

ಕೋಜಾ ಸರ್ಕಾರದಲ್ಲಿ ಮುಜರಾಯಿ ಇಲಾಖೆ ಸಚಿವರಾಗಿರುವ ನಾಗರಾಜ ಶೆಟ್ಟಿ ಇವರ ಒಡೆತನದಲ್ಲಿರುವ ಕಬ್ಬಿಣ ಖನಿಜ ರಫ್ತು ವಹಿವಾಟು ನಡೆಸುವ ಸಂಸ್ಥೆಯೊಂದು ಹೊಸಪೇಟೆಯಲ್ಲಿದೆ.

ಈ ಸಂಸ್ಥೆಯು 200 ಟನ್ ಕಬ್ಬಿಣದ ಅದಿರು ಮಣ್ಣನ್ನು ಟನ್ ಒಂದಕ್ಕೆ 500 ರೂ. ಕೊಡಬೇಕೆಂದು ಆರ್.ಪಿ.ಮೈನ್ಸ್‌ಗೆ ಗಂಟು ಬಿತ್ತು. 2000ರೂ. ಟನ್ ಇರುವ ಅದಿರು ಮಣ್ಣನ್ನು ಈ ಮೂರುಕಾಸಿನ ರೇಟಿಗೆ ಯಾಕೆ ಕೊಡಬೇಕೆಂದು ಅವರು ತಕರಾರು ತೆಗೆದಿದ್ದಾರೆ. ಆಗ ಪ್ರತ್ಯಕ್ಷರಾದವರೇ ಈ ಶೆಟ್ಟರು. ದೂರವಾಣಿಯ ಮೂಲಕ ಆರ್.ಪಿ. ಮೈನ್ಸ್‌ಗೆ ಬೆದರಿಕೆ ಹಾಕಿದ ಶೆಟ್ಟರು, ಸಚಿವರೆಂದರೆ ಏನೆಂದು ಕೊಂಡಿದ್ದೀರಿ, ನಮ್ಮ ಪವರ್ ತೋರಿಸಲೇನು? ಎಂದು ಕೇಳಿದ್ದಾರೆ. ಅದಕ್ಕೂ ಆರ್.ಪಿ.ಮೈನ್ಸ್ ಕಿವಿಗೊಡದಾಗ ತಮ್ಮ ಲೂಟಿಕೂರ ಸೈನ್ಯ ವಿಶ್ವಹಿಂದೂ ಪರಿಷತ್‌ಗೆ ದೂರು ಸಲ್ಲಿಸಲು ಹೇಳಿದ್ದಾರೆ. ಈ ಪರಿಷತ್ ತಹಶಿಲ್ದಾರ್ ಅವರಿಗಾಗಲಿ, ಅಥವಾ ರಾಜ್ಯ ಪುರಾತತ್ವ ಇಲಾಖೆಗಾಗಲಿ ದೂರು ಸಲ್ಲಿಸಿಲ್ಲ. ಮುಜರಾಯಿ ಸಚಿವರಿಗೆ ದೂರು ಸಲ್ಲಿಸಿದ್ದಾರೆ. ಸಚಿವರು ತಕ್ಷಣವೇ ಕಾರ್ಯಪ್ರವೃತ್ತರಾಗಿ ವರದಿ ನೀಡುವಂತೆ ಉಳಿದ ಇಲಾಖೆಗೆ ಆದೇಶ ಹೊರಡಿಸಿದ್ದಾರೆ. ಆಹಾ ಎಂತಹ ದೈವಭಕ್ತಿ? ಎಂತಹ ಇತಿಹಾಸ ಪ್ರಜ್ಞೆ?

ಜಂಬುನಾಥ ದೇವರಿಗೆ ಈಗ ಇದು ಕೂಡಾ ಅರ್ಥವಾಗಿದೆ. ಖೋಟಾ ಭಕ್ತರನ್ನು ನಂಬಿ ನಾನು ಕೆಟ್ಟೆ. ಈ ಖೋಟಾ ಭಕ್ತರು ಸಹ ಜಾಗತೀಕರಣದ ಬೆಂಬಲಿಗರು. ಇವರ ವಿರುದ್ಧ ಸಹ ಹೋರಾಟ ನಡೆಸಬೇಕಿದೆ ಎಂದು ಜಂಬುನಾಥ ದೇವರು ಗಣಿಸ್ಫೋಟದಿಂದ ಗಡ ಗಡ ನಡುಗುತ್ತಾ ಪಿಸುಗುಡುತ್ತಿರುವುದು ಜಂಬುನಾಥ ದೇವಸ್ಥಾನದ ಅಸುಪಾಸಿನಲ್ಲಿ ಓಡಾಡಿದರೆ ಕೇಳಿಸಿದರೂ ಕೇಳಿಸಬಹುದು.

○ ವಸಂತ

ವಿರಾಜಪೇಟೆ:

'ಮುಸ್ಲಿಂ ಸಮುದಾಯ ಕಡೆಗಣಿಸಲ್ಪಟ್ಟಿದೆ' ಒಂದು ಗೋಷ್ಠಿ

ಮುಸ್ಲಿಂ ಸಮುದಾಯ ಅಪಾಯಕಾರಿ ರೀತಿಯಲ್ಲಿ ಕಡೆಗಣಿಸಲ್ಪಟ್ಟಿದೆ ಎಂದು ಸಾಚಾರ್ ಸಮಿತಿಯ ವರದಿ ದೃಢಪಡಿಸಿದ ಹಿನ್ನಲೆಯಲ್ಲಿ ಅದರಲ್ಲಿ ಹೇಳಿರುವ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಹಿನ್ನೆಲೆಯಲ್ಲಿ ಕೊಡಗಿನ ವಿರಾಜಪೇಟೆಯಲ್ಲಿಯೂ ಸಿಪಿಐ(ಎಂ) ಪಕ್ಷದ ಸ್ಥಳೀಯ ಶಾಖಾ ವತಿಯಿಂದ ಒಂದು ಗೋಷ್ಠಿಯನ್ನು ಆಯೋಜಿಸಲಾಗಿತ್ತು. ವಿರಾಜಪೇಟೆಯ ಬ್ರೈಟ್ ಶಾಲೆಯಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಪಕ್ಷದ ಜಿಲ್ಲಾ ಸಂಘಟನಾ ಸಮಿತಿಯ ಕಾರ್ಯದರ್ಶಿ ಕಾಂ:ಪೀಟರ್ ಲ್ಹೋಬೋರವರು ವಹಿಸಿದ್ದರು.

ಪಕ್ಷದ ವಿರಾಜಪೇಟೆ ಶಾಖೆಯ ಕಾರ್ಯದರ್ಶಿ ದುರ್ಗಾಪ್ರಸಾದ್‌ರು ಪ್ರಾಸ್ತಾವಿಕವಾಗಿ ಮಾತನಾಡಿದರು. ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿಯ ಸದಸ್ಯರಲ್ಲಿ ಒಬ್ಬರಾದ ಕಾಂ: ಎಸ್.ವೈ.ಗುರುಶಾಂತ್‌ರವರು ವಿಷಯ ಮಂಡಿಸಿದರು.

ವಿಷಯದ ಮೇಲೆ ಸಿಕಂದರ್ ಅಹ್ಮದ್, ಎಸ್.ಕೆ.ಜೆ.ಎಂ.ಸಿ.ಸಿ.ಯ ಜಿಲ್ಲಾ ಕಾರ್ಯದರ್ಶಿಗಳಾದ ಹಾಜಿ.ಎಂ. ಅಬ್ದುಲ್ ರೆಹಮಾನ್ ಮತ್ತು ಬ್ರೈಟ್ ಶಾಲೆಯ ಕಾರ್ಯದರ್ಶಿಗಳಾದ ಶ್ರೀ ಪಿ.ಕೆ.ಅಬ್ದುಲ್ ರೆಹಮಾನ್‌ರವರು ಮಾತನಾಡಿದರು. ಮಂಡಿತ ವಿಷಯದ ಮೇಲ್ ವಿಸ್ತೃತವಾದ ಚರ್ಚೆ ನಡೆಯಿತು.

'ಐವತ್ತು, ಅರವತ್ತು ಸಾವಿರ ಕೊಟ್ರೆ ಅಂಗನವಾಡಿ ನೌಕ್ರಿ ಸಿಗತ್ತೈತಿ'

ಐವತ್ತು-ಅರವತ್ತು ಸಾವಿರ ಕೊಡ್ರಿ ನೌಕ್ರ ಕೊಡಸ್ತಿನಿ ಅಂತ ಹೇಳಿದ್ರು. ಅಷ್ಟೊಂದು ರೊಕ್ಕ ಎಲ್ಲಿಂದ ತರೋದ್ರಿ!? ರೊಕ್ಕ ಕೊಡಲಿಲ್ಲಾ ನಮಗ ನೌಕ್ರ ಸಿಗ್ಲಿಲ್ಲ ಸರ್, ಎಂದು ಈ ಭ್ರಷ್ಟ ವ್ಯವಸ್ಥೆಯಲ್ಲಿ ಬಡವರಿಗೆ ಹಣ ಇಲ್ಲದವರಿಗೆ ನೌಕರಿ ಕನಸಿನ ಮಾತಾಗಿದೆ. ನೌಕರಿಗಾಗಿ ನೂರಾರು ರೂಪಾಯಿ ಖರ್ಚು ಮಾಡಿ ಅರ್ಜಿ ಹಾಕೋದು ಬಿಡಬೇಕು. ಆ ನೂರಾರು ರೂಪಾಯಿ ಆದ್ರೂ ಉಳಿತ್ಯತ" ಎಂದು ಜಾಲಹಳ್ಳಿಗೆ ಸಮೀಪದ ಮುದುಗೋಟ ಗ್ರಾಮದ ಲಕ್ಷ್ಮಿ ಪಾಟೀಲ್ ಯವರು ಜನಶಕ್ತಿ ಮುಂದೆ ತಮ್ಮ ಅಳಲು ತೋಡಿಕೊಂಡಾಗ ಅವರ ಮುಖದಲ್ಲಿ ಅಸಹಾಯಕತೆಯ ಛಾಯೆ ಎದ್ದು ಕಾಣುತ್ತಿತ್ತು.

ನಾನು ಅಂಗವಿಕಲೆ. ಹೊಲ್ದ ಕೆಲ್ಸ ಮಾಡಲು ಆಗುವುದಿಲ್ಲಾ ಮಕ್ಕಳಿಗೆ ನಾಲ್ಕ ಅಕ್ಷರ ಕಲಿಸಿ ಜೀವನ ಸಾಗಿಸೋಣ ಎಂದು ಅರ್ಜಿ ಹಾಕಿದಿನ್ರಿ. ಆದರೆ ದುಡ್ಡಿನ ಮುಂದೆ ನೌಕ್ರಿ. ಜೀವನದ ಎಲ್ಲಾ ನುಚ್ಚುನೂರು ಆಯಿತು ಎಂದು ಅಂಗವಿಕಲೆ ಭಾರತಿ ಹೇಳುವಾಗ ಅವಳ ಕಣ್ಣೀರು ಭೂ ಒಡಲ ಹಾರುತ್ತಿತ್ತು.

ಇದು ಒಬ್ಬ ಲಕ್ಷ್ಮಿಮುದುಗೋಟ ಒಬ್ಬ ಭಾರತಿ ಕತೆಯಲ್ಲಾ ಇತ್ತೀಚಿನ ನಡೆದ ಅಂಗನವಾಡಿ ಕಾರ್ಯಕತೆಯರ ನೇಮಕಾತಿಗೆ ಅರ್ಜಿ ಸಲ್ಲಿಸಿದ ನೇಮಕಕ್ಕೆ ಅರ್ಹತೆ ಇದ್ದು ನೇಮಕವಾಗದೆ ಇರುವ ಸಾವಿರಾರು ಅಕಾಂಕ್ಷಿಗಳ ಕತೆ.

ಕರ್ನಾಟಕ ಅಭಿವೃದ್ಧಿ ರಂಗದ (ಕೆ.ಡಿ.ರಂಗ) ಹೆಸರಿನ ಅನೈತಿಕ ಮೈತ್ರಿಯ ಜೆಡಿ(ಎಸ್) ಹಾಗೂ ಬಿಜೆಪಿ ರಾಜ್ಯ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿತು. ರಾಯಚೂರು ಜಿಲ್ಲೆಯಲ್ಲಿ ನೂರಾರು ಹುದ್ದೆಗಳಿಗೆ ಸಾವಿರಾರು ಜನ ಅರ್ಜಿ ಹಾಕಿದ್ದರು. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ ಗಂಡನಿಂದ ತಿರಸ್ಕಾರಕ್ಕೊಳಗಾದ ಯುವತಿಯರು, ಅಂಗವಿಕಲೆ ಯುವತಿಯರು, ವಿಧವೆಯರು ಸೇರಿದಂತೆ ಸಾವಿರಾರು ಜನ ಯುವತಿಯರು ಅರ್ಜಿ ಸಲ್ಲಿಸಿದ್ದರು.

ಆದರೆ ಭ್ರಷ್ಟಾಚಾರ ತಾಂಡವ ವಾಡುತ್ತಿರುವ ಈ ವ್ಯವಸ್ಥೆಯಲ್ಲಿ ಅರ್ಹತೆ ಇದ್ದರೂ ನೌಕರಿ ಸಿಗೋದಿಲ್ಲಾ ಎಂದು ಸಾಬೀತಾಯಿತು. ಹಣ ರಾಜಕಾರಣಿಗಳ, ಅಧಿಕಾರಿಗಳ ಅರ್ಶೀವಾದವು ಬೇಕು ಎಂಬ ಅಂಶ ಜಗಜ್ಜಾಹೀರಾಯ್ತು.

ನೇಮಕಾತಿ ಸಮಿತಿ ಎಂಬ ಹಣ ವಸೂಲಿ ಮಾಡುವ ಬ್ರೋಕರ್ ಸಮಿತಿ

ಅಂಗನವಾಡಿ ಕಾರ್ಯಕರ್ತೆಯರ ನೇಮಕ ಮಾಡಿಕೊಳ್ಳಲು ಆಯಾ ತಾಲ್ಲೂಕಿನ ಶಾಸಕರ ಹಾಗೂ ಹಿಂಬಾಲಕರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ನೇಮಕಾತಿ ಮಾಡಿಕೊಳ್ಳುವ ಸಂಪೂರ್ಣ ಅಧಿಕಾರ ನೀಡಲಾಗಿತ್ತು. ಆದರೆ ಈ ಸಮಿತಿ ಅರ್ಹತೆಯ ಆಧಾರದಲ್ಲಿ ಸರ್ಕಾರ ಹೊರಡಿಸಿದ ನೇಮಕಾತಿ ನಿಯಮಗಳ ಪ್ರಕಾರ ಕಾರ್ಯಕರ್ತೆಯರ ನೇಮಕಾತಿ ಮಾಡಿಕೊಳ್ಳುವ ಬದಲಾಗಿ ಒಂದೊಂದು ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಯನ್ನು ಹರಾಜು ಇಟ್ಟು ಹಣ ವಸೂಲಿ ಮಾಡಿತು. ನೇಮಕಾತಿ ಸಮಿತಿ ಬದಲು ಹಣ ವಸೂಲಿ ಮಾಡುವ ಬ್ರೋಕರ್ ಸಮಿತಿ ಎನ್ನುವ ರೀತಿಯಲ್ಲಿ ಕೆಲಸ ಮಾಡಿದ್ದು ಈ ಭ್ರಷ್ಟ ವ್ಯವಸ್ಥೆಗೆ ಹಿಡಿದ ಕನ್ನಡಿಯಾಯಿತು.

ಗಾಳಿಗೆ ತೂರಿದ ನಿಯಮಗಳು

ಅಂಗನವಾಡಿ ಕಾರ್ಯಕರ್ತೆಯರ ನೇಮಕ ಮಾಡಿಕೊಳ್ಳಲು ಸರ್ಕಾರ ಆದೇಶವೊಂದನ್ನು ಹೊರಡಿಸಿ ಅಂಗನವಾಡಿ ಕೇಂದ್ರ ಬರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಸ್ಥಳೀಯರಿಗೆ, ಅಂಗವಿಕಲೆಯರಿಗೆ, ವಿಧವೆಯರಿಗೆ ಮೊದಲ ಆದ್ಯತೆ ನೀಡಬೇಕು ಎಂದು ತಿಳಿಸಲಾಗಿತ್ತು. ಆದರೆ ನೇಮಕಾತಿ ಸಮಿತಿ ಸರ್ಕಾರದ ನಿಯಮಗಳನ್ನು ಗಾಳಿಗೆ ತೂರಿ ಮನಬಂದಂತೆ ಯಾರೂ ಹೆಚ್ಚು ಹಣ ಕೊಡುತ್ತಾರೆಯೋ ಅವರನ್ನು ಆಯ್ಕೆ ಮಾಡಿದೆ. ಅಂಗವಿಕಲರು ಇದ್ದರೂ ಅಲ್ಲಿ ಬೇರೆಯವರು ನೇಮಕವಾಗಿದ್ದಾರೆ. ಸ್ಥಳೀಯರು ಇದ್ದರೂ ಬೇರೆ ಪಂಚಾಯತ್ ವ್ಯಾಪ್ತಿಯವರನ್ನು ನೇಮಕ ಮಾಡಿದ್ದಾರೆ. ಸರ್ಕಾರದ ಆದೇಶಗಳು, ನಿಯಮಗಳು ಕಾಗದದಲ್ಲಿ ಮಾತ್ರ ಇದ್ದು ಅವುಗಳಿಗೆ ಈ ಇಲ್ಲಿ ಕವಡೆ ಕಾಸಿನ ಕಿಮ್ಮತ್ತು ಇಲ್ಲಾ ಎನ್ನುವಂತಾಗಿದೆ.

'ಪೈಪೋಟಿ'

ಕೆಲವೇ ವರ್ಷಗಳ ಕೆಳಗೆ ಅಂಗನವಾಡಿ ಕಾರ್ಯಕರ್ತೆಯರು ಎಂದು ತಿರಸ್ಕಾರದ ಭಾವನೆಯಿಂದ ನೋಡುವ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ ಅರ್ಜಿ ಕರೆದರೆ ಯಾರೂ ಅರ್ಜಿ ಹಾಕದೆ ಇರುವ ಪರಿಸ್ಥಿತಿ ಒಂದಿತ್ತು. ಆದರೆ ಕೆಲವೇ ವರ್ಷಗಳು ಕಳೆಯುವುದರಲ್ಲಿ ನಮ್ಮನ್ನಾಳುವ ಸರ್ಕಾರಗಳು ಹಾಗೂ ಅವುಗಳು ಜಾರಿಗೆ ತರುತ್ತಿರುವ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳ ಪರಿಣಾಮ ನಿರುದ್ಯೋಗದ ಸಮಸ್ಯೆ ತಾಂಡವಾಡುತ್ತಿರುವ ಹಿನ್ನಲೆಯಲ್ಲಿ ಎಂಥಾ ಕಡಿಮೆ ಸಂಬಳದ ಕೆಲಸಕ್ಕೂ ಸ್ಪರ್ಧೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವುದಕ್ಕೆ ಒಂದು ತಾಜಾ ಉದಾಹರಣೆ. ಈ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ ಸಲ್ಲಿಸಿದ ಅರ್ಜಿ ಸಂಖ್ಯೆ.

'ಹೋರಾಟವೊಂದೇ ಮಾರ್ಗ'

ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿಯಲ್ಲಿ ಆದ ಅವ್ಯವಹಾರ ತಾರತಮ್ಯಗಳನ್ನು ಜನರ ಮುಂದೆ ತೆರೆದಿಡಬೇಕು, ಜೆಡಿ(ಎಸ್)-ಬಿಜೆಪಿ ಪಕ್ಷಗಳು ಸಮಯ ಸಾಧಕ, ಅಧಿಕಾರದ ಲಾಲಸೆಯಿಂದ ಎಂಥಾ ನೀಚ ಕೆಲಸಕ್ಕೂ ಇಳಿಯುತ್ತದೆ ಎನ್ನುವ ರಾಜ್ಯದ ಜನತೆಗೆ ತಿಳಿಸುವದು ಅವಶ್ಯವಿದೆ. ನೇಮಕಾತಿಯಲ್ಲಿ ಅನ್ಯಾಯವನ್ನು ಪ್ರತಿಭಟಿಸುವುದು, ಕೇಂದ್ರಗಳಿಗೆ ಬೀಗ ಹಾಕುವುದು ನಡೆಯುತ್ತಿದೆ. ಆದರೆ ಅಧಿಕಾರದ ಮದದಲ್ಲಿ ಮಲಗಿರುವ ಸರ್ಕಾರವನ್ನು ಇದು ಎಚ್ಚರಿಸುವುದೇ? ಹೋರಾಟ ಇನ್ನು ವಿಶಾಲದ ತೀವ್ರವಾಗಿ ವಿಸ್ತರಿಸಿಕೊಂಡು ಸಾವಿರ ಸಾವಿರ ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕಿದೆ. ಇದಕ್ಕೆ ಎಲ್ಲರ ಪ್ರಯತ್ನ ಬೆಂಬಲದ ಅಗತ್ಯವಿದೆ.

ಚಂದ್ರಶೇಖರ ನಾಡಗೌಡ,
ಜಾಲಹಳ್ಳಿ

ಆಳುವವರನ್ನು ಎಚ್ಚರಿಸಿದ ಅಸಂಘಟಿತ ಕಾರ್ಮಿಕರ ಮುಷ್ಕರ

ಕಾನೂನಾತ್ಮಕ ಕನಿಷ್ಠ ಕೂಲಿ ಮತ್ತು ಉದ್ಯೋಗ ಭದ್ರತೆ ಸಾಮಾಜಿಕ ಸುರಕ್ಷತೆಯ ಸೌಲಭ್ಯಗಳಿಗಾಗಿ ಆಗ್ರಹಿಸಿ ದೇಶದ ಅಸಂಘಟಿತ ಶ್ರಮಜೀವಿಗಳು ನಡೆಸಿದ ಆಗಸ್ಟ್ 8ರ ದೇಶವ್ಯಾಪಿ ಹೋರಾಟ ಭಾರೀ ಯಶಸ್ವಿಯಾಗಿದೆ. ಸಿಐಟಿಯು ಕರೆ ನೀಡಿದ್ದ ಈ ಹೋರಾಟದಲ್ಲಿ ಸುಮಾರು ನಾಲ್ಕುವರೆ ಕೋಟಿ ದುಡಿಯುವ ಅಸಂಘಟಿತ ಕಾರ್ಮಿಕರು ಭಾಗವಹಿಸಿ ಕೇಂದ್ರದ ಯುಪಿಎ ಸರ್ಕಾರಕ್ಕೆ ಹಾಗೂ ರಾಜ್ಯದಲ್ಲಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ಮೂರು ವರ್ಷಗಳ ಹಿಂದೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಯುಪಿಎ ಸರ್ಕಾರ ಅಸಂಘಟಿತ ಕಾರ್ಮಿಕರಿಗೆ ಸಮಗ್ರ ಸಂರಕ್ಷಣಾ ಶಾಸನ ರೂಪಿಸುವ ಭರವಸೆಯುನ್ನು ತನ್ನ ಕನಿಷ್ಠ ಸಾಮಾನ್ಯ ಕಾರ್ಯಕ್ರಮದಲ್ಲಿ ಘೋಷಿಸಿತ್ತು. ಆದರೆ ಶೇ.93ರಷ್ಟಿರುವ ಈ ಜನವಿಭಾಗಕ್ಕೆ ಸರ್ಕಾರ ಆ ಭರವಸೆಯನ್ನು ಈಡೇರಿಸಲಿಲ್ಲ. ದೇಶದ ಒಟ್ಟಾರೆ ರಾಷ್ಟ್ರೀಯ ಉತ್ಪನ್ನದಲ್ಲಿ ಶೇ.65ರಷ್ಟು ಕೊಡುಗೆ ನೀಡುತ್ತಿರುವ ಅಸಂಘಟಿತರಿಗೆ ಸರ್ಕಾರ ಕನಿಷ್ಠ ಸೌಲತ್ತುಗಳನ್ನು ಸಹಾ ನೀಡುತ್ತಿಲ್ಲ.

ಸರ್ಕಾರವೇ ನೇಮಿಸಿದ್ದ ಅಸಂಘಟಿತ ಕಾರ್ಮಿಕರ ಕುರಿತಾದ ರಾಷ್ಟ್ರೀಯ ಆಯೋಗವು ತನ್ನ ವರದಿಯನ್ನು ಜುಲೈ 7ರಂದೇ ಪ್ರಧಾನಮಂತ್ರಿಗೆ ಸಲ್ಲಿಸಿ ಹಲವಾರು ಶಿಫಾರಸ್ಸುಗಳನ್ನು ಮಾಡಿದೆ. ಆದರೆ ಆ ಬಗ್ಗೆ ಕಿಂಚಿತ್ತೂ ಗಮನ ಹರಿದೆ, ಅಸಂಘಟಿತರ ಬಗ್ಗೆ ಕೇವಲ ಮೊಸಳೆ ಕಣ್ಣೀರು ಮಾತ್ರ ಸುರಿಸುತ್ತಿದೆ. ಹೀಗಾಗಿ ದೇಶದ ಕೋಟ್ಯಾನುಕೋಟಿ ಶ್ರಮಿಕರ ಬಗ್ಗೆ ನಿರ್ಲಕ್ಷ್ಯ ವಹಿಸಿರುವ ಕೇಂದ್ರ, ರಾಜ್ಯ ಸರ್ಕಾರಗಳ ನೀತಿ ವಿರುದ್ಧ ಆಗಸ್ಟ್ 8ರಂದು ಬೀದಿಗಿಳಿದು ಪ್ರತಿಭಟಿಸಿದರು.

ಬೇಡಿಕೆಗಳು

ಕನಿಷ್ಠಕೂಲಿ ಸಿಗಲಿ, ಜಾರಿ, ಕಾರ್ಮಿಕ ಕಾನೂನುಗಳ ವಿಸ್ತರಣೆ, ಬಿಗಿಜಾರಿ, ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರದಿಂದ ಸಾಮಾಜಿಕ ಸುರಕ್ಷತಾ ಕ್ರಮಗಳು, ಸೂಕ್ತ ಬಜೆಟ್, ಮಹಿಳಾ ಕಾರ್ಮಿಕರಿಗೆ ಸೂಕ್ತ ಸಾಮಾಜಿಕ ಭದ್ರತಾ ಕ್ರಮಗಳು ಮುಂತಾದವುಗಳು ಹೋರಾಟದ ಬೇಡಿಕೆಗಳಾಗಿವೆ.

ಸಿಐಟಿಯು ಕರೆಯ ಮೇರೆಗೆ ನಡೆದ ಈ ಅಸಂಘಟಿತ ಕಾರ್ಮಿಕರ ಮುಷ್ಕರಕ್ಕೆ ಉತ್ತರದ ಕಾಶ್ಮೀರದಿಂದ ಹಿಡಿದು ದಕ್ಷಿಣದ ಕೇರಳದವರೆಗೆ ಅಭೂತಪೂರ್ವ ಬೆಂಬಲ ವ್ಯಕ್ತಗೊಂಡಿದೆ. ಈ ದೇಶವ್ಯಾಪಿ ಮುಷ್ಕರದಿಂದಾಗಿ ದೇಶದ ಪ್ರಮುಖ ಪಟ್ಟಣಗಳು ತಮ್ಮ ವಹಿವಾಟು ಸ್ಥಬ್ದಗೊಳಿಸುವಂತಹ ಸ್ಥಿತಿ ಉಂಟಾಗಿತ್ತು. ವಾಹನ ಸಂಚಾರ ಸ್ಥಗಿತವಾಗಿಗಿತ್ತು. ಸರ್ಕಾರಿ ಕಛೇರಿಗಳ ಕೆಲಸಗಳು ಅಸ್ತವ್ಯಸ್ತಗೊಂಡಿದ್ದವು. ಅಖಿಲ ಭಾರತ ಈ ಮುಷ್ಕರದಲ್ಲಿ, ಖಾಸಗಿ ಬಸ್ ನೌಕರರಿಂದ ಹಿಡಿದು ಹಮಾಲಿ, ಬೀಡಿ ಕಾರ್ಮಿಕರವರೆಗೂ ಹತ್ತಾರು ಶೋಷಿತ ಸಮುದಾಯಗಳು ಪಾಲ್ಗೊಂಡು ತಮ್ಮ ಐಕ್ಯತೆಯನ್ನು ಸಾರಿದವು. ದೇಶದ ಹಲವಾರು ಕೇಂದ್ರ ಸರ್ಕಾರಿ ಸ್ವಾಮ್ಯದಲ್ಲಿ ಕೆಲಸ ಮಾಡುತ್ತಿರುವ ಅಸಂಘಟಿತ ಕಾರ್ಮಿಕರು ಹೋರಾಟಕ್ಕಿಳಿದ ಪರಿಣಾಮ ಅಲ್ಲಿನ ಕೆಲಸದ ಮೇಲೆ ಭಾರೀ ಪರಿಣಾಮ ಬೀರಿತ್ತು.

ಆಗಸ್ಟ್ 8ರಂದು ನಡೆದ ಈ ಮುಷ್ಕರವನ್ನು ಯಶಸ್ವಿಗೊಳಿಸಿದ ಶ್ರಮಿಕವರ್ಗಕ್ಕೆ ಸಿಐಟಿಯು ಅಭಿನಂದನೆಯನ್ನು ತಿಳಿಸಿದೆ. ಸರ್ಕಾರ ಒಂದು ವೇಳೆ ಅಸಂಘಟಿತರ ಬಗ್ಗೆ ನಿರ್ಲಕ್ಷ್ಯ ಮುಂದುವರೆಸಿದರೆ ಸಮರಶೀಲ ಚಳುವಳಿಯನ್ನು ಮುಂದಿನ ದಿನಗಳಲ್ಲಿ ನಡೆಸಲು ಸಜ್ಜಾಗಿರುವಂತೆ ಅದು ಕರೆ ನೀಡಿದೆ.

ದೇಶವ್ಯಾಪಿ ಮುಷ್ಕರದ ಸಂಕ್ಷಿಪ್ತ ವಿವರ ಇಲ್ಲಿದೆ

ಕೇರಳ : ಖಾಸಗಿ ಬಸ್ ನೌಕರರ ಮುಷ್ಕರದಿಂದಾಗಿ ಇಡೀ ರಾಜ್ಯದಲ್ಲೇ ಇದು ಜನರ ನಿತ್ಯ ಜೀವನದ ಮೇಲೆ ಪರಿಣಾಮ ಬೀರಿತ್ತು. ಇದರಿಂದಾಗಿ ಸರ್ಕಾರ ಕಛೇರಿಗಳಲ್ಲಿ ಹಾಜರಾತಿ ಇಳಿಮುಖವಾಗಿತ್ತು. ದೊಡ್ಡ ದೊಡ್ಡ ಅಂಗಡಿಗಳು, ಮಾರುಕಟ್ಟೆ ಪ್ರದೇಶಗಳು ಮುಚ್ಚಿದ್ದರಿಂದ 'ಬಂದ್ ವಾತಾವರಣ ನಿರ್ಮಾಣವಾಗಿತ್ತು.

ಪಶ್ಚಿಮ ಬಂಗಾಳ : ರಾಜ್ಯಾದ್ಯಂತ ಸುಮಾರು 1 ಕೋಟಿ ಅಸಂಘಟಿತ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದ್ದಾರೆ. ರಾಜ್ಯದಲ್ಲಿರುವ ರಿಕ್ಷಾವಾಲಾಗಳು, ಆಟೋರಿಕ್ಷಾ, ಟ್ಯಾಕ್ಸಿ ಸೇರಿದಂತೆ ಸಣ್ಣಪುಟ್ಟ ಸಾರಿಗೆ ನೌಕರರು ಮುಷ್ಕರದಲ್ಲಿ ಭಾಗವಹಿಸಿದ ಪರಿಣಾಮ ಜನಜೀವನವೇ



ಅಸ್ತವ್ಯಸ್ತಗೊಂಡಿತ್ತು. ಕೋಲ್ಕತ್ತಾ ಸೇರಿದಂತೆ ರಾಜ್ಯದ ನಗರ ಪ್ರದೇಶಗಳ ಅಂಗಡಿ ಮುಂಗಟ್ಟುಗಳಲ್ಲಿ ಬಜಾರ್‌ಗಳಲ್ಲಿ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರು, ಕೂಲಿಗಳೂ ಹೋರಾಟ ನಡೆಸಿದರು. ಅಲ್ಲದೇ 12 ಲಕ್ಷ ಬೀಡಿ ಕಾರ್ಮಿಕರು ಈ ಹೋರಾಟದಲ್ಲಿ ಸಂಪೂರ್ಣ ಭಾಗಿಯಾಗಿದ್ದರು.

ತ್ರಿಪುರ : ರಾಜ್ಯದ ಖಾಸಗಿ ಸಾರಿಗೆ, ಅಂಗಡಿ, ಕೈಮಗ್ಗ, ಕಟ್ಟಡ ಸೇರಿದಂತೆ ಒಟ್ಟು ಸುಮಾರು 31 ವಿವಿಧ ವೃತ್ತಿನಿರತ ಕಾರ್ಮಿಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ಇದರಿಂದಾಗಿ ರಾಜ್ಯದಲ್ಲಿ ಭಾಗಶ: ಬಂದ್ ವಾತಾವರಣ ನಿರ್ಮಾಣಗೊಂಡಿತ್ತು. ದೇಶವ್ಯಾಪಿ ಈ ಮುಷ್ಕರದಲ್ಲಿ ತ್ರಿಪುರಾದ ಒಟ್ಟು 6 ಲಕ್ಷ ಕಾರ್ಮಿಕರು ಭಾಗವಹಿಸಿದ್ದರು.

ಪಂಜಾಬ್ : ಪಂಜಾಬ್‌ನಲ್ಲಿ ಆಗಸ್ಟ್ 8ರ ಮುಷ್ಕರಕ್ಕೆ ಭಾರೀ ಜನಸ್ಪಂದನೆ ದೊರೆಯಿತು. ಇಟ್ಟಿಗೆ ತಯಾರಿಕೆಯಲ್ಲಿ ತೊಡಗಿರುವ ಸುಮಾರು 50 ಸಾವಿರ ಕಾರ್ಮಿಕರು ರಾಜ್ಯಾದ್ಯಂತ ನಡೆದ ಸಾಮೂಹಿಕ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ. ಎಫ್‌ಸಿಐ ಗೋಡೌನ್‌ಗಳಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರು ಬಜಾರ್‌ಗಳಲ್ಲಿನ ಕೂಲಿಕಾರರು ಮುಷ್ಕರ ನಡೆಸಿದ ಪರಿಣಾಮ ವ್ಯಾಪಾರ ವಹಿವಾಟು ಸಂಪೂರ್ಣ ಸ್ತಬ್ದಗೊಂಡಿತ್ತು. ಬಸ್, ರೈಲು ಸಂಚಾರ ವಿರಳವಾಗಿತ್ತು.

ರಾಜಸ್ಥಾನ : ಮುಷ್ಕರದ ಅಂಗವಾಗಿ ರಾಜ್ಯದ ಗಂಗಾನಗರ ಮತ್ತು ಹನುಮಘರ್‌ಗಳಲ್ಲಿಯ ಎಫ್‌ಸಿಐ ಗೋಡೌನ್ ಕಾರ್ಮಿಕರು ಪ್ರತಿಭಟನೆ ನಡೆಸಿದರು. ಇದರಿಂದಾಗಿ ಅವು ಸಂಪೂರ್ಣ ಬಂದ್ ಆಗಿದ್ದವಲ್ಲಲ್ಲದೇ, ರಾಜ್ಯಾದ್ಯಂತ ಹಮಾಲಿ ಕಾರ್ಮಿಕರು, ರಿಕ್ಷಾವಾಲಗಳು, ವ್ಯಾನ್, ಟ್ರ್ಯಾಕ್ಟರ್ ಡ್ರೈವರ್ಸ್‌ಗಳು ಈ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ ಪ್ರಮುಖ ಕೈಗಾರಿಕೆಗಳ ಗುತ್ತಿಗೆ ಕಾರ್ಮಿಕರು ಮುಷ್ಕರ ನಡೆಸಿದ್ದರಿಂದ ಅಲ್ಲಿನ ಉತ್ಪಾದನೆಗೆ ಪೆಟ್ಟು ಬಿತ್ತು. ಬೀಡಿ ಕಾರ್ಮಿಕರು ಮತ್ತು ಕಾರ್ಪೆಟ್ಸ್ ಕಾರ್ಮಿಕರು ಬಾರೀ ಪ್ರಮಾಣದಲ್ಲಿ ಮೆರವಣಿಗೆ ನಡೆಸಿದರು.

ಮಧ್ಯಪ್ರದೇಶ : ರಾಜ್ಯಾದ್ಯಂತ ಬೀಡಿ ಕಾರ್ಮಿಕರು, ದಿನಗೂಲಿ ನೌಕರರು ಮತ್ತು ಸಣ್ಣ ಕೈಗಾರಿಕಾ ಘಟಕಗಳ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸಿದ್ದರು. ಹಲವಾರು ಬೃಹತ್ ಉದ್ದಿಮೆಗಳ ಗುತ್ತಿಗೆ ಕಾರ್ಮಿಕರು ಹೋರಾಟದಲ್ಲಿ ಪಾಲ್ಗೊಂಡ ಪರಿಣಾಮ ಉತ್ಪಾದನೆ ನಿಂತಿತು. ಈ ಹೋರಾಟದಿಂದಾಗಿ ಗ್ವಾಲಿಯರ್ ಮತ್ತು ದಾಬ್ರಾಗಳಲ್ಲಿ ಬಂದ್ ವಾತಾವರಣ ನಿರ್ಮಾಣಗೊಂಡಿತ್ತು. ರಾಜ್ಯದ ಇಂಧೂರ್, ಜಬಲ್‌ಪುರ, ಭೂಪಾಲ್ ಸೇರಿದಂತೆ ಹಲವು ಪ್ರಮುಖ ನಗರಗಳಲ್ಲಿ ಬೀದಿಬದಿ ವ್ಯಾಪಾರಿಗಳು, ಹಮಾಲಿಗಳು, ಕಟ್ಟಡ ಕಾರ್ಮಿಕರು ಬಾರೀ ಪ್ರಮಾಣದಲ್ಲಿ ಪ್ರತಿಭಟನೆ ನಡೆಸಿದ್ದಾರೆ.

ಉತ್ತರಖಾಂಡ : ಡೆಹರಾಡೂನ್‌ನಲ್ಲಿ ಖಾಸಗಿ ಸಾರಿಗೆ, ಕಟ್ಟಡ, ಸೇರಿದಂತೆ ಹಲವು ವಿಭಾಗಗಳ ಅಸಂಘಟಿತ ಕಾರ್ಮಿಕರು ಸಚಿವಾಲಯದ ಎದುರು ದೊಡ್ಡ ಪ್ರಮಾಣದ ಮತ ಪ್ರದರ್ಶನ ನಡೆಸಿದ್ದಾರೆ.

ಹಿಮಾಚಲ ಪ್ರದೇಶ : ರಾಜ್ಯದ 12 ವಿದ್ಯುತ್ ತಯಾರಿಕಾ ಪ್ರದೇಶಗಳಲ್ಲಿನ ಸಾವಿರಾರು ಕಾರ್ಮಿಕರು ಮುಷ್ಕರ ನಡೆಸಿದ ಪರಿಣಾಮ ಇಡೀ ಉತ್ಪಾದನೆಯೇ ಅಸ್ತವ್ಯಸ್ತಗೊಂಡಿತ್ತು. ಜಿಲ್ಲಾ ಕೇಂದ್ರಗಳಲ್ಲಿ ಬಾರೀ ಮತಪ್ರದರ್ಶನಗಳು ನಡೆದವು.

ತಮಿಳುನಾಡು : ವಿವಿಧ ಅಸಂಘಟಿತ ವಲಯದ ಸುಮಾರು 3.5 ಲಕ್ಷ ಕಾರ್ಮಿಕರು ರಾಜ್ಯಾದ್ಯಂತ ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಅದರಲ್ಲಿ ಸುಮಾರು 80 ಸಾವಿರ ಕಾರ್ಮಿಕರು ಬಂಧನಕ್ಕೊಳಗಾಗಿದ್ದಾರೆ. ರಾಜ್ಯದ ಸುಮಾರು 200



ಕೇಂದ್ರಗಳಲ್ಲಿ ಮತ ಪ್ರದರ್ಶನಗಳು ನಡೆದಿವೆ. ಉತ್ತರ ಚೆನ್ನೈ, ಕೊಯಮತ್ತೂರ್, ಮದುರೈ ಸೇರಿದಂತೆ ಇತರೆಡೆಗಳಲ್ಲಿ ಬಾರೀ ಪ್ರದರ್ಶನ ನಡೆದು ಸುಮಾರು 40 ಸಾವಿರ ಮಹಿಳೆಯರು ಬಂಧನಕ್ಕೊಳಗಾಗಿದ್ದಾರೆ.

ಮಹಾರಾಷ್ಟ್ರ : ಮುಷ್ಕರಕ್ಕೆ ಮಹಾರಾಷ್ಟ್ರದಲ್ಲಿ ಭಾರೀ ಸ್ಪಂದನ ದೊರೆತಿದೆ. ಬೀಡಿ ಕಾರ್ಮಿಕರು ಬಾರೀ ಪ್ರಮಾಣದಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ ಆರ್‌ಸಿಎಫ್, ಹೆಚ್‌ಪಿಸಿಎಲ್, ಆರ್‌ಸಿಸಿ ಸೇರಿದಂತೆ ಪ್ರಮುಖ ಉದ್ದಿಮೆಗಳ ಗುತ್ತಿಗೆ ಕಾರ್ಮಿಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ರಾಜ್ಯದ ಸೋಲಾಪುರ, ಕೊಲ್ಹಾಪುರ, ನಾಸಿಕ್, ಮುಂಬೈ, ಪುಣೆ, ಇಚಲಕರಂಜಿ, ಸಾಂಗ್ಲಿ ಸೇರಿದಂತೆ ಹಲವು ಕಡೆ ಬೃಹತ್ ಪ್ರದರ್ಶನ ನಡೆದಿವೆ ಮತ್ತು ಮುಂಬೈನಲ್ಲಿ 7 ಸಾವಿರ ಕಾರ್ಮಿಕರ ಪ್ರತಿಭಟನೆ ನಡೆಸಿದ್ದಾರೆ.

ಆಂಧ್ರಪ್ರದೇಶ : ರಾಜ್ಯಾದ್ಯಂತ ಸುಮಾರು 6 ಲಕ್ಷ ಅಸಂಘಟಿತ ವಲಯದ ಕಾರ್ಮಿಕರು ಮುಷ್ಕರ ನಡೆಸಿದ್ದಾರೆ. ರಿಕ್ಷಾ, ಅಂಗನವಾಡಿ, ಪಂಚಾಯತ್, ಅರಣ್ಯ ಇಲಾಖೆಗಳ ಗುತ್ತಿಗೆ ಕಾರ್ಮಿಕರು ಹೋರಾಟದಲ್ಲಿ ಭಾಗವಹಿಸಿದ್ದಾರೆ. ರಾಜ್ಯದ ಸುಮಾರು 500 ಕೇಂದ್ರಗಳಲ್ಲಿ ಕಾರ್ಮಿಕರು, ರಸ್ತೆ ತಡೆ, ರೈಲುತಡೆ ನಡೆಸಿದ್ದಾರೆ.

ಬಿಹಾರ : ಪಾಟ್ನಾದಲ್ಲಿ ಸಾವಿರಾರು ಅಸಂಘಟಿತರು ರೈಲು ತಡೆ ನಡೆಸಿದ್ದಾರೆ. ರಾಜ್ಯದ ಹಲವಾರು ಕೇಂದ್ರಗಳಲ್ಲಿ ಮುಷ್ಕರದಿಂದಾಗಿ ಬಂದ್ ವಾತಾವರಣ ನಿರ್ಮಾಣವಾಗಿತ್ತು.

ಜಾರ್ಖಂಡ್ : ರಾಜ್ಯದ ಬೀಡಿ ಕಾರ್ಮಿಕರ ಮಧ್ಯೆ ಮುಷ್ಕರ ಯಶಸ್ವಿಯಾಯ್ತು. ರಾಜ್ಯದ ರಾಂಚಿ, ಪಾಂಕುರ್, ಸಾಹಿಬಾಗಂಜ್, ಆದಿತ್ಯಪುರ್ ಸೇರಿದಂತೆ ಹಲವೆಡೆ ಸಾರಿಗೆ ಕಾರ್ಮಿಕರು, ಗಣಿ ಕಾರ್ಮಿಕರು ರಿಕ್ಷಾ ಕಾರ್ಮಿಕರು ಬಾರೀ ಸಂಖ್ಯೆಯಲ್ಲಿ ಸೇರಿ ಹೋರಾಟ ನಡೆಸಿದ್ದಾರೆ.

ಒರಿಸ್ಸಾ : ರಾಜಧಾನಿ ಭುವನೇಶ್ವರದಲ್ಲಿ ಅಸಂಘಟಿತ ಕಾರ್ಮಿಕರ ಬೃಹತ್ ಮತಪ್ರದರ್ಶನ ನಡೆಸಲಾಯಿತು. ವಿವಿಧ ಉಕ್ಕಿನ ಕಾರ್ಖಾನೆಗಳ ಗುತ್ತಿಗೆ ಕಾರ್ಮಿಕರು, ಗಣಿ, ಕಲ್ಲಿದ್ದಲು ಕಾರ್ಮಿಕರು ಈ ಹೋರಾಟದಲ್ಲಿ ಭಾಗವಹಿಸಿದ್ದರು. ರಾಜ್ಯದ ಪ್ರಮುಖ ಕೈಗಾರಿಕಾ ಕೇಂದ್ರ, ರೂರ್‌ಕೇಲ್ ಸಂಪೂರ್ಣ ಬಂದ್ ಆಗಿತ್ತು. ಸುಂದರ್‌ಘರ್ ಜಿಲ್ಲೆಯಲ್ಲಿ ರಸ್ತೆ ತಡೆ ನಡೆಸಿದ ಸುಮಾರು 35000 ಕಾರ್ಮಿಕರನ್ನು ಬಂಧಿಸಲಾಗಿತ್ತು. ಬಿಮ್ಲಾಘರ್‌ನಲ್ಲಿ 6 ತಾಸು ರೈಲು ತಡೆ ನಡೆಸಿದ್ದರಿಂದ 850 ಕಾರ್ಮಿಕರನ್ನು ಬಂಧಿಸಲಾಯಿತು.

ಗುಜರಾತ್ : ರಾಜ್ಯದ ಭಾವನಗರ, ಬರೋಡಾ, ರಾಜಕೋಟಾ, ಸೇರಿದಂತೆ ಹಲವಾರು ಕಡೆಗಳಲ್ಲಿ ಗುತ್ತಿಗೆ ಕಾರ್ಮಿಕರು, ಲಾರಿ ಕಾರ್ಮಿಕರು, ರಿಕ್ಷಾ ಚಾಲಕರು, ಕಟ್ಟಡ, ಬೀಡಿ ಕಾರ್ಮಿಕರು ಹೋರಾಟ ನಡೆಸಿದ್ದಾರೆ.

ಉತ್ತರಪ್ರದೇಶ : ರಾಜ್ಯದ ಕಾನ್ಪುರದ ದಾದಾನಗರ ಮತ್ತು ಚಂತೆ ಕೈಗಾರಿಕಾ ಪ್ರದೇಶ ಮುಷ್ಕರದಿಂದಾಗಿ ಸಂಪೂರ್ಣ ಬಂದ್ ಆಗಿತ್ತು. ಮುಷ್ಕರ ನಿರತರ ಮೇಲೆ ಪೊಲೀಸರು ಅನಾವಶ್ಯಕ ಲಾಠಿ ಚಾರ್ಜ್ ನಡೆಸಿದರು. ಶಹರಾನ್‌ಪುರ, ವಾರಣಾಸಿ, ಬರೇಲಿಯಲ್ಲ ಕಾರ್ಮಿಕರ ಬೃಹತ್ ಪ್ರದರ್ಶನಗಳು ನಡೆದವು.

ಹರಿಯಾಣ : ರಾಜ್ಯದ ಹಿಸ್ಸಾರ್, ಬಿವಾನಿ, ಪಂಚಕುಲ, ಫತೇಬಾರ್, ಗುರಗಾಂವ್, ಮೊದಲಾದ ಕಡೆ ಅಸಂಘಟಿತ ಕಾರ್ಮಿಕರ ಬೃಹತ್ ಪ್ರದರ್ಶನಗಳು ನಡೆದಿವೆ. ಫರಿದಾಬಾದ್‌ನಲ್ಲಿ ಆಟೋಚಾಲಕರ ಬೃಹತ್ ಪ್ರತಿಭಟನೆ ನಡೆಯಿತು.

ದೆಹಲಿ : ದೆಹಲಿಯಲ್ಲಿ ಮುಷ್ಕರಕ್ಕೆ ಬಾರೀ ಸ್ಪಂದನೆ ಸಿಕ್ಕಿತು. ಚಾಂದಿನಿ ಚೌಕ್, ಹಳೆ ದೆಹಲಿ, ರೈಲ್ವೆ ನಿಲ್ದಾಣ, ಸೇರಿದಂತೆ ಹತ್ತಾರು ಪ್ರಮುಖ ಸ್ಥಳಗಳಲ್ಲಿ ಬೃಹತ್ ಮತಪ್ರದರ್ಶನಗಳು ನಡೆದಿವೆ. ಇವರಲ್ಲಿ ಸಾವಿರಾರು ವಿವಿಧ ವಲಯದ ಕಾರ್ಮಿಕರು ಭಾಗವಹಿಸಿದ್ದರು.

ಅಸ್ಸಾಂ : ರಾಜಧಾನಿ, ಗುವಾಹಟಿ ಸೇರಿದಂತೆ

ಪುಟ 15ಕ್ಕೆ

ಜಗದಗಲ

ಶರತ್‌ಚಂದ್ರ

ಮುಶರ್ರಫ್ ಸಂಕಟದಲ್ಲಿ – ತುರ್ತು ಪರಿಸ್ಥಿತಿ ಹೇರುತ್ತಾರೆಯೇ?

ಅಧ್ಯಕ್ಷ ಮುಶರಫ್ ಸಂಕಟದಲ್ಲಿ ಇದ್ದಾರೆ. ಎಲ್ಲಾ ಕಡೆಯಿಂದ ಅವರ ಮೇಲೆ ದಾಳಿ ನಡೆದಿದೆ – ಇಸ್ಲಾಮಿಕ್ ಮೂಲಭೂತವಾದಿಗಳು, ವಕೀಲರು, ವಿರೋಧ ಪಕ್ಷಗಳು. ಅವರನ್ನು ಅಧಿಕಾರಕ್ಕೆ ತಂದ ಅಮೆರಿಕನ್ ಸರಕಾರ ಸಹ ಅಗತ್ಯ ಬಿದ್ದರೆ ಅಲ್ ಖೈದಾ ನಿಗ್ರಹಿಸಲು, ಪಾಕಿಸ್ತಾನದೊಳಗೆ ಸೈನ್ಯ ಕಳುಸಿಸಬೇಕಾದೀತು ಎಂದು ಹೇಳಿ ಮುಶರಫ್ ರನ್ನು ಫಜೀತಿಗೆ ಸಿಕ್ಕಿಸಿದ್ದರು. ಎಂಟು ವರ್ಷಗಳ ಕಾಲ ಎಲ್ಲಾರ ಗಮನ ಬೇರೆಡೆ ತಿರುಗಿಸಿ ಹೇಗೋ ಆಳಿದ್ದ ಮುಶರಫ್ ತೀವ್ರ ರಾಜಕೀಯ ಸವಾಲು ಸಂಕಟ ಎದುರಿಸುತ್ತಿದ್ದಾರೆ. ಅವರು ಮುಂದಿನ ವರ್ಷ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಯಲ್ಲಿ ಮುನರಾಯ್ಕೆಯಾಗಿ ಅಧಿಕಾರ ಉಳಿಸಿಕೊಳಿಸಿಕೊಳ್ಳುವ ಸನ್ನಾಹದಲ್ಲಿ ಇದ್ದಾರೆ. ಆದರೆ ಎಲ್ಲವೂ ಅವರಿಗೆ ತಿರುಗಿ ಬೀಳುವಂತೆ ಕಾಣುತ್ತಿದೆ.

ಸುಪ್ರೀಂ ಕೋರ್ಟು ನ್ಯಾಯಾಧೀಶ ಚೌಧರಿ ವಜಾ ನಂತರ ಅಧ್ಯಕ್ಷ ಮುಶರಫ್ ಗೆ ಸಂಕಟಗಳ ಸರಮಾಲೆ ಆರಂಭವಾಗಿದೆ. ಚೌಧರಿ ವಜಾ ವಿರೋಧಿಸಿ ದೇಶದಾದ್ಯಂತ ವಕೀಲರ ದಿಟ್ಟ ಚಳುವಳಿ, ಅದಕ್ಕೆ ಸಿಕ್ಕಿದ ಭಾರೀ ಜನ ಬೆಂಬಲ ಅನಿರೀಕ್ಷಿತವಾಗಿತ್ತು. ಚೌಧರಿ ತಮ್ಮ ವಜಾ ವಿರೋಧಿಸಿ ಸಲ್ಲಿಸಿದ ಅರ್ಜಿ ಮೇಲೆ ಸುಪ್ರೀಂ ಕೋರ್ಟು ತೀರ್ಪು ಇನ್ನಷ್ಟು ಅನಿರೀಕ್ಷಿತವಾಗಿತ್ತು. ಮಿಲಿಟರಿ ಆಳ್ವಿಕೆಯಲ್ಲಿ ಸರಕಾರದ ತೀರ್ಮಾನವನ್ನು ರದ್ದು ಮಾಡಿದ್ದು



ಇದೇ ಮೊದಲು. ವಕೀಲರ ದಿಟ್ಟ ಚಳುವಳಿ ಸಮಗ್ರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಒತ್ತಡ ಹಾಕುವತ್ತ ಮುಂದುವರೆಯುವ ಸೂಚನೆಗಳಿವೆ.

ಆದರೆ ಈ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಪ್ರಮುಖ ವಿರೋಧಿ ಶಕ್ತಿಗಳಾದ ಬೆನಜೀರ್ ಭುಟ್ಟೊ ಮತ್ತು ನವಾಜ್ ಶರೀಫ್ ರ ಪಕ್ಷಗಳು ನಿರೀಕ್ಷಿತ ಪ್ರಧಾನ ಪಾತ್ರ ವಹಿಸದೆ ಹೋದವು. ಈ ಇಬ್ಬರೂ ನಾಯಕರು ಈ ಬಿಕ್ಕಟ್ಟು ಬಳಸಿ ತಮ್ಮ ದೇಶಾಂತರದಿಂದ ವಾಪಸಿಗೆ ಮತ್ತು ತಮ್ಮ ಪಕ್ಷಗಳ ರಾಜಕೀಯ 'ಪುನರ್ವಸತಿ'ಗೆ ಚೌಕಾಶಿ ನಡೆಸಿದ್ದರು. ಮುಶರಫ್ ಸಹ ಮೂಲಭೂತವಾದಿ ಶಕ್ತಿಗಳ ವಿರುದ್ಧ ಹೋರಾಡುವ ನೆಪದಲ್ಲಿ ಈ ಜಾತ್ಯತೀತ ರಾಜಕೀಯ ಶಕ್ತಿಗಳ ಬೆಂಬಲ ಪಡೆಯಲು ಪ್ರಯತ್ನ ನಡೆಸಿದರು. ಕನಿಷ್ಠ ವಕೀಲರ ನಾಯಕತ್ವದ ಪ್ರಜಾಸತ್ತಾತ್ಮಕ ಚಳುವಳಿಯಿಂದ ಅವರನ್ನು ದೂರವಿಡುವಲ್ಲಿ ಯಶಸ್ವಿಯಾದರು. ಇದು ಇನ್ನೊಮ್ಮೆ ಪಾಕಿಸ್ತಾನದ ರಾಜಕೀಯದಲ್ಲಿ ಮಿಲಿಟರಿ ಹಿಡಿತದ ಆಳದ ಪರಿಚಯ ಮಾಡಿಸಿತು. ಅದೇ ರೀತಿ, ರಾಜಕೀಯ ಪಕ್ಷಗಳ ದಿವಾಳಿತನದ ಪ್ರದರ್ಶನ ಸಹ ನೀಡಿತು.

ಅಮೆರಿಕದ ಒತ್ತಡದಿಂದಾಗಿ ಅಫ್ಘಾನಿಸ್ತಾನದ ಗಡಿ ಪ್ರಾಂತ್ಯಗಳಲ್ಲಿ ತಾಲಿಬಾನ್ ಮತ್ತು ದೇಶದಾದ್ಯಂತ ಇಸ್ಲಾಮಿಕ್ ಮೂಲಭೂತವಾದಿ ಶಕ್ತಿಗಳ ವಿರುದ್ಧ ಮಿಲಿಟರಿ ಶಕ್ತಿ ಬಳಸಬೇಕಾಗಿ ಬಂದಿದೆ. ಆದರೆ ಮುಂದಿನ ಚುನಾವಣೆಗಳಲ್ಲಿ ಅವರ ಬೆಂಬಲ ಕಳೆದುಕೊಳ್ಳುವ ಭಯದಿಂದ ಪೂರ್ಣ ಪ್ರಮಾಣದ ಕಾರ್ಯಾಚರಣೆ ಕೈಗೊಳ್ಳುತ್ತಿಲ್ಲ. ಈ ನಡುವೆ ಮಿಲಿಟರಿ ಜನರಲ್ ಪದವಿ ಬಿಡದೆ ಮುಶರಫ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಬಹುದೇ ಎಂಬ ಬಗ್ಗೆ ವಿವಾದ ಎದ್ದಿದೆ. ಇದು ಕೋರ್ಟಿನ ಮುಂದೆ ಹೋಗುವ ಸಂಭವ ಸಹ ಇದೆ. ಇಲ್ಲೂ ಅಮೆರಿಕನ್ ಸರಕಾರ ಮುಶರಫ್ ಗೆ ಬೆಂಬಲ ನೀಡಿತು. ಮಿಲಿಟರಿ ಜನರಲ್ ಪದವಿ ಬಿಡಬೇಕಾಗಿಲ್ಲ ಎಂದಿತು.

ಈ ನಡುವೆ ಈ ಹಲವು ಬಿಕ್ಕಟ್ಟುಗಳನ್ನು ಎದುರಿಸಲಾರದೆ ಮುಶರಫ್ ತುರ್ತು ಪರಿಸ್ಥಿತಿ ಜಾರಿ ಮಾಡಲೂ ಹೊರಟಿದ್ದು. ಇದಕ್ಕೂ ಅಮೆರಿಕನ್ ಸರಕಾರ ತನ್ನದೇನೂ ಅಭ್ಯಂತರ ಇಲ್ಲವೆಂದು ಹೇಳಿತ್ತು. ಆದರೆ ಬರಬಹುದಾದ ಜನರ ಪ್ರತಿರೋಧ ಮತ್ತು ಸುಪ್ರೀಂ ಕೋರ್ಟಿನ ಪ್ರತಿಕ್ರಿಯೆಗೆ ಬೆದರಿ ಮಾತ್ರ ಈ ಕ್ರಮದಿಂದ ಹಿಂಜರಿದರು ಎನ್ನಲಾಗಿದೆ. ಇನ್ನೂ ಮುಶರಫ್ ಸಂಕಟಗಳು ಬಗೆಹರಿಯದೆ ಇವೆ. ಪಾಕಿಸ್ತಾನ ಇನ್ನೊಂದು ಜನರಲ್ ಆಳ್ವಿಕೆಗೆ ಸಿದ್ಧವಾಗಿದೆಯೆ? ಎಂದು ಕಾದು ನೋಡಬೇಕಾಗಿದೆ.

ಕೊರಿಯಾಗಳ ಚಾರಿತ್ರಿಕ ಶೃಂಗಸಭೆ

ಆಗಸ್ಟ್ ಕೊನೆ ಹೊತ್ತಿಗೆ ಉತ್ತರ ಮತ್ತು ದಕ್ಷಿಣ ಕೊರಿಯಾಗಳ ನಡುವೆ ಉನ್ನತ ಮಟ್ಟದ ಶೃಂಗ ಸಭೆ ನಡೆಯಲಿದೆ. ಇದು ಇಂತಹ ಎರಡನೇ ಶೃಂಗ ಸಭೆ. ಉತ್ತರ ಕೊರಿಯಾದ ಅಣು ಶಕ್ತಿ ಸ್ಥಾವರದ ಬಗೆಗಿನ ವಿವಾದ ಪರಿಹಾರಕ್ಕೆ ಆರು-ದೇಶಗಳ ಸಂಧಾನ ಪ್ರಯತ್ನದ ನಡುವೆ ಈ ಶೃಂಗ ಸಭೆ ಬಗ್ಗೆ ಘೋಷಣೆ ಆಶ್ಚರ್ಯ ಮತ್ತು ಕೊರಿಯಾ ಪರ್ಯಾಯ ದ್ವೀಪದಲ್ಲಿ ಅಣು ನಿಶ್ಶಸ್ತ್ರೀಕರಣ ಮತ್ತು ಶಾಂತಿ ಸಾಧ್ಯತೆ ಬಗ್ಗೆ ಹೊಸ ಭರವಸೆ ಮೂಡಿಸಿದೆ. ಶೃಂಗ ಸಭೆ ಉತ್ತರ ಕೊರಿಯಾದ ರಾಜಧಾನಿ ಪ್ಯೊಂಗ್ ಯಾಂಗ್ ನಲ್ಲಿ ಜರುಗಲಿದೆ. ಎರಡು ದೇಶಗಳ ಅಧ್ಯಕ್ಷರುಗಳು ಭಾಗವಹಿಸಲಿದ್ದಾರೆ. ಶೃಂಗ ಸಭೆ ಕೊರಿಯನ್ ಪರ್ಯಾಯ ದ್ವೀಪದಲ್ಲಿ 'ಶಾಂತಿ, ಸಹಕಾರ, ಸಮೃದ್ಧಿ, ಐಕ್ಯತೆ' ಯ ಹೊಸ ಯುಗ ಆರಂಭಿಸಲಿದೆ ಎಂದು ಉತ್ತರ ಕೊರಿಯಾ ಸರಕಾರ ಹೊರಡಿಸಿರುವ ಹೇಳಿಕೆ ತಿಳಿಸಿದೆ.

ಆರು ದೇಶಗಳ ಸಂಧಾನ ಗುಂಪಿನಿಂದ ಯಾವುದೇ ಅಧಿಕೃತ ಪ್ರತಿಕ್ರಿಯೆ ಬಂದಿಲ್ಲ. 50 ರ ದಶಕದ ಕೊರಿಯಾದ ಕ್ರಾಂತಿಯನ್ನು ಹೊಸಕಿ ಹಾಕುವ ಉದ್ದೇಶದ ಯುದ್ಧವನ್ನು ಒಂದು ರೀತಿಯಲ್ಲಿ ಇಲ್ಲಿ ವರೆಗೂ ಮುಂದುವರೆಸಿಕೊಂಡು ಬಂದಿರುವ ಅಮೆರಿಕಕ್ಕೆ ಇದು ಕೆಟ್ಟ ಸುದ್ದಿ ಎಂಬ ಬಗ್ಗೆ ಸಂಶಯವಿಲ್ಲ. ದಕ್ಷಿಣ ಕೊರಿಯಾದ ಮೇಲೆ ರಾಜಕೀಯ-ಮಿಲಿಟರಿ ಹಿಡಿತ ಮತ್ತು ದೊಡ್ಡ ಮಿಲಿಟರಿ ನೆಲೆ ಹೊಂದಿರುವ ಅಮೆರಿಕನ್ ಸರಕಾರ ಈ ಬೆಳವಣಿಗೆಯನ್ನು ಆತಂಕದಿಂದ ಗಮನಿಸುತ್ತಿದೆ. ಐದು ದಶಕಗಳ ವರೆಗೆ ತನ್ನ ಮಸಲತ್ತಿನಿಂದ ಕೊರಿಯಾದ ವಿಭಜನೆ ಮುಂದುವರೆಸಿದ ಅಮೆರಿಕ ತನ್ನ ಆಟ ಹೇಗೆ ಮುಂದುವರೆಸುವುದು ಎಂದು ಲೆಕ್ಕ ಹಾಕುತ್ತಿದೆ. ಎರಡೂ ಕೊರಿಯಾಗಳಲ್ಲಿ ಶಾಂತಿ, ಐಕ್ಯತೆಗೆ ಬೆಂಬಲ ಮತ್ತು ಅಮೆರಿಕದ ಮಿಲಿಟರಿ ನೆಲೆಗೆ ವಿರೋಧ ವ್ಯಾಪಕವಾಗಿದೆ. ಈ ಶೃಂಗ ಸಭೆ ಮಹತ್ತರ ಬದಲಾವಣೆಗಳನ್ನು ತರಬಹುದು ಎಂದು ನಿರೀಕ್ಷೆ ಇದೆ.

ಪ್ರಮುಖ ಅಲ್‌ಖೈದಾ ಬೆದರಿಕೆ ಇರಾಕ್ ನಿಂದ ಅಲ್ಲ

ಅಲ್ ಖೈದಾದ ವಿರುದ್ಧ ಹೋರಾಟದ ಮುಖ್ಯ ರಣರಂಗ ಈಗ ಇರಾಕ್ ಅಧ್ಯಕ್ಷ ಬುಶ್ ಕಾಂಗ್ರೆಸ್ ನಲ್ಲಿ ಹೇಳಿದ ಮರುದಿನವೇ ಇದನ್ನು ಅವರದೇ ಸರಕಾರದ ಅಧಿಕಾರಿ ಅಲ್ಲಗಳೆದಿದ್ದಾರೆ. ಸದನ ಸಮಿತಿಯ ಮುಂದೆ ಅಂತರ್ರಾಷ್ಟ್ರೀಯ ಬೆದರಿಕೆಗಳ ಬಗ್ಗೆ ವಿಶೇಷ ರಾಷ್ಟ್ರೀಯ ಬೇಹುಗಾರಿಕೆ ಅಧಿಕಾರಿ, ದಕ್ಷಿಣ ಏಶ್ಯಾ (ಅಫಘಾನಿಸ್ತಾನ, ಪಾಕಿಸ್ತಾನ) ದಲ್ಲಿ ಅಲ್ ಖೈದಾದ ಪ್ರಬಲ ನೆಲೆ ಗಳನ್ನು ಹೊಂದಿದ್ದು, ಮುಖ್ಯ ರಣರಂಗ ಅದು ಎಂದಿದ್ದಾರೆ. ಪರೋಕ್ಷವಾಗಿಯಾದರೂ ಇದರ ಅರ್ಥ ಇರಾಕ್ ನಲ್ಲಿ ಯುದ್ಧ ಮುಂದುವರೆಸಲು, ಇರಾಕ್‌ನಲ್ಲಿ ಅಲ್ ಖೈದಾದ ಹೆಚ್ಚಿದ ಬೆದರಿಕೆ ಬಗ್ಗೆ ಸುಳ್ಳು ಹೇಳುತ್ತಿದ್ದಾರೆ ಎಂದು ಇದರ ಅರ್ಥ. ಇರಾಕ್ ಗೂ ಅಲ್ ಖೈದಾಗೂ ಇಲ್ಲದ ಸಂಬಂಧ ಕಲ್ಪಿಸಿದ್ದು ಅಮೆರಿಕನ್ ಸರಕಾರ ಇರಾಕ್ ಯುದ್ಧಕ್ಕೆ ನೆಪವಾಗಿ ಎಂದು ಎಲ್ಲರಿಗೂ ಗೊತ್ತು. ಆದರೆ ಅದನ್ನು ಅಮೆರಿಕನ್ ಸರಕಾರದ ಪ್ರತಿನಿಧಿ ಹೇಳುವುದು ದೊಡ್ಡ ಸುದ್ದಿಯಲ್ಲವೇ?

ಚೀನಾದ ಕೆಂಪು ಸೈನ್ಯಕ್ಕೆ ಎಂಬತ್ತರ ಸಂಭ್ರಮ

ಚೀನಾದ ಕೆಂಪು ಸೈನ್ಯ (ಅಥವಾ ಜನತಾ ವಿಮೋಚನಾ ಸೈನ್ಯ) ಆ ದೇಶದ ಚಾರಿತ್ರಿಕ ಜನತಾ ಕ್ರಾಂತಿಯಲ್ಲಿ ವಹಿಸಿದ ಪಾತ್ರ ಜಗತ್ ಪ್ರಸಿದ್ಧ. 'ದೀರ್ಘ ಪಯಣ' ಮತ್ತು ಭಾರೀ ಜಪಾನೀ ಮಿಲಿಟರಿ ಯಂತ್ರವನ್ನು ಹಿಮ್ಮೆಟ್ಟಿಸಿದ ವೀರ ಚರಿತ್ರೆ ಅದರದು. ಚೀನಾದ ಕಮ್ಯುನಿಸ್ಟ್ ಪಕ್ಷದ ಸಮವಸ್ತ್ರ ಧರಿಸಿ ಎಂಬತ್ತನೇ ವಾರ್ಷಿಕೋತ್ಸವದ ಪರೇಡುಗಳಲ್ಲಿ ಭಾಗವಹಿಸಿದರು. ಚೀನಾದ ಶಾಂತಿ ನೀತಿಗೆ ಅನುಗುಣವಾಗಿ ಚಿಕ್ಕ ಮತ್ತು ಪ್ರಬಲ ಸೈನ್ಯ ಕಟ್ಟುವುದು ಚೀನಾ ಸರಕಾರದ ಗುರಿ. ಎಂಬತ್ತನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸುತ್ತಾ ಸೈನ್ಯದ ಕಾರ್ಯಾಚರಣೆ ಮತ್ತು ತಂತ್ರಜ್ಞಾನದಲ್ಲಿ



ನಾಯಕತ್ವದಲ್ಲಿ ಚೀನಾದ ಕ್ರಾಂತಿಯ ಬೆನ್ನೆಲುಬು ಆಗಿತ್ತು. ಆಗಿದೆ. ಚೀನಾದ ಕ್ರಾಂತಿಗೆ ಬೇರೆ ಬೇರೆ ಹಂತದಲ್ಲಿ ಬಂದ ತೀವ್ರ ಸವಾಲುಗಳನ್ನು ಎದುರಿಸಿ ಅದರ ರಕ್ಷಣೆಗೆ ಧಾವಿಸಿದ ಕೀರ್ತಿ ಅದರದು. 1927 ಆಗಸ್ಟ್1 ರಂದು ನಾನ್ ಚಂಗ್ ನಲ್ಲಿ ಕಮುನಿಸ್ಟ್ ಪಕ್ಷದ ನಾಯಕತ್ವದ ಪಡೆಗಳು ದೊಡ್ಡ ದಂಗೆಯಲ್ಲಿ ಭಾಗವಹಿಸಿದವು. ಅದನ್ನು ಕೆಂಪು ಸೈನ್ಯದ ಸ್ಥಾಪನಾ ದಿನ ಎಂದು ಪರಿಗಣಿಸಲಾಗುತ್ತದೆ. ಪಾಳೇಯಗಾರಿ-ಸಾಮ್ರಾಜ್ಯಶಾಹಿ ವಿರುದ್ಧ ಕಮ್ಯುನಿಸ್ಟ್ ಪಕ್ಷದ ರಾಜಕೀಯ ಮತ್ತು ಮಿಲಿಟರಿ ಹೋರಾಟದ ಮಂಚೂಣಿಯಲ್ಲಿದ್ದ ಧೀರೋದಾತ್ತ ರೈತರೇ ಕೆಂಪು ಸೈನ್ಯದ ಬೆನ್ನೆಲುಬಾಗಿದ್ದರು. ಕೆಂಪು ಸೈನ್ಯದ ಎಂಬತ್ತನೇ ವಾರ್ಷಿಕೋತ್ಸವವನ್ನು ಸಂಭ್ರಮದಿಂದ ಚೀನಾದ ತುಂಬಾ ಆಚರಿಸಲಾಯಿತು.

ಜಗತ್ತಿನ ಅತೀ ದೊಡ್ಡ ಸೈನ್ಯವಾದ ಚೀನಾದ ಕೆಂಪು ಸೈನ್ಯದ 22 ಲಕ್ಷ ಕೆಂಪು ಸೈನಿಕರು ಹೊಸ ಆಧುನಿಕೀಕರಣ, ಕಮ್ಯುನಿಸ್ಟ್ ಪಕ್ಷ ಮತ್ತು ಜನತೆಗೆ ಬದ್ಧತೆ ಮೇಲೆ ಚೀನಾದ ಅಧ್ಯಕ್ಷ ಹು ಜಿಂತಾವೋ ಒತ್ತು ನೀಡಿದರು. ಈ ಸಂದರ್ಭದಲ್ಲಿ ಕೆಂಪು ಸೈನ್ಯದ ಚರಿತ್ರೆ ಬಿಂಬಿಸುವ ಮ್ಯೂಸಿಯಂ ಅನ್ನು ಉದ್ಘಾಟಿಸಲಾಯಿತು. ಕೆಂಪು ಸೈನ್ಯಕ್ಕೆ ಬೇರೆ ಬೇರೆ ಅವಧಿಯಲ್ಲಿ ನಾಯಕತ್ವ ನೀಡಿದ ಹತ್ತು ಮಹಾನ್ ಜನರಲ್ ಗಳ ಬಗ್ಗೆ ವಿಶೇಷ ವಿಭಾಗ ಗಮನ ಸೆಳೆಯಿತು. ಪ್ರಸ್ತುತ ಜಗತ್ತಿನ ಆಗುಹೋಗುಗಳಲ್ಲಿ ಚೀನಾದ ವಿಶಿಷ್ಟ ಪಾತ್ರದಿಂದಾಗಿ ಕೆಂಪು ಸೈನ್ಯ ಅಂತರ್ರಾಷ್ಟ್ರೀಯ ಗಮನ ಸೆಳೆದಿದೆ. ನೆರೆಹೊರೆಯ ದೇಶದ ಸೈನ್ಯಗಳೊಂದಿಗೆ ಜಂಟಿ ಕವಾಯತು ನಡೆಸಿ ಚೀನಾ ತನ್ನ ಶಾಂತಿಯುತ ಉದ್ದೇಶಗಳಿಗೆ ಒತ್ತು ನೀಡುತ್ತಿದೆ. ಅದೇ ಸಮಯದಲ್ಲಿ ಏಶ್ಯಾದಲ್ಲಿ ಚೀನಾ-ವಿರೋಧಿ ಮಿಲಿಟರಿ ಕೂಟ ರಚಿಸಲು ಅಮೆರಿಕದ ಪ್ರಯತ್ನಗಳಿಗೆ ತಣ್ಣೀರೆರಚುತ್ತಿದೆ.

ರೇವತಿಯ ಬಾಳ ವ್ಯಥೆ ಗಂಡ ಪ್ರಮೋದನ ನೀಚ ಕಥೆ

ಹೆಂಡತಿ ಮೈಗೆ ಬೆಂಕಿ ಬಿದ್ದು ಎದ್ದ ಹೊಗೆ ಅಕ್ಕಪಕ್ಕದ ಮನೆಯವರಿಗೆ ತಿಳಿಯುತ್ತದೆ. ಮನೆಯ ಮುಂದೆಯೇ ನಿಂತಿರುವ ಗಂಡನಿಗೆ ತಿಳಿಯುವುದಿಲ್ಲ! ಸತ್ತ ಹೆಂಡತಿಯ ಹೆಣ ಪಡೆಯಲು ಗಂಡ ಬರುವುದಿಲ್ಲ! ಇಂಥ ಗಂಡನೊಬ್ಬ ವೃತ್ತಿಯಿಂದ ಶಿಕ್ಷಕ!! ಬಿಜಾಪುರ ಹೆಣ್ಣು ಮಗಳೊಬ್ಬಳ ದುರಂತ ಕಥೆ ಇದು. ಇದಕ್ಕೆ ಕೊನೆಯಿಲ್ಲವೇ?

ರುದ್ರಮ್ಮ ಉರುಫ್ ರೇವತಿ ವೀರಭದ್ರಪ್ಪ ಘೂಳಿ ಹತ್ತಾರು ಕನಸು ಕಟ್ಟಿಕೊಂಡು ಟಿ.ಸಿ.ಎಚ್. ಮಾಡಿ ಬಿಜಾಪುರದ ಸರ್ಕಾರಿ ಪ್ರಾಥಮಿಕ ಶಾಲೆಯ ನೌಕರಿ ಮಾಡುತ್ತಾ ಗಂಡ ಪ್ರಮೋದ ರೇವಣ್ಣ ಸಿದ್ದಪ್ಪ ಮೆಂಚ ಇವನೊಂದಿಗೆ ಬದುಕಬೇಕಾದವಳು, ಇದ್ದಕ್ಕಿದ್ದಂತೆ ಸುಟ್ಟುಕೊಂಡು ಸಾಯುವುದೆಂದರೆ? ಈ ಪ್ರಶ್ನೆ ಪ್ರಶ್ನೆಯಾಗೇ ಉಳಿದಿದೆ... ಪ್ರಶ್ನೆಗೆ ಉತ್ತರಿಸಬೇಕಾದ ಮಗು ಭೂಮಿಕಾ ಮಾತು ಬಾರದೆ ತೊದಲ್ನುಡಿಯುತ್ತಾ 'ಮಮ್ಮಿ... ಗಾಯ... ಹಾ!!' ಎಂದು ಕೇಳಿದವರಿಗೆಲ್ಲ ಉದ್ಗಾರದ ಉತ್ತರ ಹೇಳುತ್ತದೆ. ಮಾತು ಬಾರದ ಈ ಎರಡೇ ವರ್ಷದ ಈ ಹಸುಳೆ ಇನ್ನುಮುಂದೆ ಬಾಳಿ ಬದುಕಬೇಕಿದೆ.

ರುದ್ರಮ್ಮ ಐದು ಲೀಟರ್ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಾಗ ಗಂಡನೆಂಬ ದಂಡ ಪಿಂಡ ಮನೆಯ ಹೊರಗೆ ನಿಂತಿದ್ದು, ಅಕ್ಕ-ಪಕ್ಕದವರು ಮನೆಯಲ್ಲಿದ್ದ ಕಪ್ಪು ಕಾರ್ಮೋಡದ ಹೊಗೆಗೆ ಕಾರಣ ಮನೆಯಲ್ಲಿ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹತ್ತಿರ ಬಹುದೆಂಬ ಗುಮಾನಿಯಿಂದ ಒಳ ಹೋದಾಗ ರುದ್ರಮ್ಮ ಉರುಫ್ ರೇವತಿ ಜೀವಂತವಾಗಿ ಸುಡುತ್ತ ಬಚ್ಚಲ ಮನೆಗೆ ಧಾವಿಸುತ್ತಿದ್ದು ದೃಶ್ಯ ಎಂತವರಿಗೂ ಭಯ ಹುಟ್ಟಿಸುತ್ತಿದೆ. ಜೂನ್ 25, 2007 ರಂದು ಸುಟ್ಟುಕೊಂಡು ಜುಲೈ 03, 2007ರಂದು ರುದ್ರಮ್ಮ ಉರುಫ್ ರೇವತಿ ಬಿಜಾಪುರದ ಬಿಎಲ್‌ಡಿ, ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಾಗ, ಘೂಳಿ ಬಂದುಗಳಿಗೆ ಹೊಟ್ಟೆಯಲ್ಲಿ ಖಾರಾ ಕಲಿಸಿದಂತಾಗಿ ಭಾವೋದ್ವೇಗ ಗೊಂಡದ್ದು ಸಹಜವಾದದ್ದೇ.

ಹೆಣ ಹಾಕಿಯೇ ಬಿಟ್ಟ

ಬಿಜಾಪುರದ ನಾಗಠಾಣಾ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕನಾಗಿ ಸೇವೆ ಸಲ್ಲಿಸುತ್ತಿರುವ ಈಕೆಯ ಗಂಡ ಪ್ರಮೋದ ಎಂತಾ ಅಸಡ್ಡಾಳೆಂದರೆ, ಜುಲೈ 4,2007 ರಂದು ಪೋಸ್ಟ್‌ಮಾರ್ಟಂ ನಂತರ ಅಂತ್ಯಕ್ರಿಯೆಗೆ ತನ್ನ ಹೆಂಡತಿಯ ಹೆಣ ತೆಗೆದುಕೊಳ್ಳಲೂ ಬಾರದ ಬೇಜಬ್ದಾರಿ ಮನುಷ್ಯ. ಅವನೇ ತನ್ನ ಹೆಂಡತಿಗೆ ಬೆಂಕಿ ಹಚ್ಚಿ ಹೊರಗೆ ಬಂದು ನಿಂತಿರಬಾರದೇಕೆ? ರೇವತಿಯೇ ಬೆಂಕಿ ಹಚ್ಚಿಕೊಂಡಳೋ. ಪ್ರಮೋದನೇ ಆಕೆಗೆ ಬೆಂಕಿ ಹಚ್ಚಿದನೊ... 'ಅಂತೂ ರೇವತಿಯ ಹೆಣ ಹಾಕೇ ಬಿಟ್ಟ ಕಡೆಗೆ' ಎನ್ನುತ್ತಾರೆ ಸಿಕ್ಕರ್ ಖಾನಾದ ಗಲ್ಲಿಯ ಜನ.

ಕೇವಲ ಆರು ವರ್ಷದ ಹಿಂದೆ ಡಿಸೆಂಬರ್ 19, 2000 ಮದುವೆಯ ವೇಳೆಯಲ್ಲಿ ರೂ.50,000 ವರದಕ್ಷಿಣೆ ಕೊಡುವುದರ ಜೊತೆ 17 ತೊಲ ಬಂಗಾರ ಹಾಕಿ ಕಳಿಸಿದ್ದನ್ನು ರೇವತಿಯ ಅಪ್ಪ ನೆನನೆನದು ಅಳುತ್ತಾನೆ. ನಾಲ್ಕು ಜನ ಅಣ್ಣಂದಿರ ಕಣ್ಮಣಿಯಾಗಿದ್ದ ತಂಗಿ ಬಿಜಾಪುರದಿಂದ ಗುಲ್ಬರ್ಗಾಕ್ಕೆ ವರ್ಗಾವಣೆಯ ಬಗ್ಗೆ ಕೇಳಿದ್ದು, ವರ್ಗಾವಣೆಗೆ ಮುಂಚೆಯೇ ಈ ದುರಂತಕ್ಕೀಡಾದದ್ದು ನೆನೆದು ತೀರಾ ಸಂಕಟಪಡುತ್ತಿದ್ದಾರೆ.

ತಲೆ ತಪ್ಪಿಸಿಕೊಂಡ

ರೇವತಿಯ ಗಂಡ ಪ್ರಮೋದ ರೇವಣ ಸಿದ್ದಪ್ಪ ಮೆಂಚ ಎಂತಹ ಸ್ವಾರ್ಥಿ ಎಂದರೆ, ರೇವತಿಯ ಸಂಬಳ ಆಕೆಯ ಕೈಗೆಟುಕದಂತೆ, ಕಾರಿಗಾಗಿ ಲೋನ್ ಮಾಡಿ, ಪ್ರತಿ ತಿಂಗಳೂ ಅವಳ ಸಂಬಳದಿಂದ ಕಾರ್ ಲೋನಿನ ಕಂತು ತುಂಬುವಂತೆ ಮಾಡಿದ್ದ. ಇದೆಲ್ಲ ತಿಳಿದ ರೇವತಿಯ ಅಣ್ಣ ಶ್ರೀಶೈಲ ಘೂಳಿಯ, ಗೆಳೆಯರು, ಬಿಜಾಪುರದ ಬಣಗಾರ ಸಮಾಜದ ಅಧ್ಯಕ್ಷರು, ಗುಲ್ಬರ್ಗಾದ ವೀರಶೈವ ಸಮಾಜದ ಸಂಘಟಕರೂ, ಸೇರಿ ಇದ್ದ ಅವರ ಮಗಳು ಭೂಮಿಕಾಳ ಮುಂದಿನ ಬದುಕು, ಭವಿಷ್ಯಕ್ಕಾಗಿ ಏನೆಂದು ಕೇಳಿದರೆ, ಈ ಕೊಲೆಗಡುಕ ಪ್ರಮೋದ, 'ನಮ್ಮ ಮಗಳ್ನ ನಾವು ಹೆಂಗಾದ್ರೂ ಸಾಕ್ತೀವ್ರಿ? ನಿಮಗ್ಯಾಕೆ' ಎನ್ನುತ್ತಾನೆ!

ರೇವತಿ ಕಡೇ ಗಳಿಗೆಯಲ್ಲಿ ಅಣ್ಣ ಶ್ರೀಶೈಲ ಘೂಳಿಯವರ ಮುಂದೆ ಹೇಳಿದ್ದು, 'ನೋಡಣ್ಣ ನಂದಂತೂ ಮುಗೀತು, ನೀವು ಕಂಪ್ಲೇಟು ಕೋರ್ಟು ಅಂತ ನನ್ನ ಗಂಡನ್ನ ಜೈಲಿಗೆ ಹಾಕ್ಸಿದ್ದರೆ ಇದ್ದ ಮಗಳು ಭೂಮಿಕಾ ಪರದೇಶಿಯಾಗ್ತದೆ... ಅದಕ್ಕೆ ಕಂಪ್ಲೆಂಟ್ ಕೊಡಬೇಡಾ' ಎಂದದ್ದು, ಕೇಳಿದರೆ, ಯಾರ ಕರುಣೆಯ ಕಟ್ಟೆಯೊಡೆದು ನೀರಾಗಲಿಕ್ಕಿಲ್ಲ? ಹಾಗಂತ ಅಣ್ಣ ತಮ್ಮಂದಿರು ಆಗ ಕಂಪ್ಲೆಟ್ ಮಾಡಿಲ್ಲ, ಆದರೆ, ಗಂಡ ಪ್ರಮೋದ ನುಣುಚಿಕೊಳ್ಳುವುದು ನೋಡಿದರೆ, ಇವನು ಕೆಲವೇ ದಿನಗಳಲ್ಲಿ ಇನ್ನೊಂದು ಮದುವೆಯಾಗುತ್ತಾನೆ ಮತ್ತು ಆ ಭೂಮಿಕಾ ಎನ್ನುವ ಕೂಸನ್ನು ತಬ್ಬಲಿ ಮಾಡಲು ಹೇಸುವುದಿಲ್ಲವೆಂದು ಭೂಮಿಕಾಳ ಭವಿಷ್ಯಕ್ಕಾಗಿ ಜಾಯಿಂಟ್ ಅಕೌಂಟ್‌ನಲ್ಲಿ ರೂ.5 ಲಕ್ಷ ಠೇವಣಿ, ಹಾಗೂ ಅವಳ ಓದು ಮತ್ತು ಮದುವೆಯ ಖರ್ಚು ಕೊಡಲು ಒತ್ತಾಯಿಸಿದಾಗ, ಅಲ್ಲಿಂದ ಪರಾರಿಯಾದ ಮೈ ಮರೆಸಿಕೊಂಡು ಬಿಟ್ಟ ಪ್ರಮೋದ...

ಅಮಾನವೀಯ

ಜೂನ್ 3, 2007ರಂದು ರಾತ್ರಿ 8 ಗಂಟೆಗೆ ಸತ್ತ ರೇವತಿಯ ಹೆಣ ಜೂನ್ 4, 2007ರ 4 ಗಂಟೆಯವರೆಗೆ, ದಿಕ್ಕಿಲ್ಲದಂತೆ ಬಿದ್ದಿದ್ದು, ಒಂದು ಕರುಣಾಜನಕ ಕಥೆ, ಒಂದು ಹೆಣ್ಣಿನ ಬಾಳ ವ್ಯಥೆ. ಪ್ರಮೋದ ಮುಂದಿನ ದಿನಗಳಲ್ಲೂ ಹೀಗೇ



ಕೊಲೆಗಡುಕ ಪ್ರಮೋದ - ಬಲಿಯಾದ ರೇವತಿ

ನುಣುಚಿಕೊಳ್ಳ ಬಹುದೆಂದು ಅಲ್ಲಿನ ಬಣಗಾರ ಸಮಾಜದ ಅಧ್ಯಕ್ಷರೂ, ಸಂಘಟಕರೂ, ಸತ್ತ ರೇವತಿಯ ಸಂಬಂಧಿಕರೂ, ಕೆಲವು ಸುಳಿವಿನ ಎಳೆ ಹಿಡಿದು, ಹುಡುಕಿ, ಕೋರ್ಟಿಗೆ ಪ್ರಮೋದನನ್ನು ಕರೆ ತಂದು ಮುಂದಿನ ದಿನಗಳ ಬಗ್ಗೆ, ಹೇಳಿದಾಗ, ನೋಟರಿ ಸಮಕ್ಷಮದಲ್ಲಿ ಕೂಸು ಭೂಮಿಕಾಳಿಗಾಗಿ ರೂ.3 ಲಕ್ಷ ಠೇವಣಿ, ಅವಳ ಓದಿನ ಖರ್ಚು, ಬದುಕಿನ ಮತ್ತು ಭೂಮಿಕಾಳ ಮದುವೆ ಖರ್ಚಿಗೆಂದು, ಸಂಬಳದ ಶೇ.25 ಕೊಡಲು ಒಪ್ಪಿ ಸ್ಟ್ಯಾಂಪ್ ಪೇಪರ್ ಮೇಲೆ ಸಹಿ ಹಾಕಿದನು.

ಜೂನ್ 4, 2007 5 ಗಂಟೆಯವರೆಗೂ, ರೇವತಿಯ ಗಂಡನ ಮನೆಯವರ್ಯಾರೂ ಅಂತ್ಯಕ್ರಿಯೆ, ಆಸ್ಪತ್ರೆಯಿಂದ ಸ್ಮಶಾನ ಕೊಯ್ಯುವ ಕೆಲಸದ ಬಗ್ಗೆ ತಲೆಕೆಡಿಸಿ ಕೊಳ್ಳಲಿಲ್ಲ. ಯಾರು ಅಲ್ಲಿ ಸುಳಿಯ ದಿದ್ದರಿಂದ, ಅಂತ್ರಕ್ರಿಯೆಗೆ ಗುಲ್ಬರ್ಗಾದಿಂದ ಹೋದ ಸಂಬಂಧಿಕರು, ಸಮುದಾಯ ಮುಂತಾದ ಪ್ರಗತಿಪರ ಸಂಘಟನೆಗಳ ಸಂಘಟಕರು, ಸಾಮಾಜಿಕ ಕಾರ್ಯಕರ್ತರು ರೇವತಿಯ ಹೆಣ ಸುಪರ್ದಿಗೆ ತೆಗೆದುಕೊಂಡು ವಿಜಾಪುರದ ರುದ್ರಭೂಮಿಯಲ್ಲಿ ಅಗ್ನಿಸ್ಪರ್ಶ ಮಾಡಿ ಹೊರಬರುತ್ತಿದ್ದಂತೆ, ರೇವತಿಯ ಗಂಡ ಪ್ರಮೋದ ಸುಮಾರು 25 ಜನ ಗೂಂಡಾಗಳನ್ನು ರುದ್ರಭೂಮಿಗೆ ಕಳಿಸಿ, ರೇವತಿಯ ಸಂಬಂಧಿಕರು ಮತ್ತು ಹೆಣ್ಣು ಮಕ್ಕಳ ಮೇಲೆ, ಹಲ್ಲೆ ಮಾಡಿದ್ದು, ಮತ್ತೊಂದು ದೊಡ್ಡ ಆಘಾತ. ಪ್ರಮೋದ ಮಾಡಿದ ಮತ್ತೊಂದು ಅಮಾನವೀಯ, ಮತ್ತು ನೀಚ ಕೆಲಸವಿದು.

ಪೋಲೀಸರ ಮಿಲಾಖತ್?

ಪ್ರಮೋದನ ಇಂತಹ ದುಷ್ಟತನದಿಂದ ವೇದ್ಯವಾಗುವುದೇನೆಂದರೆ, ಅವನೇ ರೇವತಿಯ ಮೈಮೇಲೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ ಹೊರಬಂದಿರಬಹುದೆಂದು. ಯಾಕೆಂದರೆ ಯಾವ ಅವಗಡದಲ್ಲಿ ಬೆಂಕಿ ಹತ್ತಿದರೂ ಇಡೀ ಮೈಗೆ ಒಮ್ಮೆಲೇ ಬೆಂಕಿ ಹತ್ತುವುದಿಲ್ಲ. ಆದರೆ, ಹೆಂಡತಿ ರೇವತಿ ತಾನೇ ಬೆಂಕಿ ಹಚ್ಚಿಕೊಂಡದ್ದು ಅಚಾನಕ್ ಎಂಬಂತೆ ಪ್ರಮೋದ ಹೇಳುತ್ತಾನೆ.

'ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದರು' ಎಂಬಂತೆ ಇಬ್ಬರೂ ಪೋಲೀಸ್ ಇದ್ದೂ ಗಲಾಟೆ ನಡೆದಿದ್ದು, ಸ್ಮಶಾನದಲ್ಲಿ ಅಷ್ಟೆಲ್ಲ ಗಲಾಟೆಯಾದರೂ, ಗೂಂಡಾಗಳು ಹಲ್ಲೆ ಮಾಡಿದ ಮೇಲೆ ಪೋಲೀಸರು ಬಂದದ್ದು ನೋಡಿದರೆ, ಇದು ಪ್ರಮೋದನು ಪೋಲೀಸರ ಸಹಕಾರದೊಂದಿಗೆ ಯಾಕೆ ಸೇರಿ ಮಾಡಿರಬಾರದು ಎಂದು ಅನುಮಾನವಾಗುತ್ತದೆ.

ಇಂತಹ ಕೊಲೆಗಡುಕ, ನೀಚ ಬುದ್ದಿಯ ಪ್ರಮೋದನ ಸುಪರ್ಧಿನಲ್ಲಿ ಆ ಭೂಮಿಕಾ ಎಂಬ ಕೂಸು ಬದುಕುವುದು ಬೇಡವೆಂದು ರೇವತಿಯ ಅಕ್ಕ ಭೂಮಿಕಾಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿದ್ದಾಳೆ.

ಇಂತಹ ಕೊಲೆಗಡುಕ ಶಿಕ್ಷಕ, ಶಿಕ್ಷಕನಾಗಿ ಮುಂದುವರಿಯಬೇಕೆ? ಇಂತಹ ಶಿಕ್ಷಕನಿಂದ ಮಕ್ಕಳು ಬದುಕಿನ ಯಾವ ಮೌಲ್ಯದ ಪಾಠ ಕಲಿತಾವು? ಸತ್ಯ ಸಮಾಜಕ್ಕೆ ಗೊತ್ತಾಗಲೇ ಬೇಕಲ್ಲವೇ?

- ಘಂಟಾನಾದ

ಅಸಂಘಟಿತ ಕಾರ್ಮಿಕರ ಮುಷ್ಕರ

ಪುಟ 13 ರಿಂದ

ರಾಜ್ಯದ ಬಹುತೇಕ ಎಲ್ಲಾ ನಗರ, ಪಟ್ಟಣಗಳಲ್ಲಿ ಈ ಮುಷ್ಕರಕ್ಕೆ ಉತ್ತಮ ಸ್ಪಂದನೆ ದೊರೆತಿದೆ. ಪ್ರಮುಖವಾಗಿ ಕಟ್ಟಡ, ಖಾಸಗಿ ಸಾರಿಗೆ, ವಿಶೇಷವಾಗಿ ನಗರಸಾರಿಗೆ ಮತ್ತು ದೂರದ ಪ್ರದೇಶಗಳಿಗೆ ತೆರಳುವ ಬಸ್ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಮುಷ್ಕರದಿಂದಾಗಿ ರಾಜ್ಯದ ಬಹುತೇಕ ನಗರಗಳಲ್ಲಿ 'ಬಂದ್' ವಾತಾವರಣ ನಿರ್ಮಾಣಗೊಂಡಿತ್ತು. ರಾಜ್ಯಾದ್ಯಂತ ರೈಲು, ರಸ್ತೆತಡೆ, ಮತಪ್ರದರ್ಶನಗಳನ್ನು ಏರ್ಪಡಿಸಲಾಗಿತ್ತು.

ಕರ್ನಾಟಕದಲ್ಲೂ ಮೊಳಗಿದ ಅಸಂಘಟಿತರ ಹೋರಾಟ ಕಹಳೆ

ಆಗಸ್ಟ್ 8ರ ದೇಶವ್ಯಾಪಿ ಮುಷ್ಕರಕ್ಕೆ ಕರ್ನಾಟಕದ ಅಸಂಘಟಿತ ಸಮೂಹ ಒಂದಾಗಿ ಐಕ್ಯತೆ ಪ್ರದರ್ಶಿಸಿದೆ ಮತ್ತು ಕನಿಷ್ಠ ಸೌಲಭ್ಯಗಳಿಂದಲೂ ವಂಚಿತವಾಗಿರುವ ಈ ಸಮೂಹವನ್ನು ನಿರ್ಲಕ್ಷಿಸಿದರಲ್ಲಿ ಬಾರೀ ಪ್ರಮಾಣದ ಬೆಲೆ ತೆತ್ತಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಭಾರೀ ಮತಪ್ರದರ್ಶನ ಮತ್ತು ಹೋರಾಟಗಳ ಮೂಲಕ ಕೇಂದ್ರದ ಯುಪಿಎ ಮತ್ತು ರಾಜ್ಯದ ಜೆಡಿ(ಎಸ್) ಬಿಜೆಪಿ ಸಮ್ಮಿಶ್ರ ಸರ್ಕಾರಗಳಿಗೆ ನೀಡಿದೆ. ರಾಜ್ಯದಲ್ಲಿ ನಡೆದಿರುವ ಹೋರಾಟಗಳ ಸಂಕ್ಷಿಪ್ತ ವಿವರ ಹೀಗಿದೆ.



ಉತ್ತರಕನ್ನಡ ಜಿಲ್ಲೆಯ ಹೊನ್ನಾವರ, ಕಾರವಾರ, ದಾಂಡೇಲಿ, ಶಿರಸಿ, ಅಂಕೋಲಾ, ಹಳಿಯಾಳಗಳಲ್ಲಿ ಸುಮಾರು 1000ಕ್ಕಿಂತ ಹೆಚ್ಚು ಅಸಂಘಟಿತ ಕಾರ್ಮಿಕರು ಪ್ರತಿಭಟನೆ ನಡೆಸಿದ್ದಾರೆ. ಉಡುಪಿಯಲ್ಲಿ ಹೆಂಚು ಮತ್ತು ಬೀಡಿ ಕಾರ್ಮಿಕರು ಮತ್ತು ಗೇರುಬೀಜ ಕಾರ್ಖಾನೆ ಕಾರ್ಮಿಕರು ಮತ್ತು ಕುಂದಾಪುರದಲ್ಲಿ 500ಕ್ಕಿಂತ ಹೆಚ್ಚಿನ ಕಾರ್ಮಿಕರು ಈ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ದ.ಕನ್ನಡ ಜಿಲ್ಲೆಯ ಮಂಗಳೂರು ಜಿಲ್ಲಾಧಿಕಾರಿಗಳ ಕಛೇರಿ ಎದುರು 500ಕ್ಕಿಂತ ಅಧಿಕ ಕಾರ್ಮಿಕರು ಮತಪ್ರದರ್ಶನ ನಡೆಸಿದರು.

ಹಾಸನದ 500ಕ್ಕಿಂತ ಅಧಿಕ ತೋಟ ಕಾರ್ಮಿಕರು ಪಂಚಾಯ್ತಿ ನೌಕರರು ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದ್ದಾರೆ. ತುಮಕೂರಿನಲ್ಲಿ ಸುಮಾರು 500ಕ್ಕಿಂತ ಅಧಿಕ ಕಾರ್ಮಿಕರು ನಗರದ ಬಿಎಸ್‌ಎನ್‌ಎಲ್ ಕೇಂದ್ರಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ.

ಚಿತ್ರದುರ್ಗ, ಚಳ್ಳಕೆರೆಗಳಲ್ಲಿ ಕಟ್ಟಡ, ಹಮಾಲಿ, ಬಿಸಿಯೂಟ ಕಾರ್ಮಿಕರು ಬಾರೀ ಮತಪ್ರದರ್ಶನ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ. ಕೊಪ್ಪಳ, ಗಂಗಾವತಿ, ಕುಷ್ಟಗಿ ಮತ್ತು ರಾಯಚೂರಿನ ಮಾನ್ವಿ, ಸಿಂಧನೂರು, ದೇವದುರ್ಗಗಳಲ್ಲಿ ವಿವಿಧ ಅಸಂಘಟಿತ ಕಾರ್ಮಿಕರ ಹೋರಾಟಗಳು ನಡೆದಿವೆ.

ಬೆಂಗಳೂರಿನಲ್ಲಿ ಆಟೋ ಡ್ರೈವರ್ಸ್, ಪಂಚಾಯತಿ, ಸೇರಿದಂತೆ ವಿವಿಧ ಕಾರ್ಖಾನೆಗಳ ಸುಮಾರು 700 ಕಾರ್ಮಿಕರ ಬೃಹತ್ ಪ್ರದರ್ಶನ ನಡೆದಿದೆ. ಗದಗ್ ಜಿಲ್ಲಾ ಕೇಂದ್ರದಲ್ಲಿ ಅಂಗನವಾಡಿ, ಬಿಸಿಯೂಟ, ಪಂಚಾಯ್ತಿ ನೌಕರರ, ಬಿಎಸ್‌ಎನ್‌ಎಲ್‌ನ ಖಾಯಂ ಅಲ್ಲದ ಕಾರ್ಮಿಕರು ಸೇರಿದಂತೆ 150ಕ್ಕೂ ಹೆಚ್ಚು ಜನ ಸೇರಿ ಪ್ರತಿಭಟನೆ ನಡೆಸಲಾಗಿದೆ.

■ ಕೆ.ಮಹಾಂತೇಶ

JANASHAKTHI KANNADA VARA PATRIKE AUGUST 19 2007 Price : Rs. 5/- No. KARKAN /2006/17926 Postal Reg. No. ...



■ ನಕುಲ

'ಸವಿಸವಿ ನೆನಪು' ವೇಗವಿಲ್ಲದ ನಿರೂಪಣೆ

ನಿರ್ದೇಶಕ ಸಂತೋಷ ರೈ ಪಾತಾಜೆ ಅವರ ಸೊಗಸಾದ ಕಲ್ಪನೆಯ ಚಿತ್ರ 'ಸವಿಸವಿ ನೆನಪು'. ಕಲ್ಪನೆ ಚೆಂದವಿದೆ ಎಂದ ಮಾತ್ರಕ್ಕೆ ಚಿತ್ರ ಸೊಗಸಾಗಿರಬೇಕೇಂದೇನಿಲ್ಲವಲ್ಲ. ಒಂದರ್ಧ ಗಂಟೆಯಲ್ಲಿ ಹೇಳಿಮುಗಿಸಿಬಿಡಬಹುದಾದಂತಹ ಒಂದು ಸಣ್ಣ ಎಳೆಯ ಕಥೆಯನ್ನು ಎರಡೂವರೆ ಗಂಟೆಗಳ ಪ್ರೇಕ್ಷಕರನ್ನು ಹಿಡಿದಿಡುವಂತೆ ನಿರೂಪಿಸುವಲ್ಲಿ ನಿರ್ದೇಶಕ ಎಡವಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿ ಪ್ರೇಮ್ (ಪ್ರೇಮ್) ಬಹಳ ಮೆಚ್ಚಿ ಮದುವೆಯಾಗುವ ಹುಡುಗಿ ಪ್ರೀತಿ (ಮಲ್ಲಿಕಾಕಪೂರ್). ಪರಸ್ಪರ ಬಹಳ ಪ್ರೀತಿ, ಅನ್ಯೋನತೆ ಇದ್ದರೂ ವೈದ್ಯಕೀಯ ವೃತ್ತಿಯಿಂದಾಗಿ ಅವಳೊಂದಿಗೆ ಹೆಚ್ಚಿನ ಸಮಯ ಕಳೆಯಲಾಗುವುದಿಲ್ಲ ಪ್ರೇಮ್‌ಗೆ. ಅನಿರೀಕ್ಷಿತವಾಗಿ ಅಪಘಾತವೊಂದರಲ್ಲಿ ಹೆಂಡತಿ ಪ್ರೀತಿ ಮರಣಹೊಂದುತ್ತಾಳೆ. ಸಾಯುವ ಮುನ್ನ ಅವಳ ಹೃದಯವನ್ನು ದಾನ ಮಾಡಿರುತ್ತಾಳೆ. ಪಲ್ಲವಿ (ತೇಜಸ್ವಿನಿ) ಎಂಬ ಹುಡುಗಿಗೆ ಆ ಹೃದಯವನ್ನು ಅಳವಡಿಸಲಾಗಿರುತ್ತದೆ. ಅದು ಯಶಸ್ವಿಯಾಗುವ ಸಂಭವವಿರುವುದಿಲ್ಲವಾದ್ದರಿಂದ ಆಕೆ ತನ್ನ ಗಂಡನ ಜೀವನ ಹಾಳಾಗಬಾರದೆಂದು ಅವನಿಂದ ದೂರವಾಗಿ ದುಃಖ ಅನುಭವಿಸುತ್ತಿರುತ್ತಾಳೆ. ಇದನ್ನು ತಿಳಿಯುವ ನಾಯಕ ಪ್ರೇಮ್ ತನ್ನ ಮೆಚ್ಚಿನ ಮಡದಿಯ ಹೃದಯ ನೋಯಬಾರದೆಂದು, ಪಲ್ಲವಿಯನ್ನು ಸಂತೋಷದಿಂದಿಡಲು ಪ್ರಯತ್ನಿಸುತ್ತಾನೆ. ಪಲ್ಲವಿಯ ಗಂಡ ರಾಜ್ (ಪ್ರೇಮ್ - ದ್ವಿಪಾತ್ರ) ವಿದೇಶಕ್ಕೆ ತೆರಳುವುದರಿಂದ ಅವನ ರೂಪದಲ್ಲಿ ಬರುವ ಪ್ರೇಮ್, ಅವಳು ಬದುಕಿರುವವರೆಗೂ



ಸಂತೋಷದಿಂದಿರ ಬೇಕೆಂದು ಪ್ರೀತಿಯಿಂದ ಆರೈಕೆ ಮಾಡುತ್ತಾನೆ.

ಕಾಲೇಜು ಹುಡುಗನಾಗಿ ಹೊಸ ಗೆಟಪ್‌ನಲ್ಲಿ ಪ್ರೇಮ್ ಆಕರ್ಷಕವಾಗಿ ಕಂಡರೂ, ಉತ್ತಮ ಭಾವಾಭಿನಯ ಬೇಡುವ ವಿರಾಗಿ ಪ್ರೇಮಿಯ ಪಾತ್ರಕ್ಕೆ ಪ್ರೇಮ್ ಇನ್ನೂ ಪಳಗಬೇಕು! ಉತ್ತರದ ಬೆಡಗಿ ಮಲ್ಲಿಕಾ ಕಪೂರ್ ತನ್ನ ನಗುವಿನಿಂದಲೇ ಗಮನ ಸೆಳೆಯುತ್ತಾಳೆ, ಕನ್ನಡದ ಹೊಸ ಹುಡುಗಿ ತೇಜಸ್ವಿನಿ ಸೊಗಸಾಗಿ ಅಭಿನಯಿಸಿದ್ದಾಳೆ.

ಚಿತ್ರದ ಜೀವಾಳವಿರುವುದು ಆರ್.ಪಿ.ಪಟ್ನಾಯಕ್‌ರ ಸಂಗೀತದಲ್ಲಿ. ಮಧುರವಾದ ಮೂರು ಹಾಡುಗಳೇ ಚಿತ್ರದ ಕೈ ಹಿಡಿಯಬೇಕು. ಇತ್ತೀಚೆಗೆ ಕನ್ನಡದಲ್ಲಿ ಅಪರೂಪಕ್ಕೊಮ್ಮೆ ಹಾಡುವ ಎಸ್‌ಪಿಬಿ ಯವರ ಒಂದು ಹಾಡು ಗುನುಗುನಿಸುವಂತಿದೆ.

ನಿರ್ಮಾಪಕ ಬಾಬು ರವರು ಕಾರ್ಪೋರೇಟ್ ಶೈಲಿಯಲ್ಲಿ ಚಿತ್ರ ನಿರ್ಮಿಸಿರುವುದಾಗಿ ಹೇಳಿರುವುದು ನಿಜವಾದರೂ, ಸವಿಸವಿ ನೆನಪಿಗಿಂತ ಕಹಿ ನೆನಪೇ ಹೆಚ್ಚು. ಚಿತ್ರದ ಮುಕ್ಕಾಲುಭಾಗ ಗೋಳಾಟವೇ ತುಂಬಿರುವುದರಿಂದ ಕಾಮಿಡಿಗೇ ಜಾಗವೇ ಇಲ್ಲ. ಇದೇ ಚಿತ್ರದ ಮೈನಸ್ ಪಾಯಿಂಟ್. ಲವ್‌ಲವಿಕೆಯನ್ನು ನಿರೀಕ್ಷಿಸಿ, ಹಳೆಯ ನೆನಪುಗಳನ್ನು ನೆನೆಯಲು ಬರುವ ಪ್ರೇಕ್ಷಕರಿಗೆ ಈ ಗೋಳಾಟ ಸಾಕು ಸಾಕೆನಿಸುತ್ತದೆ.

ಶ್ರೀಮಂತವಾಗಿ ಕಾಣುವ 'ಸವಿಸವಿ ನೆನಪು' ತೆಲುಗು, ತಮಿಳು ಮತ್ತು ಮಲೆಯಾಳಂ ಭಾಷೆಗಳಿಗೆ ಡಬ್ ಆಗುತ್ತಿದೆ. ಇತ್ತೀಚಿನ ಕನ್ನಡ ಚಿತ್ರಗಳ ಇಂತಹ ಬೆಳವಣಿಗೆ ಕನ್ನಡ ಚಿತ್ರೋದ್ಯಮಕ್ಕೆ ಆಶಾದಾಯಕ ಬೆಳವಣಿಗೆ. ○

'ತಾಯಿ'ಗೆ ರಾಷ್ಟ್ರಪ್ರ... ಶ್ಯಾಂ ಬೆನಗಲ್‌ಗ... ಫಾಲ್ಕೆ ಪ್ರಶಸ್ತಿ

2005ನೇ ಸಾಲಿನ ರಾಷ್ಟ್ರೀಯ ಚಲ... ಪ್ರಶಸ್ತಿಗಳನ್ನು ನ್ಯಾಯಾಲಯ ತಲುಪಿದ್ದ ವಿವಾ... ಕಾರಣದಿಂದ ತಡವಾಗಿ ಪ್ರಕಟಿಸಲಾ... ಮ್ಯಾಕ್ಸಿಂಗಾರ್ಕಿಯವರ ಖ್ಯಾತ 'ಮದ... ಕಾದಂಬರಿಯನ್ನಾಧರಿಸಿ ಬರಗೂ... ರಾಮಚಂದ್ರಪ್ಪ ಅವರು ನಿರ್ದೇಶಿಸಿದ್ದ 'ತಾ... ಕಾದಂಬರಿ ಕನ್ನಡದ ಅತ್ಯುತ್ತಮ ... ಪ್ರಶಸ್ತಿಯನ್ನು ಪಡೆದಿದೆ. ಪರಿಸರ ಸಂರಕ್ಷಣ... ವಿಭಾಗಗದಲ್ಲಿ ಪಿ.ಶೇಷಾದ್ರಿ ನಿರ್ದೇಶ... 'ತುತ್ತೂರಿ' ಅತ್ಯುತ್ತಮ ರಾಷ್ಟ್ರೀಯ ಚಿತ್ರ ಪ್ರ... ಆಯ್ಕೆಯಾಗಿದೆ.

ಬುದ್ಧದೇವ ದಾಸ್‌ಗುಪ್ತಾ ನಿರ್ದೇಶ... ಬಂಗಾಳಿ ಚಿತ್ರ 'ಕಾಲಪುರುಷ್'ಗೆ ಅತ್ಯು... ಚಿತ್ರಕ್ಕೆ ನೀಡಲಾಗುವ ಸ್ವರ್ಣಕಮಲ ... ನೀಡಲಾಗಿದೆ.

ತಾಯಿ ಚಿತ್ರದ 'ಬರುತ್ತೇವೆ ಬರು... ಹಾಡಿನ ಸಾಹಿತ್ಯಕ್ಕಾಗಿ ಬರಗೂರು ಅವರು ... ರಚನೆ ವಿಭಾಗದಲ್ಲಿ ರಾಷ್ಟ್ರೀಯ ಪ್ರಶಸ್ತಿ ಗೌ... ಪಾತ್ರರಾಗಿದ್ದಾರೆ. 'ತಾಯಿ' ಚಿತ್ರವನ್ನು ಕನ... ನಟಿ ಪ್ರಮೀಳಾ ಜೋಷಾಯ್ ನಿರ್ಮಿಸಿ... ಡಾ: ಜಯಮಾಲಾ 'ತುತ್ತೂರಿ' ಚಿ... ನಿರ್ಮಾಪಕಿ.

ಅತ್ಯುತ್ತಮ ಮನರಂಜನಾ ... ಪ್ರಶಸ್ತಿಯನ್ನು 'ರಂಗ್‌ದೇ ಬಸಂತಿ' ಗಳಿ... ರಾಷ್ಟ್ರೀಯ ಭಾವೈಕ್ಯಕ್ಕಾಗಿ ನೀಡಲಾ... ನರ್ಗೀಸ್ ದತ್ ಪ್ರಶಸ್ತಿಯನ್ನು ತಮಿಳಿನ ... ನಮಿತಲ್' ಚಿತ್ರ, ಸಾಮಾಜಿಕ ವಿಷ... ಆಧಾರಿತ ಚಿತ್ರ ಪ್ರಶಸ್ತಿ ಯನ್ನು ಹಿಂ... 'ಇಕ್ಬಾಲ್' ಚಿತ್ರಗಳಿಸಿವೆ.

ಹಿಂದಿ ಚಿತ್ರ ನಿರ್ದೇಶಕ ಶ್ಯಾಂ ಬೆನ... ಅವರಿಗೆ ಭಾರತೀಯ ಚಿತ್ರರಂಗದ ದ... ಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಲಾಗಿದೆ. ಚಿತ್ರ ನಿರ್ಮಾಣಕ್ಕಾಗಿ ಪದ್ಮಶ್ರೀ, ಪದ್ಮ ಭೂಷಣ ಪ್ರಶಸ್ತಿಗಳ ನಂತರ ಇದೀಗ ಶ್ಯಾಂಬೆನಗಲ್ ಫಾಲ್ಕೆ ಪ್ರಶಸ್ತಿಯನ್ನು ಗಳಿಸಿದ್ದಾರೆ.



ಬ್ಲಾಕ್ ಚಿತ್ರದಲ್ಲಿನ ನಟನೆಗಾಗಿ ಅಮಿ... ಬಚ್ಚನ್ ಉತ್ತಮ ನಟ ಪ್ರಶಸ್ತಿಯ... 'ಪರ್ಜಾನಿಯಾ' ಇಂಗ್ಲೀಷ್ ಚಿತ್ರದ ನಟನ... ಸಾರಿಕಾ ಉತ್ತಮ ನಟಿ ಪ್ರಶಸ್ತಿಯ... ಪಡೆದಿದ್ದಾರೆ. ಮೊದಲ ನಿರ್ದೇಶನದ ಚಿತ್ರ... ನೀಡುವ ಪ್ರಶಸ್ತಿಯನ್ನು ಹಿಂದಿ ಚಿತ್ರದ 'ಪರಿ... ಪ್ರದೀಪ್ ಸರ್ಕಾರ್ ಪ್ರಶಸ್ತಿಯನ್ನು ಪಡೆದಿ...



■ ಜಯ

ಲಕ್ಷಾಂತರ ಜನರನ್ನು ಕೊಂದ ಅಮೆರಿಕಾದ ಅಣುಬಾಂಬ್

ಜಪಾನ್ ದೇಶದ ಹೀರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಅಣು ಬಾಂಬ್ ಹಾಕಿ ಮೊನ್ನೆಯಷ್ಟೆ 62 ವರ್ಷಗಳು ಸಂದಿವೆ. ಎರಡನೇ ವಿಶ್ವ ಮಹಾಯುದ್ಧ ಸಮಯದಲ್ಲಿ ಅಮೇರಿಕಾದ ಅಂದಿನ ಅಧ್ಯಕ್ಷ ಹ್ಯಾರಿ ಟ್ರೂಮನ್‌ರವರು ಜಪಾನ್ ಸಾಮ್ರಾಜ್ಯಶಾಹಿಗೆ ಕಡಿವಾಣ ಹಾಕಲು 1945ರ ಆಗಸ್ಟ್ 6ರಂದು ಹೀರೋಶಿಮಾ ಮೇಲೆ 'ಲಿಟಲ್ ಬಾಯ್' ಎಂಬ ಅಣ್ವಸ್ತ್ರವನ್ನು ಮತ್ತು ಆಗಸ್ಟ್ 9ರಂದು ನಾಗಾಸಾಕಿ ಮೇಲೆ 'ಫ್ಯಾಟ್ ಮ್ಯಾನ್' ಎಂಬ ಅಣು ಬಾಂಬನ್ನು ಹಾಕಲು ಆಜ್ಞಾಪಿಸಿದ್ದರು.

'ಪುಟ್ಟಬಾಲಕ' ನೆಂಬ ಹೆಸರಿದ್ದರೂ ಬಾಂಬ್ ಮಾತ್ರ ದೊಡ್ಡದು ಮತ್ತು ಅಪಾಯಕಾರಿಯದಾಗಿತ್ತು. 10 ಅಡಿ ಎತ್ತರ, ಎರಡೂ ಕಾಲು ಅಡಿ ಅಗಲ ಮತ್ತು 4 ಟನ್ ತೂಕವಿದ್ದ ಈ ಬಾಂಬ್‌ನಲ್ಲಿ 64 ಕೆಜಿ ಗಾತ್ರದ ಯೂರೇನಿಯಂ ವಿಕಿರಣ ವಸ್ತುವಿತ್ತು. ಅದರಲ್ಲಿ ನ್ಯೂಕ್ಲಿಯರ್ ವಿದಳನ ಕ್ರಿಯೆಗೆ ಒಳಗಾದದ್ದು ಬರೆ 0.7 ಕೆ.ಜಿ ಮತ್ತು ಅಣು ಶಕ್ತಿಯಾಗಿ ಪರಿವರ್ತಿತವಾಗಿದ್ದು ಕೇವಲ 0.6 ಗ್ರಾಂ ಮಾತ್ರ.

ವಿಶ್ವದ ಮೊದಲ ಅಣು ಬಾಂಬ್ ಸಂಶೋಧನೆಗಾಗಿ 'ಮ್ಯಾನ್‌ಹಟ್ಟನ್' ಎಂಬ ಯೋಜನೆಯನ್ನು ಅಮೇರಿಕಾ ಮತ್ತು ಕೆನಡಾ ರಾಷ್ಟ್ರಗಳೆರಡೂ ಜಂಟಿಯಾಗಿ ಕೈಗೆತ್ತಿಕೊಂಡವು. ಈ ಯೋಜನೆಯಲ್ಲಿ ಸುಮಾರು 1,30,000 ವಿಜ್ಞಾನಿ-ತಂತ್ರಜ್ಞರು ಕೆಲಸ ಮಾಡಿದ್ದು ಇತಿಹಾಸದಲ್ಲೇ ಹಿಂದೆಂದೂ ಮೀರಿಸಿರದಷ್ಟು 200 ಕೋಟಿ ಡಾಲರ್ ಹಣವನ್ನು ಆಗ ಇದರ ಸಂಶೋಧನೆಗಾಗಿ ಭರಿಸಲಾಗಿತ್ತು.

ಬಾಂಬ್ ಹಾಕಿದ ಎರಡೇ ತಿಂಗಳಲ್ಲಿ 90,000 ಜನ ಹೀರೋಶಿಮಾದಲ್ಲಿ ಸತ್ತರು. ಬಾಂಬ್ ಹಾಕಿದ ತಕ್ಷಣದಲ್ಲೇ ಇಡೀ ನಗರದಲ್ಲಿ ಜ್ವಾಲಾಮುಖಿಯ ಕೆನ್ನಾಲಗೆಯ ಉರಿಗೆ ಸಿಕ್ಕವರಂತೆ ಊಳಿಡುತ್ತಾ ಜನರು ನರಳತೊಡಗಿದರೆ ನಗರದ ಎಲ್ಲ ಸಾರಿಗೆ ಸಂಪರ್ಕ, ದೂರವಾಣಿ ಸಂಪರ್ಕ ಕಡಿತಗೊಂಡು



ಸ್ಮಶಾನ ಮೌನ ಆವರಿಸಿತ್ತು. ಬಾಂಬ್ ಬಿದ್ದ ಸ್ಥಳದಿಂದ ಸುಮಾರು 1.5 ಕಿಲೋಮೀಟರ್‌ವರೆಗೆ ಸುಟ್ಟು ಭಸ್ಮಗೊಂಡು ಸುಮಾರು 3.5 ಕಿಲೋ ಮೀಟರ್ ದೂರದವರೆಗೂ ಬೆಂಕಿಯ ಜ್ವಾಲೆ ಆವರಿಸಿದ್ದವು. ಶೇಕಡಾ 90ರಷ್ಟು ಕಟ್ಟಡಗಳು, ಸೇತುವೆಗಳು ಮತ್ತು ಮನೆಗಳು ಶಿಥಿಲಗೊಂಡವು. ನಂತರದಲ್ಲಿ ಸಾವಿನ ಸಂಖ್ಯೆ 1.50 ಲಕ್ಷ ಮುಟ್ಟಿತು ಮತ್ತು 1990 ರವರೆಗೂ ವಿಕಿರಣ ವಿಷದಿಂದಾಗಿ ಹಲವಾರು ಸಾವುಗಳು ಸಂಭವಿಸುತ್ತಲೇ ಇದ್ದವು. ನಾಗಾಸಾಕಿಯಲ್ಲಿ 70,000 ಸಾವಿರ ಸತ್ತು ಅದಕ್ಕಿಂತಲೂ ಹೆಚ್ಚಿನಷ್ಟು ಗಾಯಗೊಂಡರು.

ಬಾಂಬ್ ಹಾಕುವ ಮುಂಚೆಯೇ ಸೋತು ಸುಣ್ಣವಾಗಿದ್ದ ಜಪಾನ್ ಮೇಲೆ ಅಮೇರಿಕಾ ಅನವಶ್ಯಕವಾಗಿ ಬಾಂಬ್ ಹಾಕಿ ಲಕ್ಷಾಂತರ ಅಮಾಯಕ ಪ್ರಜೆಗಳ ಸಾವಿಗೆ ಕಾರಣವಾಯಿತು. 'ಮಹಾನ್ ಕುಸಿತ' ವೆಂದೇ ಕರೆಯಲಾಗುವ 1929ರ ಷೇರು ಪೇಟೆ ಕುಸಿತದಿಂದಾಗಿ ಅಮೇರಿಕಾದಿಂದ ಆರಂಭಗೊಂಡು ಆಧು... ಕೈಗಾರಿಕಾ ರಾಷ್ಟ್ರಗಳಲ್ಲೆಲ್ಲ ತಲಾದಾಯ ಕ್ಷೀಣಗೊಂಡು, ಕೈಗಾರಿಕೆ, ಕೃಷಿ ಉತ್ಪನ್ನಗ... ನೆಲಕಚ್ಚಿ ಜನತೆಯಲ್ಲಿ ಅಲ್ಲೋಲ ಕಲ್ಲೋ... ಉಂಟು ಮಾಡಿದವು. ಜನರ ಅಸಹನೆಯ... ಬಳಸಿಕೊಂಡು ಅಧಿಕಾರ ಹಿಡಿದ ಹಿಟ್ಲರ್‌ನಂತಹ ಸರ್ವಾಧಿಕಾರಿಗಳು ವಿಶ್ವ... ರಣಾಂಗಣದಲ್ಲಿ ಕತ್ತಿ ಝಳಪಿಸತೊಡಗಿದರು... ವಿಶ್ವದ ಭೂಭಾಗಗಳ ಮೇಲೆ ಯಾರ ಯಜಮಾನಿಕೆ ಸ್ಥಾಪಿತವಾಗಬೇಕು ಎಂಬ ಪ್ರಶ್ನೆಯ ಇತ್ಯರ್ಥಕ್ಕಾಗಿ ನಡೆದ ದೊಡ್ಡ ಕಾದಾಟವಾಗಿತ್ತದು.

JANASHAKTHI KANNADA VARA PATRIKE : Printed by G.N.NAGARAJ, No 12, 18th Cross, S.R.Nagar, BANGALORE-560027 Published by G.N.NAGARAJ No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE-560027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027 Editor: S.Y.GURUSHANTH